# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 24 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


47

ಸಂಪುಟ: 47 | ಸಂಚಿಕೆ: 69 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಮಾನಸಗಂಗೋತ್ರಿಯ ಗಿಡ ಮರಗಳ ಸಂರಕ್ಷಕ ಮೇಸ್ತ್ರಿ ಮಾದಯ್ಯರಿಗೆ ಪರಿಸರ ಪ್ರಜ್ಞಾ 2026 ಪ್ರಶಸ್ತಿ



ಬೋಧಿ ಸೊಸೈಟಿ ಫಾರ್ ಡೆವಲಪ್ಮೆಂಟ್‌ನ ಎಂ.ಎಸ್.ಚಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.23(ಜಿಎ)–ಬೋಧಿ ಸೊಸೈಟಿ ಫಾರ್ ಡೆವಲಪ್ಮೆಂಟ್ ವಿಶ್ವ ಪರಿಸರ ದಿನದ ನಿಮಿತ್ತ ಕೊಡಮಾಡುವ ಪರಿಸರ ಪ್ರಜ್ಞಾ 2026ರ ಪ್ರಶಸ್ತಿಗೆ ರಾಷ್ಟ್ರಕವಿ ಕುವೆಂಪು ಕನಸಿನ ಮಾನಸ ಗಂಗೋತ್ರಿ ಯಲ್ಲಿ ಗಿಡ ಮರಗಳ ಬೆಳೆಸಿ ಮೂರು ದಶಕಗಳ ನಿಸ್ವಾರ್ಥ ಸೇವೆ ಸಲ್ಲಿಸಿರುವ ಮೇಸ್ತ್ರಿ ಮಾದಯ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಂ.ಎಸ್.ಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆಯು ಕಳೆದ 5 ವರ್ಷಗಳಿಂದ ಪರಿಸರ ಸಂರಕ್ಷಣೆ ಕಾರ್ಯದಲ್ಲಿ ನಿರತವಾಗಿದೆ. ಸಾವಿರಾರು ಗಿಡಗಳನ್ನು ನೆಡಲಾಗಿದೆ. 2ನೇ ವರ್ಷದ ಪ್ರಶಸ್ತಿಯನ್ನು 94 ವರ್ಷದ ಮಾದಯ್ಯ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್, ಬೋಧಿ ವೃಕ್ಷ ಸೊಸೈಟಿ ಫಾರ್ ಡೆವಲಪ್ಮೆಂಟ್ ಕಾರ್ಯದರ್ಶಿ ಡಾ.ಮಾದೇಗೌಡ ಸಿ. ಒಳಗೊಂಡ ಆಯ್ಕೆ ಸಮಿತಿ ಮೇಸ್ತ್ರಿ ಮಾದಯ್ಯ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದರು.

ಕಾಂಗ್ರೆಸ್ ಮುಖಂಡ ಉತ್ತನಹಳ್ಳಿ ಶಿವಣ್ಣ ಮಾತನಾಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಜೂ.24ರಂದು ಬೆಳಗ್ಗೆ ಬುಧವಾರ 11.30ಕ್ಕೆ ಮಾನಸಗಂಗೋತ್ರಿ ಬಿಎಂಶ್ರೀ ಸಭಾಂಗಣದಲ್ಲಿ ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಗಿಡ ನೆಡಲಿದ್ದಾರೆ. ವನ್ಯಜೀವಿ ತಜ್ಞ ಕೃಪಾಕರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಪ್ರೊ.ನಂಜಯ್ಯ ಹೊಂಗನೂರು ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರೊ.ಚಂದ್ರಶೇಖರ್, ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಭಾಗವಹಿಸಲಿದ್ದಾರೆ ಎಂದರು.

ಕಾರ್ಯಕ್ರಮ ಸಂಚಾಲಕ, ಲೇಖಕ ಡಾ.ಎಚ್.ಪಿ.ಮಂಜು ಮಾತನಾಡಿ, ಮಾನಸಗಂಗೋತ್ರಿಯಲ್ಲಿ ಕಾಣುತ್ತಿರುವ ಅದ್ಭುತ ಪರಿಸರ ನಿರ್ಮಾಣದ ಹಿಂದೆ ಮೇಸ್ತ್ರಿ ಮಾದಯ್ಯ ಅವರ ಶ್ರಮ ಅಪಾರವಾಗಿದೆ. ಕನಿಷ್ಠ ಸೌಕರ್ಯವೂ ಇಲ್ಲದ ಕಾಲದಲ್ಲಿ ಕಾಯಕನಿಷ್ಠೆಯಿಂದ ಸುಂದರವಾದ ಕ್ಯಾಂಪಸ್ ನಿರ್ಮಾಣವಾಗಿದೆ. ವಿಶ್ವ ಪರಿಸರ ದಿನದಂದು ಹಿರಿಯರನ್ನು ಗೌರವಿಸಲಾಗುತ್ತಿದೆ ಎಂದರು.

ಪರಿಸರ ದಿನದ ನಿಮಿತ್ತ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಆವರಣದಲ್ಲಿ ಸ್ವಚ್ಛತಾ ಕಾರ್ಯ ಮಾಡಿದ್ದೇವೆ. ಕಾರ್ಯಕ್ರಮದ ದಿನದಂದು ಗಿಡ ನೆಡಲಾಗುತ್ತಿದೆ. ಸಂಸ್ಥೆಯ ನೂತನ ನಿರ್ದೇಶಕರಾದ ಪ್ರೊ.ನಂಜಯ್ಯ ಹೊಂಗನೂರು ಪರಿಸರ ಸಂರಕ್ಷಣೆಯ ಹಲವು ಕಾರ್ಯಕ್ರಮ ರೂಪಿಸಲು ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು.

# ರಾಜ್ಯದಲ್ಲಿ ಖಾಲಿ ಇರುವ 56,432 ಹುದ್ದೆಗಳ ಶೀಘ್ರವೇ ಭರ್ತಿ ಮಾಡಿ

### ಎಐಡಿವೈಒಯಿಂದ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಕೆ




ಮನವಿ ಪತ್ರವನ್ನು ಮೈಸೂರು ಜಿಲ್ಲಾ ಅಪರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು.

ಮೈಸೂರು, ಜೂ.23(ಜಿಎ)–ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56,432 ಹುದ್ದೆಗಳಿಗೆ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಿ, ಪಾರದರ್ಶಕ ನೇಮಕಾತಿ ಮಾಡುವಂತೆ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್(ಎಐಡಿವೈಒ) ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

ಉದ್ಯೋಗಾಕಾಂಕ್ಷಿ ಯುವಜನರ ಸತತ ಹೋರಾಟಗಳ ಫಲವಾಗಿ ಕಳೆದ ಡಿಸೆಂಬರ್ ಚಳಿಗಾಲದ ಅಧಿವೇಶನದಲ್ಲಿ 56,432 ಹುದ್ದೆಗಳಿಗೆ ಅನುಮೋದನೆ ನೀಡಿದ್ದು ಆರು ತಿಂಗಳುಗಳಾದರೂ ಕೇವಲ ಕೆಲವೇ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ವಿವಿಧ ನೆಪಗಳನ್ನು ನೀಡುತ್ತಾ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡಲಾಗುತ್ತಿದೆ. ಜೊತೆಗೆ ವಿವಿಧ ಇಲಾಖೆಗಳ ಸಚಿವರು ಅತೀ ಶೀಘ್ರದಲ್ಲಿ ನೇಮಕಾತಿ ಮಾಡುತ್ತೇವೆ ಎಂದು ದಿನಕ್ಕೊಂದು ಹೇಳಿಕೆಗಳನ್ನು ನೀಡುತ್ತಿರುವುದು ಉದ್ಯೋಗಾಕಾಂಕ್ಷಿಗಳಲ್ಲಿ ಭ್ರಮನಿರಸನ ಉಂಟು ಮಾಡಿದೆ ಎಐಡಿವೈಒ ಸಂಘಟನೆಯು ಮನವಿ ಪತ್ರದಲ್ಲಿ ತಿಳಿಸಿದೆ.

ಉದ್ಯೋಗಾಕಾಂಕ್ಷಿಗಳು ವಯೋಮಿತಿಯನ್ನು ಮೀರುತ್ತಿದ್ದು ಇದೇ ರೀತಿ ಮುಂದುವರೆದರೆ ಹೋರಾಟಗಳ ಪ್ರತಿಫಲವಾಗಿ ರಾಜ್ಯ ಸರ್ಕಾರವು ನೇಮಕಾತಿಗಳಿಗೆ ನೀಡಿರುವ ಐದು ವರ್ಷಗಳ ವಯೋಮಿತಿ ಸಡಿಲಿಕೆಯು ಉಪಯೋಗಕ್ಕೆ ಬಾರದಂತಾಗುತ್ತದೆ. ಇದರಿಂದ ಉದ್ಯೋಗಾಕಾಂಕ್ಷಿಗಳು ಸರ್ಕಾರದ ಘೋಷಣೆಗಳನ್ನು ನಂಬದೆ, ವಿಶ್ವಾಸ ಕಳೆದುಕೊಂಡು ಮತ್ತೆ ಹೋರಾಟಕ್ಕಿಳಿಯಲಿದ್ದಾರೆ. ಆದ್ದರಿಂದ ರಾಜ್ಯಸರ್ಕಾರ ತಾನು ನುಡಿದಂತೆ 56,432 ಹುದ್ದೆಗಳಿಗೆ ಈ ಕೂಡಲೇ ಅಧಿಸೂಚನೆಯನ್ನು ಹೊರಡಿಸಬೇಕು ಎಂದು ಆಗ್ರಹಿಸಿದರು.

ಇತ್ತೀಚೆಗೆ ಪೊಲೀಸ್ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ದುಬಾರಿ ಪರೀಕ್ಷಾ ಶುಲ್ಕವನ್ನು ರೂ.750ಕ್ಕೆ ನಿಗದಿಗೊಳಿಸಲಾಗಿದೆ. ಈ ಮೊದಲು ರೂ. 400 ಮಾತ್ರ ಇತ್ತು. ಏಕಾಏಕಿ ಪರೀಕ್ಷಾ ಶುಲ್ಕವನ್ನು ದುಪ್ಪಟ್ಟುಗೊಳಿಸಲಾಗಿದೆ. ಕಲ್ಯಾಣ ಕರ್ನಾಟಕ ವಿಭಾಗಕ್ಕೆ ಮತ್ತು ರಾಜ್ಯದ ಇತರ ಜಿಲ್ಲೆಗಳ ಹುದ್ದೆಗೆಂದು ಎರಡೂ ಕಡೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವೇ ರೂ.1500 ಆಗುತ್ತದೆ. ಈಗಾಗಲೇ ನಿರುದ್ಯೋಗದಿಂದ ಬಳಲಿರುವ ಯುವಜನರಿಂದ ಅರ್ಜಿ ಶುಲ್ಕದ ಹೆಸರಿನಲ್ಲಿ ಈ ರೀತಿ ಹಣ ವಸೂಲಿ ಮಾಡುವುದು ಯಾವ ರೀತಿಯಿಂದಲೂ ಸೂಕ್ತವಲ್ಲ. ಆದ್ದರಿಂದ ಪೊಲೀಸ್ ನೇಮಕಾತಿ ಅರ್ಜಿ ಶುಲ್ಕವನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ತೀರ್ಮಾನಿಸಿದಂತೆ 56,432 ಹುದ್ದೆಗಳಿಗೆ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಎಲ್ಲಾ ರೀತಿಯ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಹಾಗೂ ಪಾರದರ್ಶಕ ನೇಮಕಾತಿಗಾಗಿ ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಪಿ.ಸಿ. ಹೋತಾ ಸಮಿತಿಯ ವರದಿಯನ್ನು ತಕ್ಷಣವೇ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಎಲ್ಲಾ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಮೈಸೂರು ಜಿಲ್ಲಾ ಅಪರ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು. ಈ ವೇಳೆ ಎಐಡಿವೈಒ ಮೈಸೂರು ಜಿಲ್ಲಾ ಕಾರ್ಯದರ್ಶಿ ಸುಮಾ, ಸದಸ್ಯರಾದ ನೀತುಶ್ರೀ, ಪೂರ್ಣಿಮಾ, ರಣಜಿತ್, ಉದ್ಯೋಗಾಕಾಂಕ್ಷಿಗಳಾದ ಶಿವಾನಂದ, ಅನೂಪ, ಭಾಸ್ಕರ, ರಘು ಇದ್ದರು.

### ಅಭಿನಂದನೆ




ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಬೆಂಗಳೂರಿನ ಸಿಎಂ ಅಧಿಕೃತ ನಿವಾಸದಲ್ಲಿ ಅಭಿನಂದಿಸಿದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.23–ಕರ್ನಾಟಕ ದಲಿತ ವೇದಿಕೆ ವತಿಯಿಂದ ಜುಲೈ 5ರಂದು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 75 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ವಿದ್ಯಾರ್ಥಿಗಳು ಅಂಕ ಪಟ್ಟಿಯ ನಕಲು ಪ್ರತಿ, ಜಾತಿ ದೃಢೀಕರಣ ಪತ್ರದ ಪ್ರತಿ ಹಾಗೂ ಆಧಾರ್ ಕಾರ್ಡ್ ನೊಂದಿಗೆ ಸಲ್ಲಿಸಲು ಕೋರಲಾಗಿದೆ ಮಾಹಿತಿಗೆ ಮೊ. 9880716728, 97400 83205 ಸಂಪರ್ಕಿಸಬಹುದು.

## ಕೌಸ್ತುಭ್ ತೇಜ್‌ಕುಮಾರ್‌ಗೆ ಅಂಡರ್–9 ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್ ಅಪ್




ಮೈಸೂರು, ಜೂ. 23–ಮೈಸೂರಿನ ಯುವ ಚೆಸ್ ಪ್ರತಿಭೆ ಕೌಸ್ತುಭ್ ತೇಜ್‌ಕುಮಾರ್ ಬೆಂಗಳೂರಿನಲ್ಲಿ ನಡೆದ ರಾಜ್ಯ ಅಂಡರ್–9 ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ, 9 ಸುತ್ತುಗಳಲ್ಲಿ 8 ಅಂಕಗಳನ್ನು ಗಳಿಸಿ ರನ್ನರ್ ಅಪ್ ಸ್ಥಾನ ಪಡೆದುಕೊಂಡಿದ್ದಾರೆ.

ಕೌಸ್ತುಭ್ ಈ ಹಿಂದೆ ರಾಜ್ಯ ಅಂಡರ್–7 ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. ಅಲ್ಲದೆ ರಾಷ್ಟ್ರೀಯ ಶಾಲಾ ಚೆಸ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನಗಳಿಸುವ ಮೂಲಕ ರಾಷ್ಟ್ರ ಮಟ್ಟದಲ್ಲೂ ಸಾಬೀತುಪಡಿಸಿದ್ದಾರೆ. ಕೌಸ್ತುಭ್, ಮೈಸೂರಿನ ವಿಜಯನಗರದಲ್ಲಿರುವ ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ವಿದ್ಯಾರ್ಥಿಯಾಗಿದ್ದು, ಕರ್ನಾಟಕದ ಮೊದಲ ಗ್ರಾಂಡ್ ಮಾಸ್ಟರ್ ಆಗಿರುವ ಎಂ.ಎಸ್. ತೇಜ್‌ಕುಮಾರ್ ಅವರ ಪುತ್ರ.

## ನಾಳೆ ವಿಶೇಷ 'ಸ್ವಾತಿ' ಪೂಜೆ





ಮೈಸೂರು,ಜೂ.23–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜೂ.25ರಂದು ಗುರುವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 8ಕ್ಕೆ ಪ್ರಾಕಾರೋತ್ಸವ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ಖಾಸಗೀಕರಣದ ಅರ್ಜಿ ತಿರಸ್ಕರಿಸಿ ರಾಜ್ಯ ರೈತ ಸಂಘ–ರೈತ ಬಣದ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ–ರೈತ ಬಣದ ಅಧ್ಯಕ್ಷ ಕೃಷ್ಣೇಗೌಡ ಇಂಗಲಗುಪ್ಪೆ ಮಾತನಾಡಿದರು.

ಮೈಸೂರು, ಜೂ.23(ಜಿಎ)–ರಾಜ್ಯದ ವಿದ್ಯುತ್ ಸರಬರಾಜು ಸಂಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಿದ್ದರೂ ಟಾಟಾ ಪವರ್ ಸಂಸ್ಥೆ ವಿದ್ಯುತ್ ಸರಬರಾಜು ಪರವಾನಗಿ ಪಡೆಯಲು ಪ್ರಸ್ತಾವನೆ ಸಲ್ಲಿಸಿರುವುದು ಖಂಡನೀಯ. ಆದ್ದರಿಂದ ರಾಜ್ಯ ಸರ್ಕಾರ ಅದನ್ನು ತಿರಸ್ಕರಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ–ರೈತ ಬಣದ ಅಧ್ಯಕ್ಷ ಕೃಷ್ಣೇಗೌಡ ಇಂಗಲಗುಪ್ಪೆ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗಿ ಕಂಪನಿಗಳಿಗೆ ನೀಡುವ ಹುನ್ನಾರ ನಡೆಸುತ್ತಿರುವುದರ ಹಿಂದೆ ಕಿಕ್‌ಬ್ಯಾಕ್ ಪಡೆದಿರುವ ಶಂಕೆಯಿದೆ. ಇದು ಕೃಷಿ ಮೇಲೆ ದುಷ್ಪರಿಣಾಮ ಬೀರುತ್ತದೆ. ರೈತರು ಬೆಳೆ ಬೆಳೆಯಲು ದುಪ್ಪಟ್ಟು ದರ ನೀಡಿ ವಿದ್ಯುತ್ ಖರೀದಿಸಬೇಕಾದ ಪರಿಸ್ಥಿತಿ ಬರುತ್ತದೆ. ಇದರೊಡನೆ ಯುವಕರು ಕೃಷಿ ತ್ಯಜಿಸಿ ಪಟ್ಟಣಗಳಿಗೆ ವಲಸೆ ಹೋಗಬೇಕಾದ ಪರಿಸ್ಥಿತಿ ತಲೆದೋರುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ವಿದ್ಯುತ್ ದರ ಏರಿಕೆಯಾಗುವ ಸಾಧ್ಯತೆಯಿದ್ದು, ಗೃಹಜ್ಯೋತಿ, ಕೃಷಿ ಪಂಪ್‌ಸೆಟ್‌ಗಳಿಗೆ ನೀಡುವ ಉಚಿತ ವಿದ್ಯುತ್, ವಿವಿಧ ಸಹಾಯಧನ ಯೋಜನೆಗಳಿಗೆ ಧಕ್ಕೆಯುಂಟಾಗುತ್ತದೆ. ಖಾಸಗಿ ಕಂಪನಿ ಗಳು ಯಾವುದೇ ನಿರ್ಧಾರ ಕೈಗೊಳ್ಳ ಬಹುದಾದ ಸಾಧ್ಯತೆಯಿದ್ದು, ಮನ ಬಂದಂತೆ ದರ ಹೆಚ್ಚಿಸಬಹುದಾಗಿದೆ. ಇದರೊಡನೆ ಗ್ರಾಮೀಣ ಪ್ರದೇಶ ನಿರ್ಲಕ್ಷ್ಯ ಮಾಡುವ ಸಾಧ್ಯತೆ ಇರುವುದರೊಡನೆ, ಇಲಾಖೆಯ ನೇಮಕಾತಿಗಳಲ್ಲಿ ಮೀಸಲಾತಿ ವ್ಯವಸ್ಥೆಗೆ ಹಿನ್ನಡೆಯುಂಟಾಗುತ್ತದೆ ಎಂದು ಎಚ್ಚರಿಸಿದರು.

ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಿರುವ ಸಾವಿರಾರು ಕೋಟಿ ರೂ. ಮೌಲ್ಯದ ಆಸ್ತಿಗಳು ಖಾಸಗಿ ಕಂಪನಿಗಳ ಪಾಲಾಗುವ ಸಾಧ್ಯತೆಯಿದೆ. ಆದ್ದರಿಂದ ಟಾಟಾ ಕಂಪನಿಯ ಅರ್ಜಿ ತಿರಸ್ಕರಿಸಬೇಕು. ಇಲ್ಲದಿದ್ದರೆ ತೀವ್ರ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್ ರಾಮೇಗೌಡ, ಮಹಾಲಿಂಗು, ಶಿವಣ್ಣ, ಅರಸನಕೆರೆ ಕೆಂಪರಾಜು ಉಪಸ್ಥಿತರಿದ್ದರು.

## 'ಸಾತ್ವಿಕಿ ರಂಗಯಾತ್ರೆ–2026' ಕಾರ್ಯಕ್ರಮ

ಮೈಸೂರು, ಜೂ. 23–ಮೈಸೂರಿನ ಸಾತ್ವಿಕಿ ಫೌಂಡೇಶನ್ ವತಿಯಿಂದ 'ಸಾತ್ವಿಕಿ ರಂಗಯಾತ್ರೆ–2026' ಕಾರ್ಯಕ್ರಮವನ್ನು ಜೂ.25ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ. ಯೋಜನೆಯ ಉದ್ಘಾಟನೆಯನ್ನು ಶಾಸಕ ಟಿ.ಎಸ್. ಶ್ರೀವತ್ಸ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ಎಂ.ಡಿ.ಗೋಪಿನಾಥ್, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸದ್ವಿದ್ಯಾ ಸಂಸ್ಥೆಯ ಮುಖ್ಯೋಪಾಧ್ಯಾಯರಾದ ರಾಮಚಂದ್ರಭಟ್, ಮಮತಾ ಹಾಗೂ ಸಾತ್ವಿಕಿ ಫೌಂಡೇಶನ್ ಅಧ್ಯಕ್ಷರಾದ ಸರಸ್ವತಿ ಉಪಸ್ಥಿತರಿರುತ್ತಾರೆ. ರಂಗಯಾತ್ರೆಯ ಅಂಗವಾಗಿ 'ಕಿಷ್ಕಿಂದ ಕಲಹ' ನಾಟಕವನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ಪ್ರದರ್ಶಿಸಲಾಗುತ್ತಿದೆ.

### ಚಿತ್ರಕಲಾ ಸ್ಪರ್ಧೆ ವಿಜೇತೆ



ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯ ಮೈಸೂರು ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಸಹಯೋಗದೊಂದಿಗೆ ಶಾಲಾ ಮಕ್ಕಳಿಗಾಗಿ ಅಂತರಾಷ್ಟ್ರೀಯ ಗ್ರೀನ್ ಪೋಸ್ಟರ್ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ನಗರದ ವಿವಿಧ ಶಾಲಾ ಕಾಲೇಜುಗಳಿಂದ 2000 ವಿದ್ಯಾರ್ಥಿಗಳು ಭಾಗ ವಹಿಸಿದ್ದರು. ಮೈಸೂರಿನ ಅನಂತಗೀತ ವಿದ್ಯಾಲಯದ 9ನೇ ತರಗತಿ ವಿದ್ಯಾರ್ಥಿನಿ ತನ್ಮಯಿ 4ನೇ ಸ್ಥಾನ ಪಡೆದು ನಗದು ಬಹುಮಾನದೊಂದಿಗೆ ಪ್ರಮಾಣ ಪತ್ರ ಸ್ವೀಕರಿಸಿದರು. ವಿಜೇತ ವಿದ್ಯಾರ್ಥಿನಿಯೊಂದಿಗೆ ಶಾಲೆಯ ಮುಖ್ಯ ಶಿಕ್ಷಕ ಲೋಕೇಶ ಹೆಚ್.ಪಿ., ಚಿತ್ರಕಲಾ ಶಿಕ್ಷಕಿ ಸುಲೋಚನ ಚಿತ್ರದಲ್ಲಿದ್ದಾರೆ.

## ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಯೋಗ ದಿನಾಚರಣೆ



ಮೈಸೂರಿನ ಜೆ.ಪಿ.ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಶಾಲಾ ಆವರಣದಲ್ಲಿ ಆಚರಿಸಲಾಯಿತು.

ಮೈಸೂರು, ಜೂ. 23– ಮೈಸೂರಿನ ಜೆ.ಪಿ. ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನವನ್ನು ಶಾಲಾ ಆವರಣದಲ್ಲಿ ಆಚರಿಸಲಾಯಿತು.

ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಉತ್ಸಾಹದಿಂದ ಭಾಗವಹಿಸಿದರು. ಯೋಗ ಶಿಕ್ಷಕರಾದ ಶ್ರೀಮತಿ ಶಿಲ್ಪಾ ಎಂ.ಎಸ್ ಮಾರ್ಗದರ್ಶನದಲ್ಲಿ ವಿವಿಧ ಯೋಗಾಸನಗಳು, ಪ್ರಾಣಾಯಾಮದ ಅಭ್ಯಾಸಗಳನ್ನು ನಡೆಸಲಾಯಿತು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅರ್ಚನಾ ಎಸ್.ಎನ್ ಯೋಗದ ಮಹತ್ವವನ್ನು ವಿವರಿಸಿ, ದೈಹಿಕ ಹಾಗೂ ಮಾನಸಿಕ ಆರೋಗ್ಯದ ಅಭಿವೃದ್ಧಿಗಾಗಿ ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ವಿದ್ಯಾರ್ಥಿಗಳು ವಿವಿಧ ಯೋಗಾಸನಗಳ ಭಂಗಿಗಳನ್ನು, ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಯೋಗದ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳುವ ಸಂಕಲ್ಪದೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದರ ಜೊತೆಗೆ ಯೋಗದ ಮಹತ್ವವನ್ನು ಸಾರುವಲ್ಲಿ ಯಶಸ್ವಿಯಾಯಿತು.

## ಸಂಸ್ಕೃತಿ ವುಮೆನ್ ಸ್ಪಿಯರ್‌ನಿಂದ 'ಸ್ಕ್ರ್ಯಾಪ್ ಟು ಸ್ಪಾರ್ಕ್' ಸ್ಪರ್ಧೆ ಯಶಸ್ವಿ

ಮೈಸೂರು,ಜೂ.23–ಸಂಸ್ಕೃತಿ ವುಮೆನ್ ಸ್ಪಿಯರ್ ವತಿಯಿಂದ ತ್ಯಾಜ್ಯ ವಸ್ತುಗಳನ್ನು ಉಪಯುಕ್ತ ಉತ್ಪನ್ನಗಳಾಗಿ ಪರಿವರ್ತಿಸುವ ಪರಿಕಲ್ಪನೆಯ ಆಧಾರದ ಮೇಲೆ 'ಸ್ಕ್ರ್ಯಾಪ್ ಟು ಸ್ಪಾರ್ಕ್' ಎಂಬ ಸೃಜನಾತ್ಮಕ ಸ್ಪರ್ಧೆಯನ್ನು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿತ್ತು.

ಸುಮಾರು 40 ಉತ್ಸಾಹಭರಿತ ಪ್ರೌಢಶಾಲಾ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ತ್ಯಾಜ್ಯ ವಸ್ತುಗಳನ್ನು ನವೀನ ಹಾಗೂ ಉಪಯುಕ್ತ ಉತ್ಪನ್ನಗಳಾಗಿ ರೂಪಿಸುವ ಮೂಲಕ ತಮ್ಮ ಅದ್ಭುತ ಸೃಜನಶೀಲತೆಯನ್ನು ಪ್ರದರ್ಶಿಸಿದರು.

ಈ ಸ್ಪರ್ಧೆಯು ಯುವ ಮನಸ್ಸುಗಳಲ್ಲಿ ಮರುಬಳಕೆ, ಪುನರುಪಯೋಗ ಮತ್ತು ಪರಿಸರ ಸಂರಕ್ಷಣೆಯ ಮಹತ್ವವನ್ನು ಒತ್ತಿಹೇಳಿತು.



ಸಂಸ್ಕೃತಿ ವುಮೆನ್ ಸ್ಪಿಯರ್ ವತಿಯಿಂದ 'ಸ್ಕ್ರ್ಯಾಪ್ ಟು ಸ್ಪಾರ್ಕ್' ಎಂಬ ಸೃಜನಾತ್ಮಕ ಸ್ಪರ್ಧೆಯನ್ನು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿತ್ತು.


ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದ ವಿಜೇತರಿಗೆ ನಗದು ಬಹುಮಾನಗಳನ್ನು ನೀಡಲಾಯಿತು. ಜೊತೆಗೆ, ಎಲ್ಲಾ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಭಾಗವಹಿಸುವಿಕೆ ಪ್ರಮಾಣ ಪತ್ರಗಳನ್ನು ಹಾಗೂ ವಿಜೇತರಿಗೆ ಅವರ ಶ್ರಮ ಮತ್ತು ಸೃಜನಶೀಲತೆಯನ್ನು ಗೌರವಿಸುವ ಸಲುವಾಗಿ ಪ್ರತಿಭಾ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಪರಿಸರ ಜಾಗೃತಿ ಅಭಿಯಾನದ ಅಂಗವಾಗಿ ವಿಷ್ಣು ಪ್ರಿಯಾ ಅವರಿಂದ ಗೊಬ್ಬರ ತಯಾರಿಕೆ ಕುರಿತು ವಿಶೇಷ ಪ್ರಾತ್ಯಕ್ಷಿಕೆ ನಡೆಸಲಾಯಿತು. ಈ ಅಧಿವೇಶನವು ಪ್ರಕೃತಿ ಸಂರಕ್ಷಣೆ, ತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರ ಜೀವನಶೈಲಿಯ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಅರಿವು ಮೂಡಿಸಿತು.

ಸಂಸ್ಕೃತಿ ವುಮೆನ್ ಸ್ಪಿಯರ್ ಸಂಸ್ಥೆಯ ಅಧ್ಯಕ್ಷೆ ಶ್ರೀದೇವಿ ಎಸ್.ಭೂಪಾಳಂ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅತ್ಯುತ್ತಮ ಸಹಕಾರ ಮತ್ತು ಸಮನ್ವಯ ನೀಡಿದ ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಕವಿತಾ ಹಾಗೂ ಶಿಕ್ಷಕ ವೃಂದಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷೆ ಶ್ರೀದೇವಿ ಎಸ್. ಭೂಪಾಳಂ, ಖಜಾಂಚಿ ನಂದ ಲೋಕೇಶ್, ಉಪಾಧ್ಯಕ್ಷೆ ಅರ್ಚನಾ ಬಸವರಾಜ್ ಹಾಗೂ ನಿರ್ದೇಶಕರಾದ ಸಪ್ನಾ ಮಧುಸೂದನ್, ಶ್ವೇತಾ ಸ್ವರೂಪ್, ಆಶಾ, ಕೃತಿ, ಸುಷ್ಮಾ ಕಾರ್ತಿಕ್, ವೈಷ್ಣವಿ, ನಿಜಾ, ಅಮೂಲ್ಯ, ವಿಷ್ಣು ಪ್ರಿಯಾ, ಐಶ್ವರ್ಯ ಮತ್ತು ವಿನಿಷ್ಕಾ ಇನ್ನಿತರರು ಉಪಸ್ಥಿತರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**24.06.2026 ಬುಧವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನು ನೋವು ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ. ಬೆಳಗ್ಗೆ 9.30 ರಿಂದ.

■ **ಮರಿಮಲ್ಲಪ್ಪ ಪ್ರೌಢಶಾಲೆ:** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್.ಪಂಚಾಕ್ಷರಸ್ವಾಮಿ, ಮುಖ್ಯ ಆಹ್ವಾನಿತರು: ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥ ಎನ್.ಕೇಶವಮೂರ್ತಿ, ಸನ್ಮಾನಿತರು: ಲೆಫ್ಟಿನೆಂಟ್ ಕರ್ನಲ್ ಎಂ.ತೇಜಸ್, ಉಪಸ್ಥಿತರು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ. ಉದಯಕುಮಾರ್, ಬಿಇಓ ಕೃಷ್ಣ, ಮುಖ್ಯೋಪಾಧ್ಯಾಯಿನಿ ಮಮತ, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಭಗಂದರ (ಫಿಸ್ತೂಲ), ಚರ್ಮದ ಕಾಯಿಲೆ, ಮೂಗು ಸೋರುವಿಕೆ, ಕಟ್ಟಿದ ಮೂಗು, ಸೀನುವುದು, ಗಂಟಲು ನೋವು, ತಲೆ ನೋವು ಸಮಸ್ಯೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್:** ವಾರ್ಷಿಕೋತ್ಸವದ ಪ್ರಯುಕ್ತ ಮರೆಯದ ಮಹಾ ಗಾಯಕರು ಶೀರ್ಷಿಕೆಯಡಿ ಕನ್ನಡ, ಹಿಂದಿ ಹಳೆಯ ಹಾಡುಗಳ ಸಂಗೀತ ಸಂಜೆ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಡಿ.ರವಿಶಂಕರ್, ಅಧ್ಯಕ್ಷತೆ: ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ.ಭೈರಿ, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಪಾಲಿಕೆ ಮಾಜಿ ಸದಸ್ಯ ಆರ್.ಸೋಮಸುಂದರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪಾಲಿಕೆ ಮಾಜಿ ಸದಸ್ಯ ಪಿ.ದೇವರಾಜು, ವಕೀಲ ಎಸ್.ಜೆ. ಮದ್ವರಾಜ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿವಿ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನಾ ಮತ್ತು ವಿಸ್ತೃತ ಕೇಂದ್ರ:** ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಮಕಾಲೀನ ಭಾರತ: ಪುನರ್ವಿಮರ್ಶೆ–ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಉಪ ಐಜಿಪಿ ಹನುಮಂತರಾಯ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕೇಂದ್ರದ ನಿರ್ದೇಶಕ ಡಾ. ಸಬೀರ್ ಅಹಮದ್ ಮುಲ್ಲಾ, ಪ್ರಾಸ್ತಾವಿಕ ನುಡಿ: ಹಿರಿಯ ಕವಿ ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿ, ಬೆಳಗ್ಗೆ 11ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ –ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, 6.40 ಪದಸಂಸ್ಕೃತಿ– ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ತಂತ್ರಜ್ಞಾನ ತರಂಗ–ಅಆಇ ಜೊತೆ, ಪ್ರಾಯೋಜಕರು– Center for Development of Advanced Computing, Bengaluru, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ– ಜಯಂತ ಕುಮಾರ್ ದಾಸ್ – ಸಿತಾರ್ ವಾದನ ಹಾಗೂ ಗೀತಾ ಶ್ಯಾಮಾ, ಪ್ರಕಾಶ್–ವೀಣಾವಾದನ ಜುಗಲ್ ಬಂದಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಸರಳಾ ದೇಸಾಯಿ, 12.45 ಜನಪದ ಸಂಗೀತ ನಾಗಮ್ಮ ಮತ್ತು ಸಂಗಡಿಗರಿಂದ ದೊಣ್ಣಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳ –ಶೈಲಾ ಸಿದ್ದರಾಮಪ್ಪ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ.ವಿ. ರವಿ–ವೈಯೋಲಿನ್ ವಾದನ, 4.00 ಮಹಿಳಾರಂಗ, ಕವನ ಮಾಲೆ–ಮಹಿಳೆಯರ ಸ್ವರಚಿತ ಕವನಗಳ ವಾಚನ. ಪ್ರಸ್ತುತಿ–ದಿಗ್ವಿಜಯ್ .ಬಿ, 4.30 ಹಿಂದಿ ಚಿತ್ರಗೀತೆಗಳು, 4.45ಭಾಷಾಭಾರತಿ – ವಿಶೇಷ ಹಿಂದಿ ಪಾಠ ಸರಣಿ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ರೇಷ್ಮೆರಂಗ– ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ ಮರಗಡ್ಡಿ ಪದ್ಧತಿಯಲ್ಲಿ ಹಿಪ್ಪನೇರಳೆ ತೋಟದ ಸ್ಥಾಪನೆ ಹಾಗೂ ನಿರ್ವಹಣೆ ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಕೆ.ಸುರೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಿ.ಕೆ. ಪಟ್ಟಮಾಳ್–ಹಾಡುಗಾರಿಕೆ, 8.30 ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ–ಟಿ.ಎಂ. ನರಸಿಂಹನಾಯಕ ಮತ್ತು ಸಂಗಡಿಗರಿಂದ ಕೋಲಾಟದ ಪದಗಳು, 10.30 ಸವಿನೆನಪು

ಮೈಸೂರು ಮಿತ್ರ
ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜೂನ್ 24 ಬುಧವಾರ 2026
47
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 47 | ಸಂಚಿಕೆ: 69 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



# ಸರ್ಕಾರಿ ನೌಕರರಲ್ಲಿ ಶಿಸ್ತು, ಸಮಯ ಪಾಲನೆ ತರಲು ಕರ್ತವ್ಯ ಆಪ್ ಮೂಲಕ ಜಿಯೋ ಫೆನ್ಸಿಂಗ್



● ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ; ಸರ್ಕಾರಿ ಕೆಲಸದಲ್ಲಿ ಪಾರದರ್ಶಕತೆ ತರುವ ಗುರಿ ●ಸಮಯ ಪಾಲನೆ ಮಾಡದ ಅಧಿಕಾರಿಗಳ ವಿರುದ್ಧ ಕ್ರಮ ●ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕಟ್ಟಾದೇಶ





ಶಾಲಿನಿ ರಜನೀಶ್


ಸಾಂದರ್ಭಿಕ ಚಿತ್ರ

ಬೆಂಗಳೂರು, ಜೂ. 23(ಕೆಎಂಶಿ)– ಎಲ್ಲ ಹಂತದ ಅಧಿಕಾರಿಗಳೂ ಸೇರಿದಂತೆ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿಯ ಶಿಸ್ತು ಮತ್ತು ಸಮಯ ಪಾಲನೆಗೆ ಸರ್ಕಾರ ಕರ್ತವ್ಯ ಆಪ್ 'ಜಿಯೋ ಫೆನ್ಸಿಂಗ್' ವ್ಯವಸ್ಥೆ ಅಳವಡಿಸಿದೆ.

ಪ್ರತಿದಿನ ಬೆಳಗ್ಗೆ 10 ಗಂಟೆಯೊಳಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿ ಆವರಣದಲ್ಲಿ ಹಾಜರಿರಬೇಕು, ಈ ಮೂಲಕ ಇನ್ನು ಮುಂದೆ ಸಮಯ ಪಾಲನೆ ಮತ್ತು ಶಿಸ್ತಿನ ಪರ್ವ ಆರಂಭವಾಗಲಿದೆ.

ಕಚೇರಿಗೆ ಬಾರದ ಅಥವಾ ತಡವಾಗಿ ಬಂದು ಹಾಜರಾತಿ ದಾಖಲಿಸುವ ನೌಕರರ ಹಳೆ ಚಾಳಿಗೆ ಸರ್ಕಾರ ಬ್ರೇಕ್ ಹಾಕಿದೆ.

ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಜಿಯೋ ಟ್ಯಾಗ್ಡ್ ಹಾಜರಾತಿ ವ್ಯವಸ್ಥೆ ಕಡ್ಡಾಯ ಜಾರಿ ಮೂಲಕ ಆಡಳಿತದಲ್ಲಿ ಮಹತ್ವದ ಬದಲಾವಣೆಗೆ ಮುನ್ನುಡಿ ಬರೆಯಲಾಗಿದೆ.

ಸುತ್ತೋಲೆ ಹೊರಬಿದ್ದು ಒಂದು ವಾರ ಕಳೆದರೂ ಇನ್ನೂ ಅನೇಕ ಮಂದಿ ನೌಕರರು ಆಪ್ ಡೌನ್‌ಲೋಡ್ ಮಾಡಿಕೊಂಡಿರದ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅತ್ಯಂತ ಕಠಿಣ ನಿಲುವು ತಳೆದಿದ್ದು, ತಕ್ಷಣವೇ ಎಲ್ಲರೂ ಆಪ್ ಡೌನ್‌ಲೋಡ್ ಮಾಡಿಕೊಂಡು ಹಾಜರಾತಿ ದಾಖಲಿಸಲು ಸೂಚಿಸಿದ್ದಾರೆ.


ನಿಗದಿತ ಸಮಯಕ್ಕೆ ಹಾಜರಾತಿ ದಾಖಲಿಸದ ನೌಕರರ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಆದೇಶಿಸಿದ್ದಾರೆ. ಸರ್ಕಾರದ ಈ ಕ್ರಮ ಸಮಯ ಪಾಲನೆಗೆ ಮಾತ್ರ ಸೀಮಿತವಾಗಿರದೆ, ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸುವ ಮತ್ತು ಸರ್ಕಾರಿ ಕೆಲಸಗಳಲ್ಲಿ ಪಾರದರ್ಶಕತೆ ತರುವ ಮಹತ್ವದ ಗುರಿ ಹೊಂದಿದೆ ಎಂದು ಮುಖ್ಯಕಾರ್ಯದರ್ಶಿ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ. ಈ ಹೊಸ ನಿಯಮದ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ನೌಕರ ಇ–ಆಡಳಿತ ಇಲಾಖೆ ಅಭಿವೃದ್ಧಿಪಡಿಸಿರುವ ಕರ್ತವ್ಯ ಆಪ್ ಮೂಲಕ ಡಿಜಿಟಲ್ ಹಾಜರಾತಿ ದಾಖಲಿಸುವುದು ಅನಿವಾರ್ಯ.

ಈ ವ್ಯವಸ್ಥೆಯ ವಿಶೇಷತೆ ಎಂದರೆ, ಜಿಯೋ ಫೆನ್ಸಿಂಗ್ ತಂತ್ರಜ್ಞಾನ ಅಳವಡಿಸಿದ್ದು ನೌಕರರು ತಾವು ಕೆಲಸ ಮಾಡುವ ಕಚೇರಿಯ ನಿರ್ದಿಷ್ಟ ಭೌಗೋಳಿಕ ವ್ಯಾಪ್ತಿಯೊಳಗೆ ಇದ್ದಾಗ ಮಾತ್ರ ಆಪ್‌ನಲ್ಲಿ ಹಾಜರಾತಿ ದಾಖಲಿಸಲು ಸಾಧ್ಯವಾಗುತ್ತದೆ, ಕಚೇರಿಯಿಂದ ಹೊರಗಿದ್ದು ಹಾಜರಾತಿ ದಾಖಲಿಸಲು ಅವಕಾಶ ಇರುವುದಿಲ್ಲ, ಬೆಳಿಗ್ಗೆ 10 ಗಂಟೆಯ ನಂತರ ಹಾಜರಾತಿ ದಾಖಲಿಸಲು ತಂತ್ರಾಂಶದಲ್ಲಿ ಅವಕಾಶ ಇಲ್ಲ ಎಂಬುದು ವಿಶೇಷ. ಕಚೇರಿ ಕೆಲಸದ ಸಮಯ ಆರಂಭವಾದ ತಕ್ಷಣ ನೌಕರರು ತಮ್ಮ ಸ್ಥಾನದಲ್ಲಿ ಇದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಹಿಂದೆ ಬಯೋಮೆಟ್ರಿಕ್ ಯಂತ್ರಗಳು ಕೆಟ್ಟಿವೆ ಅಥವಾ ತಾಂತ್ರಿಕ ದೋಷವಿದೆ ಎಂಬ ನೆಪ ಹೇಳಿ ಹಾಜರಾತಿಯಿಂದ ತಪ್ಪಿಸಿಕೊಳ್ಳುತ್ತಿದ್ದ ನೌಕರರಿಗೆ, ಈಗ ತಮ್ಮ ಸ್ವಂತ ಮೊಬೈಲ್ ಅಥವಾ ಕಚೇರಿಯ ಡಿಜಿಟಲ್ ಸಾಧನಗಳ ಮೂಲಕವೇ ಲಾಗಿನ್ ಆಗುವುದು ಕಡ್ಡಾಯವಾಗಿದೆ. ಆರ್ಥಿಕ ಇಲಾಖೆ ಈಗಾಗಲೇ ಅಧಿಕೃತ ಸುತ್ತೋಲೆ ಹೊರಡಿಸಿದ್ದು, ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಇಲಾಖಾ ಮುಖ್ಯಸ್ಥರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ತಕ್ಷಣವೇ ಎಲ್ಲಾ ನೌಕರರು ಆಪ್ ಡೌನ್‌ಲೋಡ್ ಮಾಡಿಕೊಂಡು ಹಾಜರಾತಿ ದಾಖಲಿಸಲು ಆದೇಶಿಸಲಾಗಿದೆ.

# ರಾಜ್ಯ ಸರಕಾರಿ ನೌಕರರಿಗೂ ವಾರ್ಷಿಕ ವೈದ್ಯಕೀಯ ತಪಾಸಣೆ

**ರಾಜ್ಯ ಸರಕಾರ ಆದೇಶ**



**ಬೆಂಗಳೂರು:** ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಗೆ ಒಳಪಟ್ಟ 40 ವರ್ಷ ಮೀರಿದ ಸರಕಾರಿ ನೌಕರರಿಗೆ ವಾರ್ಷಿಕ ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ಕಲ್ಪಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಆಧುನಿಕ ಜೀವನ ಶೈಲಿಯು ಒತ್ತಡದಿಂದ ಕೂಡಿರುವುದರಿಂದ ಆರೋಗ್ಯಕರ ಜೀವನ ನಡೆಸಲು ದೇಹಕ್ಕೆ ಬೇಕಾದ ವ್ಯಾಯಾಮದ ಕೊರತೆ ಇರುವುದರಿಂದ 40 ವರ್ಷ ವಯಸ್ಸು ಮೀರಿದ ಸರಕಾರಿ ನೌಕರರು ಸಾಮಾನ್ಯವಾಗಿ ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆಗಳಿಂದ ಬಳಲುತ್ತಿರುವ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗಿವೆ. ಇಂತಹ ಕಾಯಿಲೆಗಳಿಗೆ ತುತ್ತಾಗಿರುವ ಅರಿವು ಇಲ್ಲದೇ ನೌಕರರು ಹೃದಯಾಘಾತ, ಪಾರ್ಶ್ವವಾಯು ಮುಂತಾದ ರೋಗಗಳಿಗೆ ಒಳಗಾಗುತ್ತಿದ್ದಾರೆ.

ಸೂಕ್ತ ಸಮಯದಲ್ಲಿ ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ಕೆಲವು ಅಗತ್ಯ ಸಾಮಾನ್ಯ ವೈದ್ಯಕೀಯ ತಪಾಸಣೆಗಳನ್ನು ಮಾಡಿಸಿಕೊಂಡಲ್ಲಿ ಆರಂಭದ ಹಂತದಲ್ಲಿ ಅವಶ್ಯಕ ಔಷಧೋಪಚಾರಗಳನ್ನು ಪಡೆದು ಇಂತಹ ಗಂಭೀರ, ಅಪಾಯಕರ ಅನಾರೋಗ್ಯ ಸಮಸ್ಯೆಗಳನ್ನು ತಡೆಗಟ್ಟಿ ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಕೇಂದ್ರ ಸರಕಾರಿ ನೌಕರರಿಗೆ ಒದಗಿಸಲಾಗಿರುವ ಮುನ್ನೆಚ್ಚರಿಕೆ ಆರೋಗ್ಯ ತಪಾಸಣೆಯ ಮಾದರಿಯಲ್ಲಿ ರಾಜ್ಯ ಸರಕಾರಿ ನೌಕರರಿಗೂ ವಾರ್ಷಿಕ ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ಒದಗಿಸುವ ಬಗ್ಗೆ ಆರೋಗ್ಯ ಇಲಾಖೆಯ ಅಭಿಪ್ರಾಯ ಪಡೆದು ಪರಿಶೀಲಿಸಿ, ಕೆಎಎಸ್‌ಎಸ್ ಯೋಜನೆಯಡಿ ನೋಂದಣಿಯಾಗಿರುವ ಸರಕಾರಿ ನೌಕರರಿಗೆ ವಾರ್ಷಿಕ ಆರೋಗ್ಯ ತಪಾಸಣೆಯನ್ನು ಒದಗಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಸೌಲಭ್ಯವನ್ನು ಪಡೆಯಲು ಕೆಲವು ಷರತ್ತುಗಳನ್ನು ಸೂಚಿಸಲಾಗಿದ್ದು, ಸ್ವ–ಇಚ್ಛೆಯಿಂದ ಯೋಜನೆಗೆ ಒಳಪಡದ ಸರಕಾರಿ ನೌಕರರು ಈ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ. ವಾರ್ಷಿಕ ಆರೋಗ್ಯ ತಪಾಸಣೆ ಸರಕಾರಿ ನೌಕರರಿಗೆ ಮಾತ್ರ ಅನ್ವಯವಾಗುತ್ತದೆ. ಸರಕಾರಿ ನೌಕರರ ಕುಟುಂಬದ ಅವಲಂಬಿತ ಸದಸ್ಯರು ಈ ಸೌಲಭ್ಯವನ್ನು ■6ನೇ ಪುಟಕ್ಕೆ

# ಶಾಶ್ವತ ವಿದ್ಯುತ್ ಸಂಪರ್ಕಕ್ಕೆ 15 ದಿನದೊಳಗೆ ಅರ್ಜಿ ಸಲ್ಲಿಸಿ

**ಇಂಧನ ಇಲಾಖೆಯಿಂದ ಮಾರ್ಗಸೂಚಿ ಬಿಡುಗಡೆ**



**ಬೆಂಗಳೂರು:** ರಾಜ್ಯ ಸರ್ಕಾರ ಅಧಿಕೃತ ಆದೇಶವನ್ನು ಹೊರಡಿಸಿ, ಹೊಸದಾಗಿ ನಿರ್ಮಿಸಲಾದ ಮನೆಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಆಕ್ಯುಪೆನ್ಸಿ ಸರ್ಟಿಫಿಕೇಟ್ ಸಲ್ಲಿಸುವುದರಿಂದ ಒಂದು ಬಾರಿ ವಿನಾಯಿತಿ ನೀಡಿದೆ.

ಈ ವಿನಾಯಿತಿ ಮೇ 31ರ ಮೊದಲು ಪೂರ್ಣಗೊಂಡಿರುವ ಮತ್ತು 2,400 ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣದ ಪ್ಲಾಟ್‌ನಲ್ಲಿ ನಿರ್ಮಿತ ಮನೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಇಂಧನ ಇಲಾಖೆ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ನಾಗರಿಕರು ಈ ವಿನಾಯಿತಿಯಡಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಮುಂದಿನ 15 ದಿನಗಳ ಒಳಗೆ ಅರ್ಜಿ ಸಲ್ಲಿಸಬೇಕೆಂದು ತಿಳಿಸಿದೆ.

ಮಾರ್ಗಸೂಚಿ ಪ್ರಕಾರ, ವಿದ್ಯುತ್ ಸರಬರಾಜು ಕಂಪನಿಗಳು ಮೇ 31ರೊಳಗೆ ಸಲ್ಲಿಸಲಾದ ಅರ್ಜಿಗಳನ್ನು ತಕ್ಷಣ ಪರಿಶೀಲನೆ ಆರಂಭಿಸಲಿವೆ. ಸ್ಥಳೀಯ ಅಧಿಕಾರಿಗಳು ಮನೆ ಮಾಲೀಕರ ಸಮ್ಮುಖದಲ್ಲಿ ಪೂರ್ಣಗೊಂಡ ಕಟ್ಟಡಗಳ ಜಿಯೋ–ಟ್ಯಾಗ್ ಮಾಡಿದ ಫೋಟೋಗಳನ್ನು ತೆಗೆದು ಅಪ್‌ಲೋಡ್ ಮಾಡುತ್ತಾರೆ.

ಆದರೆ, ನಿರ್ಮಾಣ ಪೂರ್ಣಗೊಂಡಿದ್ದು ಕೇವಲ ತಾತ್ಕಾಲಿಕ ವಿದ್ಯುತ್ ಸಂಪರ್ಕ ಹೊಂದಿರುವವರು ಮತ್ತು 2026 ಮೇ 31ರೊಳಗೆ ಶಾಶ್ವತ ಸಂಪರ್ಕಕ್ಕೆ ಅರ್ಜಿ ಸಲ್ಲಿಸದವರು, ಮುಂದಿನ 15 ದಿನಗಳೊಳಗೆ ಕಡ್ಡಾಯವಾಗಿ ■6ನೇ ಪುಟಕ್ಕೆ

## ಆರ್‌ಟಿಐ ನಿಯಮಗಳ 5 ತಿದ್ದುಪಡಿ ರದ್ದುಗೊಳಿಸದಿದ್ದರೆ ಆಮರಣಾಂತ ಉಪವಾಸ



ಮುಂಬೈ: ಮಹಾರಾಷ್ಟ್ರ ಸರಕಾರ ಮಾಹಿತಿ ಹಕ್ಕು ನಿಯಮಗಳಿಗೆ ಅಕ್ರಮವಾಗಿ ಮಾಡಿರುವ ಐದು ತಿದ್ದುಪಡಿಗಳನ್ನು ಹಿಂಪಡೆಯದಿದ್ದರೆ, ಜುಲೈ 5ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತೇನೆ ಎಂದು ಮಂಗಳವಾರ ಹಿರಿಯ ಹೋರಾಟಗಾರ ಅಣ್ಣಾ ಹಜಾರೆ ಎಚ್ಚರಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರಿಗೆ ಈ ಸಂಬಂಧ ಪತ್ರ ಬರೆದಿರುವ ಅಣ್ಣಾ ಹಜಾರೆ, ಜೂನ್ 12ರಂದು ಮಾಡ ಲಾಗಿರುವ ತಿದ್ದುಪಡಿಗಳು ಮಾಹಿತಿ ಹಕ್ಕು ಕಾಯ್ದೆಯ ಆಶಯಗಳನ್ನು ಉಲ್ಲಂಘಿಸುತ್ತದೆ ಹಾಗೂ ಪಾರ ದರ್ಶಕತೆಯನ್ನು ಇಲ್ಲವಾಗಿಸುತ್ತದೆ ಎಂದು ಗಮನ ಸೆಳೆದಿದ್ದಾರೆ.

ಮಹಾರಾಷ್ಟ್ರ ಮಾಹಿತಿ ಹಕ್ಕು ನಿಯಮಗಳಿಗೆ ಮಾಡಲಾಗಿರುವ ತಿದ್ದುಪಡಿಗಳು ಮಾಹಿತಿ ಹಕ್ಕು ಕಾಯ್ದೆಯ ತೀಕ್ಷ್ಣತೆಯನ್ನು ಮೊಂಡುಗೊಳಿಸುತ್ತದೆ ಹಾಗೂ ಜನರನ್ನು ಮಾಹಿತಿಗಳಿಂದ ದೂರ ಇಡುತ್ತದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಮಾಹಿತಿ ಹಕ್ಕು ಅರ್ಜಿಯನ್ನು ಸಲ್ಲಿಸಲು ಏರಿಕೆ ಮಾಡಲಾಗಿರುವ ಶುಲ್ಕವನ್ನೂ ಆಕ್ಷೇಪಿಸಿರುವ ಅಣ್ಣಾ ಹಜಾರೆ, ಈ ಏರಿಕೆಗೆ ಯಾವುದೇ ತಾರ್ಕಿಕ ಸಮರ್ಥನೆಯಾಗಲಿ ಅಥವಾ ಆರ್ಥಿಕ ವಿಶ್ಲೇಷಣೆಯನ್ನಾಗಲಿ ಒದಗಿಸಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆ ಆದಾಯವನ್ನು ಸೃಷ್ಟಿಸುವ ಕಾನೂನಲ್ಲ. 20 ವರ್ಷಗಳ ಬಳಿಕ ಮಾಹಿತಿ ಹಕ್ಕು ಅರ್ಜಿಯ ಶುಲ್ಕವನ್ನು ಏರಿಕೆ ಮಾಡಿರುವುದಾದರೆ, ಮಾಹಿತಿ ನಿರಾಕರಿಸುವ ಅಧಿಕಾರಿಗಳ ■6ನೇ ಪುಟಕ್ಕೆ

# ಮತ್ತೊಂದು ಅವಾಂತರ ಮಾಡಬೇಡಿ...!

●ಬಿಜೆಪಿ ರಾಜ್ಯ ನಾಯಕರ ಮೇಲೆ ಪಕ್ಷದ ವರಿಷ್ಠರು ಗರಂ
●ಧರ್ಮಸ್ಥಳದಲ್ಲಿ ಉದ್ದೇಶಿತ ಶಾಸಕಾಂಗ ಪಕ್ಷ ಸಭೆ ರದ್ದು



ಬೆಂಗಳೂರು, ಜೂ.23(ಕೆಎಂಶಿ)– ಧಾರ್ಮಿಕ ಕ್ಷೇತ್ರಗಳಲ್ಲಿ ರಾಜಕಾರಣ ಮಾಡುವುದನ್ನು ಬಿಟ್ಟು ಪಕ್ಷದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಮುಂದಾಗಿ ಎಂದು ಬಿಜೆಪಿ ವರಿಷ್ಠರು ರಾಜ್ಯ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸ್ಥಾನಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕೆಲವು ಬಿಜೆಪಿ ಶಾಸಕರಿಂದ ಅಡ್ಡ ಮತದಾನ ಮಾಡಿದ್ದನ್ನು ಗಂಭೀರವಾಗಿ ಪರಿಗಣಿಸಿರುವ ವರಿಷ್ಠರು ಈ ಎಚ್ಚರಿಕೆ ನೀಡಿದ್ದಾರೆ.

ಅಡ್ಡ ಮತದಾನ ಮಾಡಿದವರನ್ನು ಪತ್ತೆ ಹಚ್ಚಲು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಧರ್ಮಸ್ಥಳದ ಮಂಜು ನಾಥಸ್ವಾಮಿ ಸನ್ನಿಧಿಯಲ್ಲಿ ಪಕ್ಷದ ಶಾಸಕಾಂಗ ಸಭೆ ನಡೆಸಿ, ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಿದ ಶಾಸಕರನ್ನು ಗುರುತಿಸುವುದಾಗಿ ಪ್ರಕಟಿಸಿದ್ದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ರುವ ದೆಹಲಿ ನಾಯಕರು, ಧರ್ಮ ಕ್ಷೇತ್ರಗಳಲ್ಲಿ ರಾಜಕಾರಣ ಮಾಡಬೇಡಿ. ಕಾಂಗ್ರೆಸ್ ಮುಖಂಡರು ನಮ್ಮ ಶಾಸಕರಿಗೆ ಆಮಿಷವೊಡ್ಡಿ ಅಡ್ಡ ಮತದಾನ ಮಾಡಿಸಿದ್ದಾರೆ. ಧರ್ಮಸ್ಥಳಕ್ಕೆ ರಾಜಕೀಯ ತಂದು ಮತ್ತಷ್ಟು ಮುಜುಗರ ಮಾಡಬೇಡಿ. ಈಗ ಆಗಿರುವ ತಪ್ಪು ಸರಿಪಡಿಸುವಲ್ಲಿ ಕಡೆ ಗಮನ ಹರಿಸಿ. ಪುಣ್ಯ ಕ್ಷೇತ್ರಗಳಲ್ಲಿ ಆಣೆ, ಪ್ರಮಾಣ ಮಾಡಿ ಮತ್ತೊಂದು ವಿವಾದ ಸೃಷ್ಟಿ ಮಾಡುವುದು ಬೇಡ ಎಂಬ ಆದೇಶದ ಹಿನ್ನೆಲೆಯಲ್ಲಿ ಧರ್ಮಸ್ಥಳದಲ್ಲಿ ನಡೆಯ ಬೇಕಿದ್ದ ಬಿಜೆಪಿ ಶಾಸಕಾಂಗ ಪಕ್ಷ ಸಭೆ ರದ್ದಾಗಿದೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ವಿಧಾನ ಪರಿ ಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಕುರಿತು ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಸಭೆ ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಧರ್ಮ ಕ್ಷೇತ್ರದಲ್ಲಿ ರಾಜಕೀಯ ಮಾಡಬಾರದೆಂಬ ಉದ್ದೇಶದಿಂದ ಈ ತೀರ್ಮಾನ ಕೈಗೊಂಡಿದ್ದೇವೆ, ನಮ್ಮ ಆಂತರಿಕ ವಿಚಾರವನ್ನು ಪಕ್ಷದ ವೇದಿಕೆಯಲ್ಲೇ ಸರಿಪಡಿಸಿಕೊಳ್ಳುತ್ತೇವೆ, ಯಾರು ಪಕ್ಷಕ್ಕೆ ದ್ರೋಹ ಮಾಡಿದ್ದಾರೋ ಅವರಿಗೆ ತಕ್ಕ ಬುದ್ಧಿ ಕಲಿಸುತ್ತೇವೆ ಎಂದರು.

## ಸಿಯುಇಟಿ ಯುಜಿ–2026ರ ಫಲಿತಾಂಶ ಪ್ರಕಟ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ನಡೆಸುವ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ–ಪದವಿಪೂರ್ವ 2026ರ ಫಲಿತಾಂಶವನ್ನು ಇಂದು (ಜೂನ್ 23) ತನ್ನ ಅಧಿಕೃತ ಪೋರ್ಟಲ್ cuet.nta.nic.inನಲ್ಲಿ ಪ್ರಕಟಿಸಿದೆ. ಪರೀಕ್ಷಾ ಸಂಸ್ಥೆಯು ಜೂನ್ 22ರಂದು ಸಿಇಟಿ ಯುಜಿ ಪರೀಕ್ಷೆಯ ಅಂತಿಮ ಕೀ ಉತ್ತರವನ್ನು ಬಿಡುಗಡೆ ಮಾಡಿದ್ದು, ಸಿಯುಇಟಿ ಯುಜಿ–2026ರ ಫಲಿತಾಂಶವು ಎನ್‌ಟಿಎ ಘೋಷಿಸಿದ ಅಂತಿಮ ಕೀ ಉತ್ತರವನ್ನು ಆಧರಿಸಿದೆ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ.

ಎನ್‌ಟಿಎ, ಮೇ 11 ರಿಂದ 31ರವರೆಗೆ ಮತ್ತು ಜೂನ್ 6 ರಿಂದ 7ರವರೆಗೆ ವಿದೇಶದ 13 ನಗರಗಳು ಸೇರಿ ಒಟ್ಟು 321 ನಗರಗಳ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಿತ್ತು. ಸಿಯುಇಟಿ ಯುಜಿಯ ತಾತ್ಕಾಲಿಕ ಕೀ ಉತ್ತರವನ್ನು ಜೂನ್ 9ರಂದು ಬಿಡುಗಡೆ ಮಾಡಲಾಗಿತ್ತು. ಎನ್‌ಟಿಎ ಪ್ರಕಾರ, ಈ ವರ್ಷ ಒಟ್ಟು 15,68,867 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ಅದರಲ್ಲಿ 11,64,098 ಅಭ್ಯರ್ಥಿಗಳು ಹಾಜರಾಗಿದ್ದರು.

# ರಾಜ್ಯದ ಐತಿಹಾಸಿಕ ನೈಸರ್ಗಿಕ ಪ್ರವಾಸಿ ತಾಣಗಳ ಸ್ವಚ್ಛ ನಿರ್ವಹಣೆ

**ಪ್ರವಾಸೋದ್ಯಮ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ಮಾಹಿತಿ**



ಬೆಂಗಳೂರು, ಜೂ. 23(ಕೆಎಂಶಿ)– ರಾಜ್ಯ ದಲ್ಲಿನ ಐತಿಹಾಸಿಕ ಮತ್ತು ನೈಸರ್ಗಿಕ ಪ್ರವಾಸೋದ್ಯಮ ತಾಣಗಳ ಸ್ವಚ್ಛತೆ ಹಾಗೂ ನಿರ್ವಹಣೆಗೆ ಹೆಚ್ಚು ಒತ್ತುಕೊಡುವುದಾಗಿ ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರವಾಸಿ ತಾಣಗಳ ಅಭಿವೃದ್ಧಿ ಮತ್ತು ಪ್ರವಾಸಿಗರ ಅನುಕೂಲಕ್ಕೆ ವಿಶ್ವದರ್ಜೆ ಸೌಲಭ್ಯ ಒದಗಿಸುವಲ್ಲಿ 'ನಮ್ಮ ಗೈಡ್' ಆನ್‌ಲೈನ್ ವೇದಿಕೆ ಸಿದ್ಧಪಡಿಸಲಾಗು ತ್ತಿದೆ ಎಂದರು. ರಾಜ್ಯದ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ದೇಶ–ವಿದೇಶಗಳ ಪ್ರವಾಸಿಗರಿಗೆ ಆಯಾ ಸ್ಥಳದ ಇತಿಹಾಸ, ಸಂಸ್ಕೃತಿ ಮತ್ತು ಮಹತ್ವ ಕುರಿತು ನಿಖರ ಮಾಹಿತಿ ನೀಡುವ ಉದ್ದೇಶದಿಂದ ಯೋಜನೆ ಹಮ್ಮಿಕೊಳ್ಳಲಾಗಿದೆ. ವಿದೇಶ ಪ್ರವಾಸಿಗಳು ಗೈಡ್‌ಗಳನ್ನು ಆನ್‌ಲೈನ್ ಮೂಲಕ ಕಾಯ್ದಿರಿಸುವ ವ್ಯವಸ್ಥೆ ಇದೆ. ಇದೇ ಮಾದರಿಯ ಅತ್ಯಾಧುನಿಕ ಆನ್‌ಲೈನ್ ವೇದಿಕೆಯನ್ನು ಕರ್ನಾಟಕದಲ್ಲೂ ಪ್ರತ್ಯೇಕವಾಗಿ ಅಭಿವೃದ್ಧಿಪಡಿಸಲಾಗುವುದು. ರಾಜ್ಯ ಪ್ರವಾಸೋದ್ಯಮವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ಏರಿಸುವಲ್ಲಿ, ಸ್ಥಳೀಯ ಗೈಡ್‌ಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ. ವಿದೇಶಗಳಲ್ಲಿನ ಮಾದರಿಯಲ್ಲೇ ನಮ್ಮ ರಾಜ್ಯದಲ್ಲೂ ಪ್ರವಾಸಿಗರು ಸುಲಭ ಹಾಗೂ ಪಾರದರ್ಶಕವಾಗಿ ಗೈಡ್‌ಗಳ ಸೇವೆ ಪಡೆಯಲು ಅನುಕೂಲವಾಗಲಿದೆ ಎಂದರು.

ಈ ಯೋಜನೆಯನ್ನು ತ್ವರಿತವಾಗಿ ಸಾಕಾರಗೊಳಿಸಲು ರಾಜ್ಯದಲ್ಲಿರುವ ನವೋದ್ಯಮಗಳು ಸೇರಿದಂತೆ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳಿಗೆ ಆಹ್ವಾನ ನೀಡಲು ಇಲಾಖೆ ಕ್ರಮ ಕೈಗೊಳ್ಳುತ್ತಿದೆ. ಇದರಿಂದ ಪ್ರವಾಸಿಗರಿಗೆ ಅತ್ಯುತ್ತಮ ಮಾಹಿತಿ ಮತ್ತು ಉತ್ತಮ ಅನುಭವ ದೊರೆಯುವು ದರ ಜೊತೆಗೆ, ನಮ್ಮ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳ ಸ್ವಚ್ಛತೆ ಹಾಗೂ ನಿರ್ವಹಣೆಗೂ ಹೆಚ್ಚಿನ ಬಲ ಸಿಗಲಿದೆ ಎಂದು ಜಾರ್ಜ್ ಅಭಿಪ್ರಾಯ ಪಟ್ಟಿದ್ದಾರೆ.

## ಯುವಕನ ಉಪಟಳಕ್ಕೆ ಕುಟುಂಬದ ಮೂವರ ಬಲಿ

# ಮೈಸೂರು ಕೆ.ಆರ್.ಆಸ್ಪತ್ರೆ ಶವಾಗಾರದ ಬಳಿ ಬಿಗುವಿನ ವಾತಾವರಣ

■ ಸಂತ್ರಸ್ತ ಸಮುದಾಯದ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ■ ಪರಿಸ್ಥಿತಿ ಶಮನಗೊಳಿಸಿದ ಶಾಸಕ ಪುಟ್ಟರಂಗಶೆಟ್ಟರು




ತಂದೆ–ತಾಯಿ, ಮಗಳ ಮರಣೋತ್ತರ ಪರೀಕ್ಷೆ ವೇಳೆ ಕೆ.ಆರ್.ಆಸ್ಪತ್ರೆ ಶವಾಗಾರದ ಮುಂದೆ ಹೈಡ್ರಾಮಾ.

ಮೈಸೂರು,ಜೂ.23(ಎಂಟಿವೈ)– ಯುವಕನ ಕಿರುಕುಳದಿಂದ ಬೇಸತ್ತು ಹಸೆಮಣೆ ಏರುವ ಎರಡು ದಿನ ಮುನ್ನ ಆತ್ಮಹತ್ಯೆಗೆ ಶರಣಾದ ಯುವತಿ ಹಾಗೂ ಆಕೆಯ ಪೋಷಕರ ಮೃತದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸುವ ವೇಳೆ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರದ ಬಳಿ ಜಮಾಯಿಸಿದ್ದ ಎರಡೂ ಗುಂಪಿನವರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪದ ಹಂತ ತಲುಪಿತ್ತು. ಪರಿಸ್ಥಿತಿ ಅರಿತ ಪೊಲೀಸರು,

## ಬಿಗಿ ಭದ್ರತೆ ನಡುವೆ ಅಂತ್ಯಕ್ರಿಯೆ


ಮೈಸೂರು, ಜೂ.23(ಎಂಟಿವೈ)– ಯುವಕನ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದ ತಂದೆ–ತಾಯಿ, ಮಗಳ ಅಂತ್ಯಕ್ರಿಯೆ ತಿ.ನರಸೀಪುರ ತಾಲೂಕಿನ ಹಳೆ ಕೆಂಪಯ್ಯನಹುಂಡಿ ಗ್ರಾಮದ ಅವರ ಜಮೀನಿನಲ್ಲಿ ಮಂಗಳವಾರ ಸಂಜೆ ಪೊಲೀಸರ ಬಂದೋಬಸ್ತ್ ನಡುವೆ ಅಪಾರ ಸಂಖ್ಯೆಯ ಸಂಬಂಧಿಕರ ಸಮ್ಮುಖದಲ್ಲಿ ನೆರವೇರಿತು. ಮರಣೋತ್ತರ ಪರೀಕ್ಷೆ ಬಳಿಕ ಮೈಸೂರಿಂದ ಆಂಬುಲೆನ್ಸ್‌ನಲ್ಲಿ ತಿ.ನರಸೀಪುರ ತಾಲೂಕಿನ ಹಳೆ ಕೆಂಪಯ್ಯನಹುಂಡಿ ಗ್ರಾಮಕ್ಕೆ ಪಾರ್ಥಿವ ಶರೀರಗಳ ತರಲಾಯಿತು. ಅಷ್ಟರಲ್ಲಾಗಲೇ ಸಂಬಂಧಿಕರು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಉಪ್ಪಾರ ಸಮುದಾಯದ ಮುಖಂಡರು ಅಂತ್ಯಕ್ರಿಯೆ ಸಿದ್ಧತೆ ಮಾಡಿಕೊಂಡಿದ್ದರು. ಬಳಿಕ ಮೃತ ಶಿವಣ್ಣ ಅವರು 5 ಕುಂಟೆ ಜಾಗದಲ್ಲಿ ಹೊಸದಾಗಿ ಕಟ್ಟಿದ್ದ ಮನೆ ಸಮೀಪವೇ ಮೂವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಗ್ರಾಮದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.


ಆತ್ಮಹತ್ಯೆಗೆ ಶರಣಾದ ಕುಟುಂಬ.

ಮರಣೋತ್ತರ ಪರೀಕ್ಷೆ ಬಳಿಕ ಬಿಗಿ ಭದ್ರತೆ ನಡುವೆ ಮೂವರ ದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಿ, ಅಲ್ಲಿಂದ ಸಾಗಿಸಿದರು.

ತಿ.ನರಸೀಪುರ ತಾಲೂಕಿನ ಹಳೆ ಕೆಂಪಯ್ಯನಹುಂಡಿ ನಿವಾಸಿ ಅಂದಾನಿಗೌಡನ ಮಗ ಉಲ್ಲಾಸ್‌ಗೌಡನ ■6ನೇ ಪುಟಕ್ಕೆ

## ಮಾಜಿ ಸಿಎಂ ಸಿದ್ದರಾಮಯ್ಯ ಆಪ್ತನಿಗೆ ಹಿಗ್ಗಾಮುಗ್ಗಾ ತರಾಟೆ


ಮಾಜಿ ಸಿಎಂ ಸಿದ್ದರಾಮಯ್ಯ ಆಪ್ತ ಸಿ.ಟಿ. ಕುಮಾರ್

**ಮೈಸೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯನವರ ಆಪ್ತ ಸಿ.ಟಿ.ಕುಮಾರ್, ಆರೋಪಿ ಪರ ನಿಂತು ಪ್ರಕರಣ ಮುಚ್ಚಿ ಹಾಕಲು ಬಂದಿದ್ದಾರೆ ಎಂದು ಶವಾಗಾರದ ಬಳಿ ಜಮಾಯಿಸಿದ್ದ ಗುಂಪೊಂದು ಆಕ್ರೋಶ ವ್ಯಕ್ತಪಡಿಸಿತು.

ಮೇಲ್ವರ್ಗದ ಉಲ್ಲಾಸ್‌ಗೌಡ ನಡೆಸಿದ ದೌರ್ಜನ್ಯ, ಕಿರುಕುಳದಿಂದ ಉಪ್ಪಾರ ಸಮುದಾಯದ ಒಂದು ಕುಟುಂಬವೇ ನಾಶವಾಗಿದೆ. ಆದರೂ ರಾಜಕೀಯ ಪ್ರಭಾವ ಬಳಸಿ, ಆರೋಪಿಯನ್ನು ರಕ್ಷಿಸುವ ಪ್ರಯತ್ನ ನಡೆದಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ. ಯತೀಂದ್ರ ಅವರ ಆಪ್ತ ಸಿ.ಟಿ. ಕುಮಾರ್, ಪ್ರಕರಣವನ್ನು ಮುಚ್ಚಿಹಾಕಲು ಬಂದಿದ್ದಾರೆ. ಅಮಾಯಕ ಮೂವರ ಸಾವಾಗಿದ್ದರೂ ನೊಂದ ಕುಟುಂಬಕ್ಕೆ ನೆರವಾಗದೇ, ಆರೋಪಿಗಳ ಪರ ವಕಾಲತ್ತು ವಹಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಇಂತಹ ಸಂದರ್ಭದಲ್ಲಿ ಉಪ್ಪಾರ ಸಮುದಾಯ ಒಗ್ಗಟ್ಟಾಗಿರಬೇಕು. ಯಾವುದೇ ಕಾರಣಕ್ಕೂ ಸಿ.ಟಿ.ಕುಮಾರ್ ಹಿಂದೆ ಹೋಗಿ, ಸಂತ್ರಸ್ತ ಕುಟುಂಬಕ್ಕೆ ಅನ್ಯಾಯ ಮಾಡಬಾರದು. ಇಂದು ಶಿವಣ್ಣ, ನಾಗರತ್ನ ಹಾಗೂ ರಕ್ಷಿತಾ ಸಾವಾಗಿದೆ. ನಮ್ಮಲ್ಲೇ ಒಗ್ಗಟ್ಟಿಲ್ಲದಿದ್ದರೆ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸುತ್ತವೆ. ■6ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ಲಾಯರ್ ಸರ್ ನನಗೆ ಗಂಡ ಬೇಕು.
ಲಾಯರ್ : ಡೈವೋರ್ಸ್ ಆಗಿ ಆರು ತಿಂಗಳಾಗಿಲ್ಲ ಮತ್ತೆ ಗಂಡ ಬೇಕು ಅಂತೀಯಲ್ಲಮ್ಮ?
ಹೆಂಡ್ತಿ : ಅವನ ಖುಷಿನಾ ನನ್ನ ಕೈಯಲ್ಲಿ ನೋಡೋಕ್ಕೆ ಆಗ್ತಾ ಇಲ್ಲ?

ಮೈಸೂರು ಮಿತ್ರ

ಬುಧವಾರ, ಜೂನ್ 24, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

## ಅಮೃತ ವಾಹಿನಿ..........

ಮೋಸ ಎಲ್ಲರೂ ಮಾಡ್ತಾರೆ. ಆದರೆ, ನಂಬಿಕೆ ದ್ರೋಹ ನಾವು ತುಂಬಾ ನಂಬಿದವರೇ ಮಾಡ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಮಳೆ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ.

## ನಿಮ್ಮ ಪತ್ರಗಳು

### ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳು ಬೇಕೇ?

ಮಾನ್ಯರೆ,

ಕೆಲವು ದಿನಗಳ ಹಿಂದೆ ನೂತನ ಮುಖ್ಯಮಂತ್ರಿಗಳು, ರಾಜ್ಯದ ಕಾಲೇಜುಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವ ಸಲುವಾಗಿ ವಿದ್ಯಾರ್ಥಿ ದಶೆಯಿಂದಲೇ ತರಬೇತಿ ಪಡೆಯಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಈ ಉದ್ದೇಶಕ್ಕಾಗಿ ವಿದ್ಯಾರ್ಥಿ ಸಂಘಗಳ ಅವಶ್ಯಕತೆ ಇದ್ದು, ಕಾಲೇಜುಗಳಲ್ಲಿ ಅವುಗಳನ್ನು ಪುನಃ ಆರಂಭಿಸಬೇಕು ಎಂಬ ಕರೆ ನೀಡಿದ್ದಾರೆ.

ಆದರೆ, ಹಿಂದೆ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಗಳು ನಡೆದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ನಡುವೆ ಭಿನ್ನಾಭಿಪ್ರಾಯಗಳು, ದ್ವೇಷ ಮತ್ತು ಅಸಹನೆಗಳು ಮೂಡಿದ ಅನೇಕ ಉದಾಹರಣೆಗಳಿವೆ. ಕೆಲವೊಮ್ಮೆ ಇವು ಗುಂಪುಗಾರಿಕೆ, ಪುಂಡಾಟಿಕೆ ಹಾಗೂ ಹಿಂಸಾತ್ಮಕ ಘಟನೆಗಳಿಗೂ ಕಾರಣವಾಗಿದ್ದು, ಕೆಲವು ಕಡೆಗಳಲ್ಲಿ ಜೀವಹಾನಿಯೂ ಸಂಭವಿಸಿರುವುದನ್ನು ನಾವು ಇತಿಹಾಸದಲ್ಲಿ ಕಂಡಿದ್ದೇವೆ ಮತ್ತು ಪತ್ರಿಕೆಗಳಲ್ಲಿ ಓದಿದ್ದೇವೆ.

ಮುಖ್ಯಮಂತ್ರಿಯವರೂ ಹಾಗೂ ಪ್ರಸ್ತುತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ತಮ್ಮ ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಥಿ ಸಂಘಗಳ ಮೂಲಕ ನಾಯಕತ್ವದ ಅನುಭವ ಪಡೆದು ರಾಜಕೀಯದಲ್ಲಿ ಉನ್ನತ ಹಂತ ತಲುಪಿರುವುದನ್ನು ನೆನಪಿಸಿಕೊಳ್ಳಬಹುದು. ಆದರೆ ಆ ಕಾಲದಲ್ಲಿ ನಡೆದ ಗಲಭೆಗಳು, ಸಂಘರ್ಷಗಳು ಮತ್ತು ದ್ವೇಷದ ಘಟನೆಗಳನ್ನೂ ಜನರು ಮರೆಯಬಾರದು. ಇಂತಹ ಕಾರಣಗಳಿಂದಲೇ ಅಂದಿನ ಸರ್ಕಾರ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ನಿಷೇಧಿಸಿತ್ತು.

ಇಂದು ಶಿಕ್ಷಣ ಸಂಸ್ಥೆಗಳು ಶಾಂತ, ಶಿಸ್ತುಬದ್ಧ ಮತ್ತು ಜ್ಞಾನಾರ್ಜನೆಗೆ ಪೂರಕವಾದ ವಾತಾವರಣವನ್ನು ಹೊಂದಿವೆ. ಇಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ಮತ್ತೆ ಆರಂಭಿಸುವುದು ಅಗತ್ಯವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ನಿಜವಾಗಿಯೂ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವುದು ಸರ್ಕಾರದ ಉದ್ದೇಶವಾಗಿದ್ದರೆ, ಅದಕ್ಕಾಗಿ ಪರ್ಯಾಯ ಮಾರ್ಗಗಳೂ ಇವೆ. ನಾಯಕತ್ವ ಅಭಿವೃದ್ಧಿ ಶಿಬಿರಗಳು, ಯಶಸ್ವಿ ಉದ್ಯಮಿಗಳು ಮತ್ತು ತಜ್ಞರಿಂದ ಪ್ರೇರಣಾದಾಯಕ ಉಪನ್ಯಾಸಗಳು, ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು, ಸಾಮಾಜಿಕ ಸೇವಾ ಚಟುವಟಿಕೆಗಳು ಹಾಗೂ ದೂರದೃಷ್ಟಿಯ ಯೋಜನೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ನಾಯಕತ್ವ, ಜವಾಬ್ದಾರಿ ಮತ್ತು ಸಂಘಟನಾ ಕೌಶಲ್ಯಗಳನ್ನು ಬೆಳೆಸಬಹುದು. ಆದ್ದರಿಂದ ಸರ್ಕಾರವು ಈ ವಿಷಯವನ್ನು ಮತ್ತೊಮ್ಮೆ ಸಮಗ್ರವಾಗಿ ಪರಿಶೀಲಿಸಿ, ಶಿಕ್ಷಣ ಸಂಸ್ಥೆಗಳ ಶಾಂತಿ ಮತ್ತು ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ಸೂಕ್ತ ನಿರ್ಧಾರ ಕೈಗೊಳ್ಳುವುದು ಒಳಿತು. –ವಿಜಯ್ ಹೆಮ್ಮಿಗೆ, ಮೈಸೂರು

### ಆರೋಗ್ಯ ಕೇಂದ್ರದಲ್ಲಿ ಕಸ ತೆರವುಗೊಳಿಸಿ

ಮಾನ್ಯರೆ,



ಜಾನಪದ ಜಿಲ್ಲೆ ಚಾಮರಾಜನಗರದ ಕೊಳ್ಳೇಗಾಲ ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರಾಶಿ ರಾಶಿ ಕಸ ತುಂಬಿದೆ. ಈ ಆರೋಗ್ಯ ಕೇಂದ್ರಕ್ಕೆ ಸುತ್ತಮುತ್ತಲಿನ ಅನೇಕ ಗ್ರಾಮಗಳಿಂದ ರೋಗಿಗಳು ಬರುತ್ತಾರೆ. ಆದರೆ ಈ ಆರೋಗ್ಯ ಕೇಂದ್ರದ ಬಾಗಿಲಿನ ಮುಂಭಾಗದಲ್ಲೇ ಕಸವನ್ನು ತೆರವುಗೊಳಿಸದೇ ಇರುವುದು ವಿಷಾದನೀಯ. ಸೊಳ್ಳೆ, ಜಿರಳೆ, ಇಲಿ, ಹೆಗ್ಗಣ ಸೇರಿದಂತೆ ಇತರ ಕೀಟಗಳು ಮತ್ತು ಉಪದ್ರವ ಜೀವಿಗಳು ಓಡಾಡುತ್ತಿರುವ ಕಾರಣ ಆರೋಗ್ಯ ಕೇಂದ್ರಕ್ಕೆ ಬಂದು ಗುಣಮುಖವಾಗಿ ತೆರಳುವ ರೋಗಿಗಳಿಗೆ ಮತ್ತಷ್ಟು ರೋಗಗಳನ್ನು ಹರಡಿಸಿಕೊಂಡು ಹೋಗುವಂತಾಗಿದೆ. ಆದ್ದರಿಂದ ವೈದ್ಯಾಧಿಕಾರಿಗಳಾಗಲೀ ಅಥವಾ ಸಂಬಂಧಪಟ್ಟ ಅಧಿಕಾರಿಗಳಾಗಲೀ ಆರೋಗ್ಯ ಕೇಂದ್ರದ ಮುಂಭಾಗ ಮತ್ತು ಸುತ್ತಮುತ್ತಲು ಸ್ವಚ್ಛತೆ ಕಾಪಾಡುವುದನ್ನು ಮರೆತಂತಾಗಿದೆ. ಇನ್ನೂ ಮುಂದಾದರು ಸಂಬಂಧಪಟ್ಟ ಅಧಿಕಾರಿಗಳು ಆರೋಗ್ಯ ಕೇಂದ್ರದ ಸುತ್ತ ಮುತ್ತಲು ಸ್ವಚ್ಛತೆ ಕಾಪಾಡುವುದರ ಜೊತೆಗೆ ಇಲ್ಲಿಗೆ ಬರುವ ರೋಗಿಗಳಿಗೆ ಅನುಕೂಲ ಮಾಡಿಕೊಡಲು ಮುಂದಾಗಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

### ಮದ್ಯ ವ್ಯಸನಿಗಳ ತಂಗುದಾಣಗಳಾಗುತ್ತಿವೆ ಬಸ್ ನಿಲ್ದಾಣಗಳು

ಮಾನ್ಯರೆ,





ಇದು ಮೈಸೂರು ನಗರದ ಕೆಲವು ಬಸ್ ನಿಲ್ದಾಣಗಳ ದುಸ್ಥಿತಿ. ಈ ಚಿತ್ರಾ ಕಂಡು ಬಂದಿದ್ದು ಮೈಸೂರಿನ ಶಾಂತಲಾ ಚಿತ್ರಮಂದಿರವಿದ್ದ ಬಳಿಯ ಬಸ್ ನಿಲ್ದಾಣದ ಕಥೆ. ಬಸ್ಸಿಗಾಗಿ ಕಾಯುವ ಸಭ್ಯ ನಾಗರಿಕರು ನಿಲ್ದಾಣಗಳಲ್ಲಿ ಕೂರುವುದಿರಲಿ ಹತ್ತಿರ ನಿಲ್ಲುವುದಕ್ಕೂ ಅಸಹ್ಯ ಪಡುವಂತಾಗಿದೆ. ಇಲ್ಲಿನ ಪರಿಸ್ಥಿತಿ ಮಹಿಳೆಯರಿಗಂತೂ ಮುಜುಗರ ತಪ್ಪಿದ್ದಲ್ಲ. ಸದಾ ಮಧ್ಯಪಾನೀಯರು, ಚಿಂದಿ ಹಾಯುವವರು, ಮಾಧಕ ವ್ಯಸನಿಗಳು ಮತ್ತೆ ನಿರಾಶ್ರಿತರ ತಂಗುದಾಣದೊಂದಿಗೆ ಇಂತವರ ಅಕ್ರಮ ಅಡ್ಡೆಗಳು ಈ ಬಸ್ ನಿಲ್ದಾಣಗಳೆಂದರೆ ತಪ್ಪಾಗಲಾರದು. ಸರ್ಕಾರ ಬಸ್ ನಿಲ್ದಾಣಗಳನ್ನು ಸ್ಥಾಪಿಸಿದ ನಂತರ ಇದರ ನಿರ್ವಹಣೆ ಮಾಡದೇ ಇರುವುದು ಇಂತವರ ಆಶ್ರಯಕ್ಕೆ ದಾರಿ ಮಾಡಿಕೊಟ್ಟಂತಾಗಿದೆ. ಇನ್ನು ಮುಂದಾದರು ಮಹಾನಗರ ಪಾಲಿಕೆಯು ತನ್ನ ನೌಕರರ ಮೂಲಕ ತಾನೇ ನಿರ್ವಹಿಸಲಿ ಅಥವಾ ಯಾವುದಾದರು ಏಜನ್ಸಿಗಳಿಗೆ ನಿರ್ವಹಣೆ ಮಾಡಲು ಗುತ್ತಿಗೆ ಕೊಟ್ಟಾದರೂ ಸರಿ ಬಸ್ ನಿಲ್ದಾಣಗಳು ಸಾರ್ವಜನಿಕರ ಬಳಕೆಗೆ ಮುಕ್ತವಾಗಿರಲಿ.

–ಎನ್ ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.

## ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿ ಅವರು ತಮ್ಮ ಪುತ್ರ ರಾಜಕುಮಾರ ಜಯಚಾಮರಾಜ ಒಡೆಯರ್ ಅವರೊಂದಿಗೆ ನೆಲದ ಮೇಲೆ ಕುಳಿತಿರುವ ಈ ಛಾಯಾಚಿತ್ರವನ್ನು ತೆಗೆದಿರುವ ಸ್ಥಳ ಯಾವುದೆಂದು ಸ್ಪಷ್ಟವಾಗಿಲ್ಲ. ಛಾಯಾಚಿತ್ರದ ಅಸಾಮಾನ್ಯ ಕೋನವನ್ನು ಗಮನಿಸಿದರೆ, ಅವರು ನೆಲದ ಮೇಲೆ ಕುಳಿತಾಗ ಈ ಚಿತ್ರವನ್ನು ತೆಗೆದಿರುವುದು ಸ್ಪಷ್ಟವಾಗುತ್ತದೆ. ಹಿಂಭಾಗದಲ್ಲಿ ಕಾಣುವ ಬಿದಿರಿನ ಬುಟ್ಟಿ ಹಾಗೂ ಚಿತ್ರದಲ್ಲಿರುವ ಸರಳ ಮತ್ತು ಅನೌಪಚಾರಿಕ ಉಡುಗೆ ತೊಡುಗೆಯು ಮನೆಯ ಸಹಜ ವಾತಾವರಣವನ್ನು ಪ್ರತಿಬಿಂಬಿಸುತ್ತದೆ. 1930ರಿಂದ 1960ರ ದಶಕದವರೆಗಿನ ಅವರ ಜೀವನದ ವಿವಿಧ ಹಂತಗಳಲ್ಲಿ ತೆಗೆದ ಈ ಜೋಡಿಯ ಅನೇಕ ಛಾಯಾಚಿತ್ರಗಳಲ್ಲಿಯೂ ಇದೇ ರೀತಿಯ ಪ್ರೀತಿಪೂರ್ವಕ ಮತ್ತು ಆತ್ಮೀಯ ಬಾಂಧವ್ಯ ಸ್ಪಷ್ಟವಾಗಿ ಗೋಚರಿಸುತ್ತದೆ.

ಯುವರಾಣಿ (23.06.1893ರಿಂದ 30.12.1970) ಅವರು ದಳವಾಯಿ ದೇವರಾಜ ಅರಸರು ಮತ್ತು ಲಕ್ಷ್ಮಮ್ಮಣ್ಣಿ (ಹಲ್ಲಹಳ್ಳಿ ಬಾಲೆ ಅರಸರ ಎರಡನೇ ಪುತ್ರಿ) ಅವರ 4ನೇ ಪುತ್ರಿ. ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿ ಅವರು ಕಂಠೀರವ ನರಸಿಂಹರಾಜ ಒಡೆಯರ್ (17.06.1910) ಅವರನ್ನು ವಿವಾಹವಾದರು ಹಾಗೂ ಇವರು ನಾಲ್ಕು ಮಕ್ಕಳನ್ನು ಹೊಂದಿದ್ದರು; ಅವರೆಂದರೆ, ರಾಜಕುಮಾರ ಜಯಚಾಮರಾಜ ಒಡೆಯರ್, ರಾಜಕುಮಾರಿ ವಿಜಯಲಕ್ಷ್ಮಮ್ಮಣ್ಣಿ ಅವರು, ರಾಜಕುಮಾರಿ ಸುಜಯಕಾಂತಮ್ಮಣ್ಣಿ ಅವರು ಹಾಗೂ ರಾಜಕುಮಾರಿ ಜಯಚಾಮುಂಡಮ್ಮಣ್ಣಿ ಅವರು.

ಸದರಿ ಯುವರಾಣಿಯವರು ಎಪ್ಪತ್ತೇಳು ವರ್ಷಗಳ ತಮ್ಮ ದೀರ್ಘ ಜೀವಿತಾವಧಿಯಲ್ಲಿ ಮೈಸೂರು ಸಂಸ್ಥಾನದ ಕೆಲವು ಪ್ರಮುಖ ಘಟನಾವಳಿಗಳನ್ನು ಹತ್ತಿರದಿಂದ ಕಂಡವರು. ಹೊಸ ಅರಮನೆಯ ಉದ್ಘಾಟನೆ, ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರ ನಿಧನ, ತಮ್ಮ ನಾಲ್ಕು ಮಕ್ಕಳ ವಿವಾಹ, ಹದಿನೈದು ಮೊಮ್ಮಕ್ಕಳು ಮತ್ತು ಒಬ್ಬ ಮೊಮ್ಮಗನ ಜನನ, ತಮ್ಮ ಏಕೈಕ ಪುತ್ರನಾದ ಜಯಚಾಮರಾಜ ಒಡೆಯರ್ ಅವರ ಪಟ್ಟಾಭಿಷೇಕ (ಮಹಾರಾಜರಾಗಿ), ಮೈಸೂರು ಸಂಸ್ಥಾನವು ಭಾರತೀಯ ಒಕ್ಕೂಟಕ್ಕೆ ವಿಲೀನ, ಪುತ್ರಿ ಜಯಚಾಮುಂಡಮ್ಮಣ್ಣಿಯವರ ನಿಧನ, ರಾಜಮನೆತನದ ಖಾಸಗಿ ಭತ್ಯೆಗಳ ರದ್ದು, ತಮ್ಮ ಕೆಲ ಮೊಮ್ಮಕ್ಕಳ ವಿವಾಹ ಹಾಗೂ ತಮ್ಮ ಮೂರು ಮರಿ ಮೊಮ್ಮಕ್ಕಳ ಜನನ ಮೊದಲಾದ ಘಟನೆಗಳನ್ನು ಅವರು ಸಮೀಪದಿಂದ ಕಂಡಿದ್ದರು. ಹಲವು ಛಾಯಾಚಿತ್ರಗಳಲ್ಲಿ ಅವರು ತಮ್ಮ ಮೊಮ್ಮಕ್ಕಳೊಂದಿಗೆ ಪ್ರೀತಿಪೂರ್ವಕ ಅಜ್ಜಿಯಾಗಿ ಕಾಣಿಸಿಕೊಳ್ಳುತ್ತಾರೆ.

[ಗಾತ್ರ: 13x9 ಸೆಂ.ಮೀ; ಸಂಗ್ರಹ: ರಾಮ್‌ಸನ್ಸ್ ಕಲಾ ಪ್ರತಿಷ್ಠಾನ]



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

## ಸಂಸ್ಕೃತಿ ಚಿಂತನಾ

# ದೇವುಡು ಅವರ ಮಹಾದರ್ಶನ

ದೇವುಡು ನರಸಿಂಹಶಾಸ್ತ್ರಿಗಳು ರಚಿಸಿದ ಅಂತಿಮ ಕೃತಿ ಮಹಾದರ್ಶನ ಎಂಬ ಕಾದಂಬರಿ. ಇದನ್ನು ಬರೆಯುವಾಗ ಅವರ ಒಂದು ಕಾಲು ಇರಲಿಲ್ಲ. ಮಧುಮೇಹದ ಕಾರಣದಿಂದ ವೈದ್ಯರು ಕಾಲನ್ನು ಕತ್ತರಿಸಿಬಿಟ್ಟಿದ್ದರು. ಶರೀರ ವಿಕಲಾಂಗವಾಗಿದ್ದರೂ ಅವರ ಪ್ರತಿಭೆಗೆ ಕುಂದು ಬಂದಿರಲಿಲ್ಲ. ವೇದಕಾಲದ ದೊಡ್ಡ ಚಿಂತಕ, ಮಹಾಮೇಧಾವಿ, ಅಪಾರ ಪ್ರತಿಭಾಶಾಲಿ ಮಹರ್ಷಿ ಶ್ರೇಷ್ಠ ಯಾಜ್ಞವಲ್ಕ್ಯರ ಬಗೆಗೆ ಕಾದಂಬರಿಯನ್ನು ಬರೆಯುವ ಉತ್ಕಟಕಾಂಕ್ಷೆ ಅವರಲ್ಲಿ ಮೊದಲಿನಿಂದಲೂ ಇದ್ದಿರಬೇಕು. ವಯಸ್ಸು ಪರಿಣತವಾದಾಗ, ಬುದ್ಧಿ ಪರಿಪಕ್ವಾವಸ್ಥೆಯಲ್ಲಿದ್ದಾಗ, ಇನ್ನು ಹೆಚ್ಚು ಆಯಸ್ಸು ಇಲ್ಲವೆಂದು ಅರಿವಾದಾಗ ದೇವುಡು ಈ ಕೃತಿಯನ್ನು ಬರೆದು ವಿದ್ವಲ್ಲೋಕಕ್ಕೆ, ಕನ್ನಡ ನುಡಿಗೆ ಮಹಾದರ್ಶನವೆಂಬ ಅನರ್ಘ್ಯ ಕೃತಿಯನ್ನು ಕೊಡುಗೆಯಾಗಿ ಕೊಟ್ಟು ಕಣ್ಮರೆಯಾದರು. ಯಾಜ್ಞವಲ್ಕ್ಯರ ಜೀವನವನ್ನು ಸಮಗ್ರವಾಗಿ ಚಿತ್ರಿಸಬೇಕೆಂಬ ಅವರ ಹೆಬ್ಬಯಕೆ ಈಡೇರಿತು.

ದರ್ಶನ ಎಂಬ ಶಬ್ದವೇ ಮಂತ್ರದಂತಿದೆ. ಕಣ್ಣಿಂದ ಆಗುವ ನೋಟವೂ ದರ್ಶನವೇ. ಆದರೆ ಹೊರಗಿನ ಕಣ್ಣು ಕಾಣಲಾಗದ, ಒಳಗಣ್ಣಿಗೆ ಮಾತ್ರ ಕಾಣಿಸಿಕೊಳ್ಳುವ ಸೂಕ್ಷ್ಮ ನೋಟ ನಿಜವಾದ ದರ್ಶನ. ಸಾಂಖ್ಯದರ್ಶನ, ಬೌದ್ಧ ದರ್ಶನ ಇತ್ಯಾದಿಗಳಲ್ಲಿ ನಾವು ಉಪಯೋಗಿಸುವ ದರ್ಶನ ಶಬ್ದ ಆ ಎರಡನೆಯ ನೋಟವನ್ನು ಲಕ್ಷಿಸಿದೆ. ಆ ನೋಟವನ್ನುಳ್ಳವರು ಋಷಿಗಳು. ಋಷಿರ್ದರ್ಶನಾತ್. ಅಂತಹ ದರ್ಶನಗಳಲ್ಲೂ ಮಹತ್ ಆದದ್ದು ಮಹಾದರ್ಶನ. ಯಾಜ್ಞವಲ್ಕ್ಯ ಕಂಡದ್ದು, ಇತರರಿಗೂ ಕಾಣಿಸಿದ್ದು ಅಂತಹ ಮಹಾದರ್ಶನ. ಅದನ್ನು ಮೊದಲು ತಿಳಿದುಕೊಳ್ಳಲು ದೀರ್ಘವಾದ ತಪಸ್ಸು ಬೇಕು. ವೇದಗಳ, ಉಪನಿಷತ್ತುಗಳ ಆಳವಾದ ಅಧ್ಯಯನ ಬೇಕು. ಅದನ್ನು ಕನ್ನಡದಲ್ಲಿ ಅಭಿವ್ಯಂಜಿಸುವ ಭಾಷಾಶಕ್ತಿಬೇಕು. ಅದಕ್ಕೆ ಅನುಗುಣವಾದ ಸನ್ನಿವೇಶಗಳನ್ನು ಸೃಷ್ಟಿಸುವ ಅಂತಶ್ಶಕ್ತಿ ಬೇಕು. ಕನ್ನಡಿಗರ ಸುದೈವದಿಂದ ಇವೆಲ್ಲವೂ ದೇವುಡು ಶಾಸ್ತ್ರಿಗಳಲ್ಲಿ ಮೇಳೈಸಿದ್ದವು.

ಯಾಜ್ಞವಲ್ಕ್ಯರಂತಹ ಋಷಿ ಹುಟ್ಟಬೇಕಾದರೆ ತಂದೆ–ತಾಯಿ ಎಂತಹರಾಗಿರಬೇಕು? ಋಷಿ ದೇವರಾತ, ಆಲಂಬಿನೀದೇವಿ ಎಂಬ ಪರಮ ಸಾತ್ವಿಕ ದಂಪತಿ ಪುತ್ರ ಯಾಜ್ಞವಲ್ಕ್ಯ. ಆ ದಂಪತಿ ಗರ್ಭದಲ್ಲಿ ಹುಟ್ಟಬೇಕು, ಲೋಕದ ಅಜ್ಞಾನ ಕಳೆಯಬೇಕು ಎಂಬ ಆಕಾಂಕ್ಷೆಯಿಂದ ಒಂದು ಋಷಿಚೇತನವೇ, ಒಂದು ಪವಿತ್ರಾಕೃತಿ ಒಂದು ಗರ್ಭಸ್ಥವಾದುದನ್ನು ದೇವುಡು ಅದ್ಭುತವಾಗಿ ಚಿತ್ರಿಸಿದ್ದಾರೆ. ಅದಕ್ಕಾಗಿ ಬೇಕಾದ ಉನ್ನತಸ್ತರದ ಭಾಷೆಯನ್ನೇ ಕಾದಂಬರಿಯಲ್ಲಿ ಬಳಸಿದ್ದಾರೆ. ತಮ್ಮ ಮಗನಾಗುವವನು ತಂದೆಗಿಂತ ದೊಡ್ಡ ಮಹರ್ಷಿಯಾಗುತ್ತಾನೆ. ಲೋಕೋದ್ಧಾರಕ್ಕಾಗಿಯೇ ಅವನ ಜನ್ಮ ಎಂಬುದು ಆ ಋಷಿ ದಂಪತಿಗೆ ತಿಳಿದಿತ್ತು. ಅದಕ್ಕೆ ಅನುಗುಣವಾಗಿ ಅವನಿಗೆ ವೇದೋಕ್ತವಾದ ಸಮಸ್ತ ಸಂಸ್ಕಾರಗಳನ್ನೂ ಮಾಡಿಸಿದರು ಎಂದೂ ಅಲ್ಲಿ ವರ್ಣಿಸಲಾಗಿದೆ.

ಯಾಜ್ಞವಲ್ಕ್ಯನಿಗೆ ಉಂಟಾದ **ವಿಚಿತ್ರಾನುಭವಗಳು** ಎಂಬ ಅಧ್ಯಾಯದಲ್ಲಿ ಮಹಾದರ್ಶನ ಎಂಬ ಪದದ ವಿಶಿಷ್ಟ ವಿವರಣೆ ಇದೆ. 'ಶ್ರೇಯಸ್ಸಿನ ಹಾದಿಯಲ್ಲಿ ಹೊರಟವರು ಮೊದಲು ದೇವರುಗಳನ್ನು ಬೇರೆ ಬೇರೆಯೆಂದುಕೊಂಡಿದ್ದು ಕೊನೆಗೆ ಎಲ್ಲವನ್ನೂ ಒಟ್ಟಾಗಿ ಕಾಣುವರು. ಆಗ ಪೂರ್ಣದರ್ಶನ, ಅದೇ ಮಹಾದರ್ಶನ. (ಪು. 105). ಹಸು ಯಾಜ್ಞವಲ್ಕ್ಯನಿಗೆ **ದೂರಶ್ರವಣವಿದ್ಯೆಯ** ಸ್ವರೂಪವನ್ನು ತಿಳಿಸಿಕೊಟ್ಟಿದ್ದಾರೆ. ಹಸುಗಳಿಗೆ ಈ ರೀತಿಯಾದ ಅತೀಂದ್ರಿಯ ಜ್ಞಾನ ಇತ್ತೆಂದು ನಂಬುವುದು ಹೇಗೆ? ಯಾಜ್ಞವಲ್ಕ್ಯನನ್ನು ಎತ್ತಿ ಕೊಂಡಾಗ ಅವನಿಂದ ತಂದೆಗೂ ತಾಯಿಗೂ ಗೋಪಾಲಕನಿಗೂ ಶಕ್ತಿಯೊಂದು ತಮ್ಮೊಳಕ್ಕೆ ಹರಿಯುವ ಅನುಭವವಾಗುತ್ತದೆ. ಅದೇನೆಂದು ದೇವರಾತನಿಗೂ ಅರ್ಥವಾಗುವುದಿಲ್ಲ. ಹೋಗಿ ಪುರೋಹಿತ ಬುಡಿಲರನ್ನು ಕೇಳುತ್ತಾನೆ. ಅವರು ಹೇಳುವ ಮಾತುಗಳು ಸಾಮಾನ್ಯ ಓದುಗರಿಗೆ ಎಷ್ಟು ಅರ್ಥ ಆಗುವುವೋ ತಿಳಿಯದು. ಉದಾಹರಣೆಗೆ "ನಾನು ಅಪರಿಗ್ರಹವ್ರತವನ್ನು ಹಿಡಿದಿರುವುದನ್ನು ಬಲ್ಲೆಯಷ್ಟೇ? ಅದರಿಂದ ಏನು ಪ್ರಯೋಜನವಾಗಿದೆ ಬಲ್ಲೆಯಾ? ಈ ವಿದ್ಯೆಗಳು ತಾವಾಗಿ ಅಪರಿಗ್ರಹಿಯ ಬಳಿ ಬರುತ್ತವೆ." (ಪು. 114). ಉಪಾಸನೆಯ ಬಗೆಗೆ ಬುಡಿಲರ ಬಾಯಿಂದ ತಮ್ಮ ಮನಸ್ಸಿನ ಭಾವನೆಯನ್ನೇ ಹೊರಗೆಡವಿದ್ದಾರೆ. "ಈಗಿನವರು ಉಪಾಸನಾ ಎಂದರೆ ನದಿಗೆ ಸ್ನಾನಕ್ಕೆ ಹೋದ ಹಾಗೆ ಎಂದುಕೊಂಡಿದ್ದಾರೆ. ಅದಲ್ಲ, ಉಪಾಸ್ಯಮಾನ ದೇವತೆಯು ಸರ್ವಗತನು, ಎಲ್ಲೆಲ್ಲೂ ಇರುವವನು ಎಂಬುದನ್ನು ಮನಗಂಡು, ಯಾವಾಗಲೂ ತಾನು ಅದರ ಮಡಿಲಲ್ಲಿ ಇರುವೆನೆಂದು ಮನಸ್ಸಿಗೆ ನಂಬಿಕೆ ಬರುವುದು ಉಪಾಸನೆ." (ಪು. 115)



ದೇವುಡು ನರಸಿಂಹಶಾಸ್ತ್ರಿಗಳು

ಮುಂದೆ ಯಾಜ್ಞವಲ್ಕ್ಯನು ಸರ್ವಜ್ಞನಾಗುತ್ತಾನೆ ಎಂಬ ನಿರೀಕ್ಷೆ ಎಲ್ಲ ಜನರಲ್ಲಿದ್ದುದೂ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಐದನೆಯ ವರ್ಷದ ವಯಸ್ಸಿನಲ್ಲೇ ಅವನ ಉಪನಯನವಾಗುತ್ತದೆ. ಮಂತ್ರ ಜನ್ಮವನ್ನು ಕೊಡುವ ಆ ಸಂಸ್ಕಾರದ ವೈಭವವನ್ನು ಹೇಳತೀರದು. ಅದನ್ನು ವಾಚಕರು ಗ್ರಂಥದಲ್ಲೇ ಓದಿ ಆನಂದಿಸಬೇಕು. ವೇದಕಾಲದ ಬ್ರಹ್ಮನಿಷ್ಠೆಯ ಸಂಸ್ಕೃತಿಯನ್ನು ಅರಿಯಲು ಮಹಾದರ್ಶನದ ಪುಟಗಳನ್ನು ಶ್ರದ್ಧೆಯಿಂದ ಓದಬೇಕು. ಕಥೆ ಪುಸ್ತಕವನ್ನೋ ವೃತ್ತಾಂತ ಪತ್ರಿಕೆಯನ್ನೋ ಓದುವಂತೆ ಅಲ್ಲ. ಭಗವದ್ಗೀತೆಯನ್ನು, ಉಪ ನಿಷತ್ತುಗಳನ್ನು ಪಠಿಸುವಂತೆ ತದೇಕಚಿತ್ತರಾಗಿ ಓದಬೇಕು. ಆ ಪಠನ ಗಂಗಾಸ್ನಾನ ಸಮಾನವಾಗುತ್ತದೆ.

ಬ್ರಾಹ್ಮಣ ಎಂಬ ಶಬ್ದಕ್ಕೆ ವಿಶಿಷ್ಟ ಅರ್ಥವನ್ನೂ ಬುಡಿಲರು ಹೇಳುತ್ತಾರೆ. ಆದರ್ಶ ಮಾತ್ರವೆಂದು ಇತರರು ಕೈಮುಗಿದು ಬಿಟ್ಟುದನ್ನು ತನ್ನ ಆಚರಣೆಯಲ್ಲಿ ತರುವುದಕ್ಕೆ ತ್ರಿಕರಣಪೂರ್ವಕವಾಗಿ ಒದ್ದಾಡುವವನು ಬ್ರಾಹ್ಮಣ. ಶ್ರೇಯ; ಪ್ರೇಯಗಳಲ್ಲಿ ಶ್ರೇಯಸ್ಸಿಗಾಗಿ ಪ್ರೇಯಸ್ಸನ್ನು ಬಲಿಕೊಡುವುದಕ್ಕೆ ಸಿದ್ಧನಾಗಿರುವವನು ಬ್ರಾಹ್ಮಣ. ವಿಶ್ವವೆಲ್ಲವೂ ಒಂದು. ತನ್ನ ಕರ್ಮವು ಕ್ಷುದ್ರವಾಗಿರಲಿ, ಬೃಹತ್ತಾಗಿರಲಿ, ಅದರಿಂದ ವಿಶ್ವಸ್ಥಿತಿಯು ಏರುಪೇರಾಗುವುದು ಎಂದು ನಂಬಿರುವವನು ಬ್ರಾಹ್ಮಣ. ವಿಶ್ವದಿಂದ ಆಚೆಗೆ ಇರುವ ಅಮೂರ್ತವಾದ ಸತ್ಯವನ್ನು ಸತತವಾಗಿ ಗುರಿಯಲ್ಲಿ ಇಟ್ಟುಕೊಂಡಿರುವನು ಬ್ರಾಹ್ಮಣ. ಇತರರು ಅರ್ಥಕಾಮಗಳು ಜೀವನದ ದರ್ಶನವೆನ್ನುವುದಾದರೆ, ಇಹದಲ್ಲಿ ಧರ್ಮ, ಪರದಲ್ಲಿ ಮೋಕ್ಷ ಎಂಬ ಮಹಾದರ್ಶನವುಳ್ಳವನು ಬ್ರಾಹ್ಮಣ." (ಪು. 135–136).

ಇಂತಹ ವಾಕ್ಯಗಳನ್ನು ದೇವುಡು ಅವರಲ್ಲದೆ, ಬೇರೆ ಯಾವ ಸಾಹಿತಿ ಬರೆಯಲು ಸಾಧ್ಯ?

ವೈಶಂಪಾಯನ ಮಹರ್ಷಿಗಳ ಗುರುಕುಲದಲ್ಲಿ ಬ್ರಹ್ಮಚಾರಿಯಾಗಿದ್ದ ಯಾಜ್ಞವಲ್ಕ್ಯ ಗುರುಕುಲವನ್ನು ಬಿಟ್ಟು ಹೋಗುವ ಸಂದರ್ಭವನ್ನು ದೇವುಡು ಅನನ್ಯ ಸಾಧಾರಣವಾಗಿ ಚಿತ್ರಿಸಿದ್ದಾರೆ. ಗುರುಶಿಷ್ಯರು ಕೋಪೋದ್ದೀಪಿತರಾಗಿ ಕಾಣಿಸಿಕೊಂಡುದೂ ಶ್ರುತಿಭಗವತಿಯ ಇಚ್ಛೆಗನುಸಾರವಾಗಿಯೇ ಎಂದು ಅವರು ಕಲ್ಪಿಸಿರುವುದು ಲೋಕೋತ್ತರವಾಗಿದೆ. ಯಾಜ್ಞವಲ್ಕ್ಯನು ವೈಶಂಪಾಯನರ ಬಳಿಯಲ್ಲಿ ಕಲಿತುದೆಲ್ಲವನ್ನೂ ಕಳೆದುಕೊಂಡಿದ್ದಾನೆ. ಅವನನ್ನು ಉದ್ಧರಿಸಲು ಬುಡಿಲರು ದೇವತೋಪಾಸನೆಯನ್ನು ಮಾಡಲು ಹೇಳುತ್ತಾರೆ. ಅದರ ಫಲವಾಗಿ ಅವನಿಗೆ ಬ್ರಹ್ಮವಿದ್ಯಾ ಪ್ರಾಪ್ತಿಯಾಗುತ್ತದೆ. ವಿವಾಹವೂ ಜರುಗುತ್ತದೆ. ಕಾತ್ಯಾಯಿನಿ ಯಾಜ್ಞವಲ್ಕ್ಯನ ಪತ್ನಿಯಾಗುತ್ತಾಳೆ. ಆದಿತ್ಯೋಪಾಸನೆಯಿಂದ ಯಾಜ್ಞವಲ್ಕ್ಯನು ಯಜುರ್ವೇದದ ಹೊಸ ಸಂಹಿತೆಯನ್ನೇ ಪಡೆದುಕೊಳ್ಳುತ್ತಾನೆ. ಆದಿತ್ಯನು ವಾಜಯ (ಕುದುರೆಯ) ರೂಪದಲ್ಲಿ ಬಂದು ಅನುಗ್ರಹಿಸಿದುದರಿಂದ ಅದಕ್ಕೆ ವಾಜಸನೇಯೀ ಸಂಹಿತೆಯೆಂದು ಹೆಸರು. ಯಾಜ್ಞವಲ್ಕ್ಯನು ಮಹರ್ಷಿಯೂ ಬ್ರಹ್ಮರ್ಷಿಯೂ ಆಗುತ್ತಾನೆ. ವಾಜಸನೇಯೀ ಸಂಹಿತೆಯಲ್ಲಿ ಅಂತರ್ಗತವಾಗಿರುವುದೇ ಸಂಹಿತೋಪನಿಷತ್. ಇದೇ ಲೋಕದಲ್ಲಿ ಈಶಾವಾಸ್ಯೋಪನಿಷತ್ತೆಂದು ಪ್ರಸಿದ್ಧವಾಗಿದೆ. ಕುಲಪತಿ ಉದ್ದಾಲಕರ ಮತ್ತು ಜನಕ ಮಹಾರಾಜರ ಎದುರಿನಲ್ಲಿ ಉಪನಿಷತ್ತಿನ ಪಠನವು ನಡೆಯುತ್ತದೆ. ಆಶ್ಚರ್ಯವೆಂದರೆ ಅಧ್ಯಾತ್ಮದ ನೆಲೆಯುಳ್ಳ ಮೈತ್ರೇಯಿಯೂ ಯಾಜ್ಞವಲ್ಕ್ಯನ ಪತ್ನಿಯಾಗುತ್ತಾಳೆ. ಇಬ್ಬರೂ ಅಕ್ಕ ತಂಗಿಯರಂತೆ ನಡೆದುಕೊಳ್ಳುತ್ತಾರೆ. ಕಾತ್ಯಾಯಿನಿ ಧರ್ಮಪತ್ನಿ, ಮೈತ್ರೇಯಿ ಮೋಕ್ಷಪತ್ನಿ, ಬ್ರಹ್ಮವಾದಿನಿ. ಹೀಗೆಯೇ ಕಥೆ ಮುಂದೆ ಹೋಗುತ್ತದೆ.

ಮಹಾರಾಜ ಜನಕನು ದೊಡ್ಡಜ್ಞಾನಸತ್ರವನ್ನೇರ್ಪಡಿಸುತ್ತಾನೆ. ಎಲ್ಲ ವಿದ್ವದ್ವರೇಣ್ಯರಿಗೂ ಆಹ್ವಾನವು ತಲುಪುತ್ತದೆ. ಜ್ಞಾನನಗರವೇ ರೂಪತಾಳುತ್ತದೆ. ಅರಸನಿಗೆ ಭೂಮಿಯಲ್ಲಿ ಅಪಾರ ಹೊನ್ನು ಸಿಕ್ಕುತ್ತದೆ.

ಅಲ್ಲಿದ್ದ ನಾಣ್ಯದ ಮೇಲೆ ಶ್ಲೋಕವಿರುತ್ತದೆ–
ದೇವರಾಜಾನುಗ್ರಹೇಣ ಜ್ಞಾನಸತ್ರಾಯ ಸಂಭೃತಮ್ ।
ಮನುನಾ ಮಾನವೇಂದ್ರೇಣ ಜನಕಾಯ ನಿವೇದಿತಮ್ ॥

(ಇಂದ್ರನ ಅನುಗ್ರಹದಿಂದ ಜ್ಞಾನಸತ್ರಕ್ಕಾಗಿ ಸಂಗ್ರಹಿಸಿ (ಪು. 334). ಇಟ್ಟಿದ್ದ ಇ ನಿಧಿಯು ಮಾನವೇಂದ್ರ ಮನುವಿನಿಂದ ಜನಕರಾಜನಿಗೆ ಸಮರ್ಪಿತವಾಗಿದೆ.

ಜನಕರಾಜನ ಆಜ್ಞೆಯಂತೆ ಒಂದು ಸಾವಿರ ಹಸುಗಳು ಬಂದು ನಿಂತಿವೆ. ನೂರಾರು ವಿದ್ವಾಂಸರು, ಗಾರ್ಗಿ ಎಂಬ ವಿದುಷಿ ಎಲ್ಲರೂ ಬಂದರು. ಶಾರದಾ ಮಂಟಪದ ನಿರ್ಮಾಣವಾಯಿತು. ಇದರ ಭವ್ಯ ವರ್ಣನೆಯನ್ನು ದೇವುಡು ಮಾಡಿದ್ದಾರೆ. ಸರ್ವಶ್ರೇಷ್ಠ ಜ್ಞಾನಿಗೆ ತೊಡಿಸುವ ರತ್ನ ಕಿರೀಟದ ಬಣ್ಣನೆಯೂ ಇದೆ. ಸರ್ವಜ್ಞಪೀಠವನ್ನೇರುವವರಿಗಾಗಿ ಇರಿಸಿದ್ದ ಸಾವಿರ ಗೋವುಗಳ ಬಣ್ಣನೆ ಇಂತಿದೆ–

"ಒಂದು ಸಾವಿರ ಗೋವುಗಳು ಸವತ್ಸಗಳಾದ ಅವುಗಳ ಜೊತೆಗೆ ಅರಮನೆಯ ಗೂಳಿಗಳು ಇಪ್ಪತ್ತೈದು. ಇವನ್ನು ಕಟ್ಟುವುದಕ್ಕೆ ಜ್ಞಾನ ಮಂಟಪದ ಎರಡರಷ್ಟಾದರೂ ಇರುವ ತೋಪಿನಲ್ಲಿ ಸ್ಥಾನ ಮಾಡಿದ. ಆ ಹಿಂಡನ್ನು ನೋಡುತ್ತಿದ್ದರೇ ಸಾಕು. ಕಣ್ಣು ಕೋರೈಸಿ ಹೋಗುವುದು. ಅವುಗಳನ್ನೆಲ್ಲ ತೊಳೆದು ಅರಿಶಿನ ಕುಂಕುಮ ಹಚ್ಚಿದ ಮೇಲೆ ಹೇಳಬೇಕಾದುದೇನು? ಜೊತೆಗೆ ಒಂದೊಂದಕ್ಕೂ ಒಂದೊಂದು ನೀರಾಜಿಯ ಮೇಲು ಹೊದಿಕೆ. ಕಾಲಿಗೆ ಕೊಂಬಿಗೆ ಬೆಳ್ಳಿಯ ಗೊಗ್ಗರಗಳು. ಕತ್ತಿಗೆ ಹಿತ್ತಾಳೆಯ ಸರಪಣಿ. ಮುಖಕ್ಕೆ ನೀರಾಜಿಯ ಕಂಬಿ ಸೇರಿರುವ ಹಗ್ಗದ ಮೊಕವಾಡಗಳು. ಇವೆಲ್ಲಕ್ಕೂ ಕಲಶವೆಂಬಂತೆ ಎರಡು ಕೊಂಬಿಗೂ ಐದೈದು ಮನುವಿನ ಹೊನ್ನುಗಳು. ಒಂದೊಂದಕ್ಕೂ ಹಾಲು ಕರೆಯುವುದಕ್ಕೆ ಒಂದು ಸಣ್ಣ ಪಾತ್ರೆ ಒಂದು ಕೊಡದಷ್ಟಾದರೂ ಹಿಡಿಯುವ ದೊಡ್ಡ ಪಾತ್ರೆವೊಂದು. ಅದಕ್ಕೆ ತಕ್ಕ ಆಳು, ಕಾಳು, ಹುಲ್ಲು, ಹಿಂಡಿ ಅಷ್ಟೇನು? ಆ ಹೊನ್ನುಗಳೇ ಹತ್ತು ಸಾವಿರವಾಗುವುವು. (ಪುಟ 373).

ರಾಜನ ಸಮಕ್ಷಮದಲ್ಲಿ, ಅಷ್ಟು ಜನ ವಿದ್ವಾಂಸರ ಮುಂದೆ ಮಾತನಾಡುವ ಅವಕಾಶ ಸಾಮಾನ್ಯವೇ? ಮಹಾರಾಜರಿಂದ ಘೋಷಣೆ ಸಾಲಂಕಾರವಾದ ಸಹಸ್ರ ಗೋವುಗಳನ್ನು ಬ್ರಹ್ಮಿಷ್ಠರಾದವರು. ತೆಗೆದುಕೊಳ್ಳಬೇಕೆಂದು ಘೋಷಣೆಯಾಗಿದೆ.

ಆದರೆ ಯಾರೂ ಧೈರ್ಯದಿಂದ ಮುಂದೆ ಬರಲಿಲ್ಲ. ಆಗ ಎದ್ದು ನಿಂತ ಮಹಾವ್ಯಕ್ತಿ ಯಾಜ್ಞವಲ್ಕ್ಯರು. ಅವರು ತಮ್ಮ ಶಿಷ್ಯನಿಗೆ ಗೋವುಗಳನ್ನು ಆಶ್ರಮಕ್ಕೆ ತೆಗೆದುಕೊಂಡು ಹೋಗಲು ಹೇಳಿದರು. ಅನಂತರದಲ್ಲಿ ಅಲ್ಲಿದ್ದ ಪಂಡಿತರಿಗೂ ಯಾಜ್ಞವಲ್ಕ್ಯರಿಗೂ ದೊಡ್ಡ ವಾದಯುದ್ಧ. ಪ್ರಶ್ನೆಗಳು, ಉತ್ತರಗಳು, ಉಪಪ್ರಶ್ನೆಗಳು ಇತ್ಯಾದಿ.

ಕೊನೆಯಲ್ಲಿ ಗಾರ್ಗಿಯ ಪ್ರಶ್ನೆಗಳು ಅವುಗಳಿಗೆ ಯಾಜ್ಞವಲ್ಕ್ಯರ ಉತ್ತರ. ಅದೂ ಆದ ಮೇಲೆ ವಿದಗ್ಧನ ಸವಾಲು. ಅದಕ್ಕೂ ಯಾಜ್ಞವಲ್ಕ್ಯರಿಂದ ತಕ್ಕ ಜವಾಬು. ಅಂತಿಮವಾಗಿ ಸಮಸ್ತ ಸಭಾಸದರಿಂದ ಭಗವತೇ ಯಾಜ್ಞವಲ್ಕ್ಯಾಯ ನಮಃ ಎಂಬ ಕೂಗು. ಜನಕ ಮಹಾರಾಜನಿಂದ ಯಾಜ್ಞವಲ್ಕ್ಯರಿಗೆ ಸರ್ವಜ್ಞ ಪಟ್ಟಾಭಿಷೇಕ. ಇದೆಲ್ಲ ಕಣ್ಣಿಗೆ ಕಟ್ಟುವಂತೆ ದೇವುಡು ಅವರ ಗ್ರಂಥದಲ್ಲಿ ಮೂಡಿಬಂದಿದೆ.

ಭಗವಾನ್ ಯಾಜ್ಞವಲ್ಕ್ಯರು ಕರ್ಮಕಾಂಡದಲ್ಲೇ ಮುಳುಗಿರಲಿಲ್ಲ. ಸನ್ಯಾಸವನ್ನು ಸ್ವೀಕರಿಸಿ ಮುಕ್ತಿಗೆ ತೆರಳಿದರು. ಈ ಮಹಾವ್ಯಕ್ತಿಯ ಜೀವನ ದರ್ಶನವನ್ನು ಮಹಾದರ್ಶನದಲ್ಲಿ ಭವ್ಯವಾಗಿ ಚಿತ್ರಿಸಿದ ದೇವುಡು ನರಸಿಂಹಶಾಸ್ತ್ರಿಗಳಿಗೆ ಎಷ್ಟು ವಂದಿಸಿದರೂ ಸಾಲದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಬುಧವಾರ 24 ಜೂನ್ 2026

# ಮೈಸೂರಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಮೇಳ

## ಪ್ರತಿ ತ್ರೈಮಾಸಿಕದಲ್ಲಿ ಮೇಳ ನಡೆಸಲು ಚಿಂತನೆ: ಸಂಸದ ಯದುವೀರ್




ಮೈಸೂರಿನ ಕಾಡಾ ಕಚೇರಿಯಲ್ಲಿ ಮಂಗಳವಾರ ನಡೆದ ಕೇಂದ್ರ ಸರ್ಕಾರದ ಪಿಂಚಣಿ ಯೋಜನೆ ಮೇಳದಲ್ಲಿ ಸಂಸದ ಯದುವೀರ್ ಒಡೆಯರ್ ಅವರು ವೃದ್ಧಾಪ್ಯ ವೇತನದ ಆದೇಶ ಪ್ರತಿಯನ್ನು ಮಹಿಳೆಯರಿಗೆ ವಿತರಿಸಿದರು.

ಮೈಸೂರು, ಜೂ.23(ಬಿಎಲ್‌ಯು)–ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನಸಾಮಾನ್ಯರಿಗೆ ಮಾಹಿತಿ ನೀಡಲು ಮೈಸೂರಿನ ಕಾಡಾ ಕಚೇರಿಯಲ್ಲಿ ಇಂದು ಆಯೋಜಿಸಿದ್ದ ಕೇಂದ್ರ ಸರ್ಕಾರದ ಯೋಜನೆಗಳ ಮೇಳಕ್ಕೆ ಸಂಸದ ಯದುವೀರ್ ಒಡೆಯರ್ ಅವರು ಮಂಗಳವಾರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಜನರು ಮಾಹಿತಿ ಪಡೆದುಕೊಂಡು ಅದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕೇಂದ್ರ ಸರ್ಕಾರ ಹಲವು ಜನರ ಕಲ್ಯಾಣಕ್ಕಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು ಇದು ಪ್ರತಿಯೊಬ್ಬರಿಗೆ ತಲುಪುವುದು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಯೋಜನೆ ಬಗ್ಗೆ ಪ್ರತಿಯೊಬ್ಬರಿಗೂ ಸಮಗ್ರ ಮಾಹಿತಿ ನೀಡಲಿದ್ದಾರೆ.

ಪ್ರತಿ ತ್ರೈಮಾಸಿಕದಲ್ಲಿ ಇಂತಹ ಮೇಳ ಆಯೋಜಿಸುವ ಚಿಂತನೆ ಇದೆ ಎಂದು ಯದುವೀರ್ ತಿಳಿಸಿದರು.

ಕಾಡಾ ಕಚೇರಿ ಆವರಣದಲ್ಲಿ ವಿವಿಧ ಕೌಂಟರ್‌ಗಳಲ್ಲಿ ಹಾಜರಿರುವ ಮೈಸೂರು ನಗರ ಪಾಲಿಕೆ, ಕೃಷಿ ಇಲಾಖೆ ಹಾಗೂ ಬ್ಯಾಂಕ್ ಅಧಿಕಾರಿಗಳು ಕೇಂದ್ರ ಸರ್ಕಾರದ ಯೋಜನೆಯ ಬಗ್ಗೆ ಮಾಹಿತಿ ನೀಡಿಲಿದ್ದು, ಇದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಂಸದ ಯದುವೀರ್ ಸಾರ್ವಜನಿಕರಿಗೆ ಸಲಹೆ ನೀಡಿದರು.

### ಕೇಂದ್ರದ ಪ್ರಮುಖ ಜನ ಕಲ್ಯಾಣ ಯೋಜನೆಗಳ ವಿವರ

ಪ್ರಧಾಮಂತ್ರಿ ಸುರಕ್ಷಾ ಬಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಸುಕನ್ಯಾ ಸಮೃದ್ಧಿ ಯೋಜನೆ, ಪ್ರಧಾನಮಂತ್ರಿ ಕೌಶಲ್ಯ ವಿಕಾಸ್ ಯೋಜನೆ, ಸ್ವಚ್ಛ ಭಾರತ್ ಮಿಷನ್, ಪಿಎಂ ಗತಿ ಶಕ್ತಿ ರಾಷ್ಟ್ರೀಯ ಮಹಾ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ, ರಾಷ್ಟ್ರೀಯ ಗ್ರಾಮೀಣ ಮತ್ತು ನಗರ ಜೀವನೋಪಾಯ ಮಿಷನ್ ಬಗ್ಗೆ ಮಾಹಿತಿ ನೀಡಲಾಯಿತು.

ಪ್ರಧಾನಮಂತ್ರಿ ಮುದ್ರಾ ಯೋಜನೆ, ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮ, ಪ್ರಧಾನಮಂತ್ರಿ ಬೀದಿ ವ್ಯಾಪಾರಿಗಳು ಆತ್ಮನಿರ್ಭರ ನಿಧಿ ಯೋಜನೆ, ಪ್ರಧಾನಮಂತ್ರಿ ಸೂರ್ಯ ಘರ್–ಮುಫ್ತ್ ಬಿಜ್ಲಿ ಯೋಜನೆ, ಪಿಎಂ ವಿಶ್ವಕರ್ಮ ಯೋಜನೆ, ಪ್ರಧಾಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರಿಕೀಕರಣ ಯೋಜನೆ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ, ಪ್ರಧಾನಮಂತ್ರಿ ಅವಾಸ್ ಯೋಜನೆ, ಆಯುಷ್ಮಾನ್ ಭಾರತ್–ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ ಹಾಗೂ ಪ್ರಧಾನಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ ಬಗ್ಗೆ ವಿವರ ನೀಡಿದ ಅಧಿಕಾರಿಗಳು ಇದನ್ನು ಸದುಪಯೋಗ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಿ ಎಂದು ಸಂಸದ ಯದುವೀರ್ ಒಡೆಯರ್ ಸಲಹೆ ನೀಡಿದರು.

# ಸಚಿವ ಪ್ರಿಯಾಂಕ್ ಖರ್ಗೆ ಓಲೈಸಲು ಹಿಂದೂಪರ ಸಂಘಟನೆ ಕಾರ್ಯಕರ್ತರ ಮೇಲೆ ಕೇಸ್ ದಾಖಲು

## ಮೈಸೂರು ಪೊಲೀಸರ ವಿರುದ್ಧ ಸಂಸದ ಯದುವೀರ್ ಒಡೆಯರ್ ಕಿಡಿ

- ಪ್ರಿಯಾಂಕ್ ಖರ್ಗೆ ತಾಳಕ್ಕೆ ಕುಣಿಯುತ್ತಿರುವ ಪೊಲೀಸರು
- ಇದೇ ಇಚ್ಛಾಶಕ್ತಿ ಬಾಂಗ್ಲಾ ವಲಸಿಗರ ಬಂಧಿಸುವತ್ತ ಏಕಿಲ್ಲ!
- ಮಾಹಿತಿ ನೀಡಿದ ದೇಶ ಪ್ರೇಮಿಗಳ ವಿರುದ್ಧವೇ ದೂರು
- ಪೊಲೀಸರ ಕಾರ್ಯಾಚರಣೆಗೆ ಸಹಕಾರ ನೀಡಿದ್ದೇ ತಪ್ಪಾ



ಸಂಸದ ಯದುವೀರ್ ಒಡೆಯರ್ ಪತ್ರಕರ್ತರೊಂದಿಗೆ ಮಾತನಾಡಿದರು.

ಮೈಸೂರು, ಜೂ.23(ಬಿಎಲ್‌ಯು)–ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಓಲೈಸುವ ಸಲುವಾಗಿ ಪೊಲೀಸರು ಹಿಂದೂಪರ ಸಂಘಟನೆಗಳ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಕಿಡಿಕಾರಿದ್ದಾರೆ.

ಮೈಸೂರಿನ ಕಾಡಾ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಾಗಾದರೆ ಅಕ್ರಮ ಬಾಂಗ್ಲಾ ವಲಸಿಗರು ಮೈಸೂರಿಗೆ ಬಂದಿರುವ ಬಗ್ಗೆ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಮಾಹಿತಿ ನೀಡಿದ್ದು ತಪ್ಪಾ ಎಂದು ಪ್ರಶ್ನಿಸಿದರು.

ಅಕ್ರಮ ಬಾಂಗ್ಲಾ ವಲಸಿಗರು ಮೈಸೂರಿಗೆ ಬಂದಿರುವ ಬಗ್ಗೆ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪೊಲೀಸರಿಗೆ ಮಾಹಿತಿ ನೀಡಿ ಅವರ ಕಾರ್ಯಾಚರಣೆಗೆ ನೆರವಾಗಿದ್ದಾರೆ. ಆ ಮೂಲಕ ಪೊಲೀಸರ ಕಾನೂನಾತ್ಮಕ ಕ್ರಮಗಳಿಗೆ ಬೆಂಬಲವಾಗಿ ನಿಂತಿದ್ದಾರೆ.

ಆದರೆ ಪೊಲೀಸರು ಅಕ್ರಮ ಬಾಂಗ್ಲಾ ವಲಸಿಗರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ, ಆರು ಹಿಂದೂಪರ ಸಂಘಟನೆ ಕಾರ್ಯಕರ್ತರ ವಿರುದ್ಧ ದೂರು ದಾಖಲಿಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರನ್ನು ಓಲೈಸುವ ದೃಷ್ಟಿಯಿಂದ ಪೊಲೀಸರು ಇಂತಹ ಕ್ರಮ ಕೈಗೊಂಡಿದ್ದಾರೆ ಎಂದು ಆಪಾದಿಸಿದರು.

ಈ ವಿಚಾರದಲ್ಲಿ ನ್ಯಾಯಯುತ ತನಿಖೆ ನಡೆಸಿದರೆ ನನ್ನ ಅಭ್ಯಂತರವಿಲ್ಲ. ಆದರೆ ಪೊಲೀಸರಿಗೆ ನೆರವು ನೀಡಿ, ಯಾವುದೇ ತಪ್ಪು ಮಾಡದವರ ವಿರುದ್ಧ ದೂರು ದಾಖಲಿಸಿರುವುದು ಎಷ್ಟು ಸರಿ ಎಂದು ಮತ್ತೊಮ್ಮೆ ಪ್ರಶ್ನಿಸಿದರು. ಅಕ್ರಮವಾಗಿ ನಮ್ಮ ದೇಶಕ್ಕೆ ಯಾರೇ ಬಂದರೂ ಅವರನ್ನು ತಡೆಯುವುದು ಪೊಲೀಸರ ಆದ್ಯ ಕರ್ತವ್ಯ. ಆದರೆ, ಅಕ್ರಮ ವಲಸಿಗರ ವಿರುದ್ಧ ಕ್ರಮ ಕೈಗೊಳ್ಳುವುದು ಬಿಟ್ಟು ದೇಶಾಭಿಮಾನ ಪ್ರದರ್ಶಿಸಿದವರ ವಿರುದ್ಧ ದೂರು ದಾಖಲಿಸಿದ್ದಾರೆ. ಇದು ಪೊಲೀಸರ ಕಾನೂನು ವಿರೋಧಿ ಧೋರಣೆ ಎಂದು ಯದುವೀರ್ ಆರೋಪಿಸಿದರು.

### ಪ್ರಿಯಾಂಕ್ ಖರ್ಗೆಯಿಂದ ಹಿಂದೂಗಳ ಟಾರ್ಗೆಟ್

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆ, ಧೋರಣೆಯನ್ನು ಗಮನಿಸಿದರೆ ಹಿಂದೂಗಳನ್ನು ಟಾರ್ಗೆಟ್ ಮಾಡುತ್ತಿರುವುದು ಸ್ಪಷ್ಟವಾಗಿದೆ ಎಂದು ಸಂಸದ ಯದುವೀರ್ ಒಡೆಯರ್ ಆರೋಪಿಸಿದರು.

ಪ್ರಿಯಾಂಕ್ ಖರ್ಗೆ ಅವರು ಪ್ರತಿ ದಿನ ನೀಡುತ್ತಿರುವ ಹೇಳಿಕೆಗಳನ್ನು ಗಮನಿಸಿದರೆ ಹಿಂದೂಗಳನ್ನು ಟಾರ್ಗೆಟ್ ಮಾಡುತ್ತಿರುವುದು ಸ್ಪಷ್ಟವಾಗುತ್ತದೆ ಎಂದು ದೂರಿದರು. ಪೊಲೀಸರು ಪ್ರಿಯಾಂಕ್ ಖರ್ಗೆ ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಪ್ರಿಯಾಂಕ್ ಖರ್ಗೆ ಅವರು ಗೃಹ ಸಚಿವರಾದ ನಂತರ ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ಇದು ದಿಟವಾಗುತ್ತದೆ ಎಂದು ಯದುವೀರ್ ಆಪಾದಿಸಿದರು.

**ರೈತರ ಪರವಾಗಿದ್ದೇವೆ:** ಬಿಡದಿ ಟೌನ್ ಶಿಪ್ ಯೋಜನೆಯನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಈ ವಿಚಾರದಲ್ಲಿ ನಾವು ರೈತರ ಪರವಾಗಿದ್ದೇವೆ ಎಂದರು.

ಕೃಷಿ ಭೂಮಿ ನೀಡಲು ಜನರು ಒಪ್ಪುತ್ತಿಲ್ಲ. ಆದರೂ ಸರ್ಕಾರ ಬಲವಂತವಾಗಿ ಭೂಮಿ ಕಸಿದುಕೊಳ್ಳಲು ಮುಂದಾಗಿದೆ ಎಂದು ಕಿಡಿಕಾರಿದರು. ಸರ್ಕಾರ ಜನರಿಗೆ ಅನುಕೂಲ ಮಾಡಿಕೊಡುವ ಯೋಜನೆ ರೂಪಿಸಬೇಕು. ಆದರೆ ತಮಗೆ ಅನುಕೂಲವಾಗುವ ಯೋಜನೆ ರೂಪಿಸುತ್ತಿದ್ದಾರೆ ಎಂದು ಯದುವೀರ್ ಆಪಾದಿಸಿದರು.

**ಆಣೆ ಪ್ರಮಾಣ ವಿಚಾರ:** ವಿಧಾನ ಪರಿಷತ್ ಚುನಾವಣೆಯಲ್ಲಿ ಕೆಲವು ಶಾಸಕರು ಅಡ್ಡ ಮತದಾನ ಸಂಬಂಧ ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ವಿಚಾರದಲ್ಲಿ ನಮ್ಮ ಪಕ್ಷದ ಹಿರಿಯರು ನಿರ್ಧಾರ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

ಮೊದಲು ಸತ್ಯ ಶೋಧನಾ ಸಮಿತಿ ವರದಿ ನೀಡಲಿ. ತರುವಾಯ ಮುಂದೆ ಏನು ಮಾಡಬೇಕು ಎಂಬುದು ನಿರ್ಧಾರವಾಗುತ್ತದೆ ಎಂದು ಯದುವೀರ್ ಅಭಿಪ್ರಾಯಪಟ್ಟರು.

> “ಅಕ್ರಮ ವಲಸಿಗರು ಮೈಸೂರಿಗೆ ಹೆಚ್ಚಾಗಿ ಬರುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ರೈಲ್ವೆ ನಿಲ್ದಾಣಗಳಲ್ಲಿ ಹೆಚ್ಚಿನ ತಪಾಸಣೆ ನಡೆಸಬೇಕು. ಇದು ದೇಶದ ಭದ್ರತೆಯ ವಿಚಾರವಾಗಿರುವ ಹಿನ್ನೆಲೆಯಲ್ಲಿ ಪೊಲೀಸರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಪೊಲೀಸರು ಕಠಿಣ ಕ್ರಮ ಕೈಗೊಂಡರೆ ಅಕ್ರಮ ವಲಸಿಗರು ನಮ್ಮ ನೆಲದಲ್ಲಿ ವಾಸ ಮಾಡುವುದನ್ನು ತಪ್ಪಿಸಬಹುದು.
> –ಯದುವೀರ್ ಒಡೆಯರ್, ಸಂಸದ

## ತರಬೇತಿ ಶಿಬಿರದ ಊಟೋಪಚಾರಕ್ಕಾಗಿ ಆರ್ಥಿಕ ನೆರವು...



ಮೈಸೂರು ತಾಲೂಕು ಜಯಪುರ ಹೋಬಳಿಯ ಬರಡನಪುರ ಗುರುಮಹಾಂತೇಶ್ವರ ಮಠದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ನಯರಾ ಎನರ್ಜಿ ಲಿ. ಸಹಭಾಗಿತ್ವದಲ್ಲಿ ದೃಷ್ಟಿ ನ್ಯೂನತೆಯುಳ್ಳವರಿಗೆ ಏರ್ಪಡಿಸಿರುವ ಕಾರ್ಯ ಚಟುವಟಿಕೆಗಳ ಕೌಶಲ ತರಬೇತಿ ಶಿಬಿರದ ಊಟೋಪಚಾರಕ್ಕಾಗಿ ಸಮಾಜ ಸೇವಕ ಎಸ್.ಶ್ರೀಕಾಂತ್ ದೇಣಿಗೆ ನೀಡಿದರು. ಬರಡನಪುರ ಗುರುಮಹಾಂತೇಶ್ವರ ಮಠದ ಪೀಠಾಧ್ಯಕ್ಷರಾದ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ನಿರ್ದೇಶಕ ಕೆ.ಆರ್.ಶಂಕರ್, ಜಯಪುರ ಗ್ರಾಪಂ ಕಾರ್ಯದರ್ಶಿ ವೈ.ಕೆ.ಅನ್ನಪೂರ್ಣ, ಚಾಮುಂಡೇಶ್ವರಿ ಕ್ಷೇತ್ರದ ವಿಶೇಷಚೇತನರ ಒಕ್ಕೂಟದ ಅಧ್ಯಕ್ಷ ಮಹದೇವಸ್ವಾಮಿ, ಶಿಲ್ಪಕಲಾಕಾರ ರಾಜಣ್ಣಚಾರಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ಪಳನಿ, ಪುನರ್ವಸತಿ ಸಂಪನ್ಮೂಲ ಸಂಯೋಜಕಿ ವಿ.ರಾಜೇಶ್ವರಿ, ಮೈಸೂರು ತಾಲೂಕು ಯೋಜನಾ ಸಂಯೋಜಕಿ ಹೆಚ್.ರುಕ್ಮಿಣಿ ಇನ್ನಿತರರು ಹಾಜರಿದ್ದರು.

## ಕಾಸಿಗಾಗಿ ವಿದ್ಯುತ್ ಖಾಸಗೀಕರಣ

# ರಾಜ್ಯದ ಗ್ರಾಹಕರ ಹಿತಾಸಕ್ತಿಗೆ ಮಾರಕ



ಚಂದನ್‌ಗೌಡ

ಮೈಸೂರು, ಜೂ.23– ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆ, ಸರಬರಾಜು ಮತ್ತು ವಿತರಣಾ ಜಾಲವನ್ನು (ಎಸ್ಕಾಂಗಳನ್ನು) ಖಾಸಗೀಕರಣಗೊಳಿಸುವ ಸರ್ಕಾರದ ಪ್ರಸ್ತಾವನೆಗೆ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಖಾಸಗೀಕರಣದ ಮೂಲಕ ಈ ಸರ್ಕಾರ ಕಾಸು ಮಾಡುವ ಹುನ್ನಾರ ನಡೆಸಿದೆ ಎಂದು ಕಿಡಿಕಾರಿದರು.

ಸರಕಾರ, ರಾಜ್ಯದ ವಿದ್ಯುತ್ ವಿತರಣಾ ವಲಯವನ್ನು ಕಾರ್ಪೊರೇಟ್ ಕಂಪನಿಗಳಿಗೆ ಧಾರೆ ಎರೆಯಲು ಹೊರಟಿರುವುದು ಖಂಡನೀಯ. ರಾಜ್ಯದ ಜನತೆಯ ಆಸ್ತಿಯಾಗಿರುವ ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸುವುದು ಅಪಾಯಕಾರಿ ನಡೆ. ಸರಕಾರದ ಈ ಕ್ರಮ ರಾಜ್ಯದ ಗ್ರಾಹಕರ ಹಿತಾಸಕ್ತಿಗೆ ಮಾರಕ ಎಂದರು.

ಈಗಾಗಲೇ ಟಾಟಾ ಪವರ್ ಕಂಪನಿ ರಾಜ್ಯದ ವಿವಿಧ ವಿದ್ಯುತ್ ವಿತರಣಾ ಕಂಪನಿಗಳ (ಎಸ್ಕಾಂ) ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ವಿತರಣಾ ಪರವಾನಗಿ ಕೋರಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಅರ್ಜಿ ಸಲ್ಲಿಸಿದೆ. ಆದರೆ ಇದನ್ನು ಸರ್ಕಾರ ಪುರಸ್ಕರಿಸಬಾರದು ಎಂದು ಒತ್ತಾಯಿಸಿದರು.

ರಾಜ್ಯದ ಎಲ್ಲಾ ಎಸ್ಕಾಂಗಳು ಈಗಾಗಲೇ ನುರಿತ ಸಿಬ್ಬಂದಿ, ಸಾವಿರಾರು ಕೋಟಿ ರೂ. ಮೌಲ್ಯದ ವಿದ್ಯುತ್ ವಿತರಣಾ ಜಾಲ, ಉಪಕೇಂದ್ರಗಳು, ಯಂತ್ರೋಪಕರಣಗಳ ಬೃಹತ್ ಮೂಲಸೌಕರ್ಯ ಹೊಂದಿವೆ. ಜನರ ತೆರಿಗೆ ಹಣದಿಂದ ನಿರ್ಮಾಣವಾದ ಈ ಬೃಹತ್ ವ್ಯವಸ್ಥೆಯನ್ನು ಲಾಭದಾಸೆಗೆ ಹೊರ ರಾಜ್ಯದ ಖಾಸಗಿ ಸಂಸ್ಥೆಗೆ ವಹಿಸುವುದು ಸರಿಯಲ್ಲ ಎಂದು ಕಿಡಿಕಾರಿದರು.

> “ರಾಜ್ಯದಲ್ಲಿ ಅದ್ಭುತ ತಾಂತ್ರಿಕ ಸಾಮರ್ಥ್ಯ, ಮೂಲ ಸೌಕರ್ಯ ಮತ್ತು ಸುಗಮ ಆಡಳಿತ ನಿರ್ವಹಣೆ ಇರುವಾಗ ರಾಜ್ಯದ ವಿದ್ಯುತ್ ವಿತರಣಾ ಜಾಲವನ್ನು ಹೊರ ರಾಜ್ಯದ ಲಾಭಕೋರ ಖಾಸಗಿ ಸಂಸ್ಥೆಗೆ ಹಸ್ತಾಂತರಿಸಲು ಬಿಡುವುದಿಲ್ಲ. ಕೆಇಆರ್‌ಸಿ, ವಿದ್ಯುತ್ ವಿತರಣಾ ಜಾಲದ ಖಾಸಗೀಕರಣ ನಿರ್ಧಾರ ಕೈಬಿಟ್ಟು ಟಾಟಾ ಪವರ್ ಸಂಸ್ಥೆಯ ಅರ್ಜಿಯನ್ನು ತಿರಸ್ಕರಿಸಬೇಕು. ಇಲ್ಲದಿದ್ದರೆ ರೈತ ಕಲ್ಯಾಣ ಸಂಘದಿಂದ ಕಾನೂನು ಹೋರಾಟ ನಡೆಸಬೇಕಾಗುತ್ತದೆ. –ಚಂದನ್‌ಗೌಡ

### ತುರ್ತು ಪರಿಸ್ಥಿತಿ @ 51 ವಿಶೇಷ ಉಪನ್ಯಾಸ

ಮೈಸೂರು, ಜೂ. 23– ಮೈಸೂರಿನ ಪರಂಪರೆ, ಭಾರತೀಯ ಆರ್ಷೇಯ ಮೌಲ್ಯಗಳ ಪ್ರಚಾರಕ್ಕಾಗಿ ಮೀಸಲಾಗಿರುವ ಸಂಸ್ಥೆ ವತಿಯಿಂದ ಜೂ. 25 ರಂದು ಸಂಜೆ 6 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದಲ್ಲಿ ತುರ್ತು ಪರಿಸ್ಥಿತಿ @ 51 ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ.

ತುರ್ತು ಪರಿಸ್ಥಿತಿ ಘೋಷಣೆಯಾಗಿ 51 ವರ್ಷಗಳು ಪೂರೈಸುತ್ತಿರುವ ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, 1971 ರಿಂದಲೂ ತುರ್ತು ಪರಿಸ್ಥಿತಿಯ ಪೂರ್ವ ನಿದರ್ಶನಗಳು, ಘೋಷಣೆ ಮತ್ತು ಸಮಾನ ಘಟನೆಗಳನ್ನು ಕುರಿತು ಉಪನ್ಯಾಸ ನೀಡಲಿದ್ದಾರೆ. ಕೇಂದ್ರ ಸರ್ಕಾರ ಜೂನ್ 25 ಅನ್ನು ಸಂವಿಧಾನ ಹತ್ಯೆಯ ದಿನವನ್ನಾಗಿ ಆಚರಿಸುತ್ತಿದೆ. ಉಪನ್ಯಾಸದಲ್ಲಿ ಅಪೂರ್ವ ಸರ್ಕಾರಿ ದಾಖಲೆಗಳು, ಐತಿಹಾಸಿಕ ಪುರಾವೆಗಳನ್ನು ಹಾಗೂ ಅಪೂರ್ವ ಛಾಯಾಚಿತ್ರಗಳ ಹಿನ್ನೆಲೆಯಲ್ಲಿ ವಿವರಣೆಗಳನ್ನು ನೀಡಲಿದ್ದಾರೆ.

ಉಪನ್ಯಾಸದ ಮೊದಲು ವಿದುಷಿ ಶುಭ ರಾಘವೇಂದ್ರ ಮತ್ತು ತನುಶ್ರೀ ಅವರು ರಾಷ್ಟ್ರ ಭಕ್ತಿ ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಮಾಹಿತಿಗೆ 9986037311 ಸಂಪರ್ಕಿಸಬಹುದು.

### ನಾಳೆ ಸ್ವಾತಿ ನಕ್ಷತ್ರ ಪೂಜೆ

**ಮೈಸೂರು:** ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜೂ.25ರಂದು ಸ್ವಾತಿ ನಕ್ಷತ್ರ ಪೂಜೆ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ಪೂಜೆ ಮತ್ತು ಅಭಿಷೇಕ ನಡೆಯಲಿದ್ದು ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿತರಣೆ ಮಾಡಲಾಗುವುದು ಎಂದು ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ತಿಳಿಸಿದ್ದಾರೆ.

## ಒಕ್ಕಲಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜೂ. 23– ರಾಜ್ಯ ಒಕ್ಕಲಿಗರ ಸಂಘದ ಕೃಷ್ಣಪ್ಪ ರಂಗಮ್ಮ ಎಜುಕೇಷನ್ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.95ಕ್ಕಿಂತ ಅಧಿಕ ಅಂಕಗಳಿಸಿರುವ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿ, ಪಾಲಕರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ವಿದ್ಯಾಭ್ಯಾಸದ ಶಾಲೆ, ಕಾಲೇಜಿನ ಹೆಸರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಅಂಕಪಟ್ಟಿ ದೃಢೀಕೃತ ನಕಲು, ಬ್ಯಾಂಕ್ ಖಾತೆಯ ವಿವರ ಒಳಗೊಂಡ ಜೆರಾಕ್ಸ್ ಪ್ರತಿಯನ್ನು ಅರ್ಜಿ ಜೊತೆಯಲ್ಲಿ ಲಗತ್ತಿಸಬೇಕು. ಭರ್ತಿ ಮಾಡಿದ ಅರ್ಜಿಯನ್ನು ನಂ. 148, ನಾಡಪ್ರಭು ಕೆಂಪೇಗೌಡ ಭವನ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ. ಪುರ, ಬೆಂಗಳೂರು–4 ವಿಳಾಸಕ್ಕೆ ಜುಲೈ 3ರೊಳಗೆ ಕಳುಹಿಸಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9164456184, 9481940921 ಸಂಪರ್ಕಿಸಬಹುದು.

## ಬಿವಿಎ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ

ಮೈಸೂರು,ಜೂ.23–ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸಹಯೋಗದೊಂದಿಗೆ ಚಿತ್ರಕಲೆಯಲ್ಲಿ ದೃಶ್ಯಕಲಾಮೂಲ ಮತ್ತು ಬಿವಿಎ ಪದವಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಪೇಂಟಿಂಗ್‌ನಲ್ಲಿ ಶಿಕ್ಷಣ ಪಡೆಯಲು ಎಸ್‌ಎಸ್‌ಎಲ್‌ಸಿ ಪಾಸಾದ ಹಾಗೂ ಪಿಯುಸಿಯಲ್ಲಿ ಫೇಲಾದ ಅಥವಾ ಪಾಸಾದ ವಿದ್ಯಾರ್ಥಿಗಳು ಚಿತ್ರಕಲಾ ಶಿಕ್ಷಣ ಹೊಂದಬಹುದು. ಅರ್ಜಿ ಸಲ್ಲಿಸಲು ಜುಲೈ 6 ಕೊನೆ ದಿನ. ಮಾಹಿತಿಗೆ ಮೊ. 9844775238, 9742918181.

## ಅಪಘಾತದಲ್ಲಿ ಗಾಯಗೊಂಡ ಮೈಸೂರು ಉತ್ತರ ವಲಯ ಬಿಇಒ ರೇವಣ್ಣ ಮೈಸೂರು ಮಣಿಪಾಲ್ ಆಸ್ಪತ್ರೆಗೆ ಶಿಫ್ಟ್

●ಮಂಡ್ಯದಿಂದ ಜೀರೋ ಟ್ರಾಫಿಕ್‌ನಲ್ಲಿ ಸ್ಥಳಾಂತರ ●ಉಳಿದ ಬಿಇಒಗಳಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ



ಬಿಇಒ ರೇವಣ್ಣ

ಮೈಸೂರು, ಜೂ.23(ಎಂಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಚನ್ನಪಟ್ಟಣ ತಾಲೂಕಿನ ಮುದುಗೆರೆ ಗ್ರಾಮದ ಬಳಿ ತವೇರಾ ಹಾಗೂ ಗೂಡ್ಸ್ ವಾಹನದ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವ ಮೈಸೂರು ಉತ್ತರ ವಲಯದ ಬಿಇಒ ರೇವಣ್ಣ ಅವರನ್ನು ಜೀರೋ ಟ್ರಾಫಿಕ್‌ನಲ್ಲಿ ಮಂಗಳವಾರ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ಎರಡು ಕಾಲು ಮತ್ತು ಬಲಗೈ ಮುರಿದು, ಹೊಟ್ಟೆ ಭಾಗದಲ್ಲೂ ಗಾಯಗಳಾಗಿ ಗಂಭೀರ ಸ್ಥಿತಿಯಲ್ಲಿದ್ದ ಡಾ.ರೇವಣ್ಣ ಅವರನ್ನು ಮಂಡ್ಯದ ಸ್ಪಂದನ ಆಸ್ಪತ್ರೆಯಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಜೀರೋ ಟ್ರಾಫಿಕ್ ಮೂಲಕ ಸ್ಥಳಾಂತರಿಸಲಾಯಿತು. ಸೋಮವಾರ ಸಂಜೆ ವೇಳೆ ಆಸ್ಪತ್ರೆಗೆ ಭೇಟಿ ನೀಡಿದ್ದ ಶಿಕ್ಷಣ ಇಲಾಖೆ ಆಯುಕ್ತೆ ರಶ್ಮಿ, ಅಪಘಾತಕ್ಕೀಡಾದ ಬಿಇಒಗಳ ಆರೋಗ್ಯ ವಿಚಾರಿಸಿದ್ದರು. ಹಾಗೆಯೇ ಮೈಸೂರು ಗ್ರಾಮಾಂತರ ಬಿಇಒ ಪ್ರಕಾಶ್ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಮೈಸೂರು ದಕ್ಷಿಣ ವಲಯ ಬಿಇಒ ಕೃಷ್ಣ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದಂತೆ ನಂಜನಗೂಡು ಬಿಇಒ ಮಹೇಶ್, ಹೆಚ್.ಡಿ.ಕೋಟೆ ಬಿಇಒ ರಾಜು ಅವರನ್ನು ಡಿಸ್ಚಾರ್ಜ್ ಮಾಡಲಾಗಿದೆ ಎಂದು ಡಿಡಿಪಿಐ ಉದಯ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

## ನಮೋ ಯೋಗ ಭವನದಲ್ಲಿ ಯೋಗ ದಿನಾಚರಣೆ



ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮೋಯೋಗ ಭವನದಲ್ಲಿ ಅಂತರ ರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಮೈಸೂರು,ಜೂ.23–ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗ ಭವನದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಮೋ ಯೋಗ ಭವನದ ಯೋಗಬಂಧುಗಳು, ಸಾರ್ವಜನಿಕರು ಮತ್ತು ಪೌರಕಾರ್ಮಿಕರೊಂದಿಗೆ ಯೋಗ ಮಾಡುವ ಮೂಲಕ ಯೋಗ ದಿನಾಚರಣೆ ಆಚರಿಸಿದರು.

ಕಾರ್ಯಕ್ರಮವನ್ನು ಕೆ.ಆರ್.ಕ್ಷೇತ್ರದ ಬಿಜೆಪಿ ಶಾಸಕ ಶ್ರೀವತ್ಸ ಉದ್ಘಾಟಿಸಿ ಯೋಗ ದಿನಾಚರಣೆ ಮಹತ್ವ ತಿಳಿಸಿದರು.

ಡಾ.ಜಿ.ರವಿಶಂಕರ್ ಮಾತನಾಡಿ, ಎಲ್ಲರಿಗೂ ಯೋಗ, ಧ್ಯಾನ, ಪ್ರಾಣಾಯಾಮ ತುಂಬಾ ಅತ್ಯಗತ್ಯ. ಎಂದರು.

ಯೋಗ ಶಿಕ್ಷಕ ಮಲ್ಲಿಕಾರ್ಜುನ ಸ್ವಾಮಿ, ಸಾರ್ವಜನಿಕರಿಗೆ ಯೋಗ, ಧ್ಯಾನ ಪ್ರಾಣಾಯಾಮ, ಯೋಗಾಸನಗಳನ್ನು ಕ್ರಮಬದ್ಧವಾಗಿ ಮಾಡಿಸಿದರು. ನಮೋ ಯೋಗ ಭವನದ ಲಲಿತಾ ಮತ್ತು ದಿವ್ಯ ಅವರು ಯೋಗ ಪ್ರಾತ್ಯಕ್ಷತೆ ಮಾಡಿದರು. ಯೋಗ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಅಧ್ಯಕ್ಷ ಪ್ರಕಾಶ್, ಸಾಹಿತಿ ನಗರ್ಲೆ ಶಿವಕುಮಾರ್, ಉಮ್ಮತ್ತೂರು ಉಮೇಶ್, ಯೋಗ ಶಿಕ್ಷಕ ಮಲ್ಲಿಕಾರ್ಜುನಸ್ವಾಮಿ, ಇಂಜಿನಿಯರ್ ಶ್ರೀಧರನಾಯಕ, ಯಮುನಾ, ಗೀತ, ಸುಜಾತಾ, ಮಂಜುಳ, ಕವಿತಾ, ಅನ್ನಪೂರ್ಣ, ರವಿಪ್ರಶಾಂತ್, ಇಂಜಿನಿಯರ್ ಮಹೇಂದ್ರ, ಸಚಿನ್, ನಿಹಾರಿಕಾ, ಪುಷ್ಪಮಾಲ ರಮೇಶ್, ಬಂಗಾರಪ್ಪ, ಪ್ರಶಾಂತ್, ಲೋಕೇಶ್, ರಾಣಿ, ನಂದಿನಿ, ಸುರೇಶ್, ಶಿವಕುಮಾರ್ ಕಾವ್ಯ ಶಿವಮೂರ್ತಿ, ಕಿಶೋರ್, ನಟರಾಜು, ರೇಷ್ಮಾ, ಸಿಂಧು, ಯುನಿಕ್ ರಘು ಇತರರಿದ್ದರು.

## ಮಾರಾ ರೆಸ್ಟೋಬಾರ್ ಅಗ್ನಿ ಅವಘಡದಿಂದ ಎಚ್ಚೆತ್ತ ಅಬಕಾರಿ ಇಲಾಖೆ

# ಅಕ್ರಮ ಮದ್ಯ ಮಾರಾಟ ಸ್ಥಳಗಳ ಮೇಲೆ ದಾಳಿ; 35 ಪ್ರಕರಣ ದಾಖಲು

ಮೈಸೂರು, ಜೂ.23(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಪಬ್ ಅಗ್ನಿ ದುರಂತ ಪ್ರಕರಣದ ನಂತರ ಅಬಕಾರಿ ಇಲಾಖೆಯವರು ಮೈಸೂರಿನ ರಿಂಗ್ ರಸ್ತೆ ಸೇರಿದಂತೆ ಇತರೆಡೆ ದಿಢೀರ್ ದಾಳಿ ಮಾಡಿ 35 ಪ್ರಕರಣ ದಾಖಲಿಸಿದ್ದಾರೆ.

ನಗರದ ರಿಂಗ್ ರಸ್ತೆ ಸೇರಿದಂತೆ ಇತರೆಡೆ ಮಿಲಿಟರಿ ಹೋಟೆಲ್, ಡಾಬಾ, ರೆಸ್ಟೋರೆಂಟ್‌ಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿತ್ತು. ಕೆಲವು ಮದ್ಯ ಪ್ರಿಯರು ಬೇರೆಡೆಯಿಂದ ಮದ್ಯ ಖರೀದಿಸಿ ಇಲ್ಲಿ ಸೇವಿಸುತ್ತಿದ್ದರು.

ಈ ಸಂಬಂಧ ಜೂನ್ 15ರಿಂದ ಇಲ್ಲಿವರೆಗೆ ಅಬಕಾರಿ ಇಲಾಖೆಯವರು 120 ಸ್ಥಳಗಳ ಮೇಲೆ ದಿಢೀರ್ ದಾಳಿ ಮಾಡಿದ್ದಾರೆ. ಈ ವೇಳೆ ಅಕ್ರಮ ಮದ್ಯ ಮಾರಾಟ ಹಾಗೂ ಮದ್ಯ ಸೇವನೆ ಕಂಡು ಬಂದ ಹೋಟೆಲ್‌ಗಳ ಮೇಲೆ ದಾಳಿ ಮಾಡಿ 35 ಪ್ರಕರಣ ದಾಖಲಿಸಿದ್ದಾರೆ.

ಈ ಪ್ರಕರಣಗಳ ಬಗ್ಗೆ ಅಬಕಾರಿ ಜಿಲ್ಲಾಧಿಕಾರಿ ಅವರು ವಿಚಾರಣೆ ನಡೆಸಿ, ದಂಡ ವಿಧಿಸಲಿದ್ದಾರೆ. ಅಬಕಾರಿ ಆಯುಕ್ತರ ಆದೇಶದಂತೆ ನಾಲ್ಕು ವಿಶೇಷ ತಂಡಗಳನ್ನು ರಚನೆ ಮಾಡಲಾಗಿದ್ದು, ಈ ತಂಡ ಪ್ರತಿಯೊಂದು ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದೆ. ಕಾರ್ಯಾಚರಣೆ ಪೂರ್ಣಗೊಂಡ ನಂತರ ಮೈಸೂರು ಅಬಕಾರಿ ಡಿಸಿ ಅವರು ಅಬಕಾರಿ ಆಯುಕ್ತರಿಗೆ ಒಂದೆರಡು ದಿನದಲ್ಲಿ ಸಮಗ್ರ ವರದಿ ಸಲ್ಲಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಚುರುಕುಗೊಳಿಸಿದ್ದಾರೆ.




ಎಂಆರ್‌ಪಿಗಿಂತ ಹೆಚ್ಚು ಬೆಲೆಗೆ ಮದ್ಯ ಮಾರಾಟ ಮಾಡುತ್ತಿದ್ದ ಮೈಸೂರಿನ ಮೈಸೂರು ಲಿಕ್ಕರ್ ವರ್ಲ್ಡ್ ಅನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಸೀಜ್ ಮಾಡಿದ್ದಾರೆ.

### ಮತ್ತೆ ಮೈಸೂರಿನ 2 ರೂಫ್‌ಟಾಪ್‌ಗಳು ಸೀಜ್

ಹೋಟೆಲ್‌ಗಳಲ್ಲಿ ನಡೆಯುತ್ತಿದ್ದ ಅಕ್ರಮ ರೂಫ್‌ಟಾಪ್‌ಗಳ ಮೇಲೆ ಮೈಸೂರು ನಗರಪಾಲಿಕೆಯ ಅಧಿಕಾರಿಗಳು ದಿಢೀರ್ ದಾಳಿ ಮಾಡಿದ್ದಾರೆ.


ಲೈಸೆನ್ಸ್ ಪಡೆಯದೆ ರೂಫ್ ಟಾಪ್ ರೆಸ್ಟೋರೆಂಟ್ ನಡೆಸುತ್ತಿರುವುದು ಹಾಗೂ ಅಗ್ನಿ ಸುರಕ್ಷತಾ ಕ್ರಮ ಕೈಗೊಳ್ಳದ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಆ ವೇಳೆ ಅಕ್ರಮವಾಗಿ ನಡೆಯುತ್ತಿದ್ದ ಹಾಗೂ ಅಗ್ನಿ ಸುರಕ್ಷತಾ ಕ್ರಮ ಕೈಗೊಳ್ಳದ ರೂಪ ರೆಸ್ಟೋರೆಂಟ್ ರೂಫ್ ಟಾಪ್ ಹಾಗೂ ರಾಯಲ್ ಬ್ಲ್ಯೂ ರೂಫ್‌ಟಾಫ್‌ಗಳನ್ನು ನಗರ ಪಾಲಿಕೆ ಅಧಿಕಾರಿಗಳು ಸೀಜ್ ಮಾಡಿದ್ದಾರೆ.

### ಎಂಆರ್‌ಪಿಗಿಂತ ಹೆಚ್ಚು ಬೆಲೆಗೆ ಮದ್ಯ ಮಾರಾಟ; ಲಿಕ್ಕರ್ ಶಾಪ್‌ಗೆ ಬೀಗ

ಎಂಆರ್‌ಪಿಗಿಂತ ಹೆಚ್ಚು ಬೆಲೆಗೆ ಮದ್ಯ ಮಾರಾಟ ಮಾಡುತ್ತಿದ್ದ ಮೈಸೂರಿನ ಲಷ್ಕರ್ ಮೊಹಲ್ಲಾದ ಮೈಸೂರು ಲಿಕ್ಕರ್ ವರ್ಲ್ಡ್‌ಗೆ ಅಬಕಾರಿ ಇಲಾಖೆಯ ಅಧಿಕಾರಿಗಳು ಇಂದು ಬೀಗ ಹಾಕಿ ಸೀಜ್ ಮಾಡಿದ್ದಾರೆ. ಮೈಸೂರು ಲಿಕ್ಕರ್ ವರ್ಲ್ಡ್‌ನಲ್ಲಿ ನಿಗದಿತ ಮೊತ್ತಕ್ಕಿಂತ ಹೆಚ್ಚು ಬೆಲೆಗೆ ಮದ್ಯ ಮಾರಾಟ ಮಾಡುತ್ತಿರುವ ಸಾರ್ವಜನಿಕರ ದೂರಿನ ಮೇರೆಗೆ ಅಬಕಾರಿ ಇಲಾಖೆಯ ಅಧಿಕಾರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿದರು. ಆ ವೇಳೆ ಎಂಆರ್‌ಪಿಗಿಂತ ಹೆಚ್ಚು ಬೆಲೆಗೆ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿತ್ತು. ಈ ಸಂಬಂಧ ಕ್ರಮ ಕೈಗೊಳ್ಳುವ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಸ್ಥಳೀಯ ಅಧಿಕಾರಿಗಳು ವರದಿ ಸಲ್ಲಿಸಿದ್ದರು. ಅಬಕಾರಿ ಇಲಾಖೆ ಹಿರಿಯ ಅಧಿಕಾರಿಗಳು ನೀಡಿದ ಆದೇಶದಂತೆ ಇಂದು ಮೈಸೂರು ಲಿಕ್ಕರ್ ವರ್ಲ್ಡ್‌ಗೆ ಬೀಗ ಹಾಕಿ ಸೀಜ್ ಮಾಡಲಾಗಿದೆ. ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಅಗ್ನಿ ಅವಘಡದ ನಂತರ ಅಬಕಾರಿ ಇಲಾಖೆ ಯವರು ಈಗ ನಿದ್ರೆಯಿಂದ ಎದ್ದು, ಎಚ್ಚೆತ್ತುಕೊಂಡು ಅಕ್ರಮ ವ್ಯವಹಾರಗಳಿಗೆ ಈಗ ಕಡಿವಾಣ ಹಾಕುವ ಕಾರ್ಯಾಚರಣೆಯನ್ನು ಚುರುಕುಗೊಳಿಸಿದ್ದಾರೆ. ಇದೇ ಪರಿಣಾಮ ಕಾರಿ ಕಾರ್ಯಾಚರಣೆ ಕೈಗೊಂಡು ಅಕ್ರಮವಾಗಿ ನಡೆಯುತ್ತಿದ್ದ ಮಾರಾ ರೆಸ್ಟೋಬಾರ್‌ಗೆ ಬೀಗ ಹಾಕಿಸಿದ್ದರೆ ಇಬ್ಬರು ಅಮಾಯಕರ ಪ್ರಾಣ ಉಳಿಯುತ್ತಿತ್ತು.

# ಟೋಲ್ ಮುಕ್ತ ಸಂಚಾರಕ್ಕೆ ಆಗ್ರಹಿಸಿ ರೈತರ ಪ್ರತಿಭಟನೆ



ಗಣಂಗೂರು ಟೋಲ್ ಪ್ಲಾಜಾ ಬಳಿ 500ಕ್ಕೂ ಹೆಚ್ಚು ಮಂದಿ ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣ, ಜೂ.23–ರೈತರು ಸಾಗಿಸುವ ಕೃಷಿ ಉತ್ಪನ್ನಗಳ ಸರಬರಾಜಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಟೋಲ್ ಮುಕ್ತ ಅವಕಾಶ ನೀಡಬೇಕೆಂದು ಆಗ್ರಹಿಸಿ ರೈತಪರ ಸೇರಿದಂತೆ ಹಲವು ಸಂಘಟನೆಗಳು ಮಂಗಳವಾರ ಮಂಡ್ಯದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇನ ಗಣಂಗೂರು ಟೋಲ್ ಪ್ಲಾಜಾ ಬಳಿ ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟವು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಕನ್ನಡಪರ ಸಂಘಟನೆ, ದಸಂಸ ಹಾಗೂ ರೈತಪರ ಸಂಘಟನೆಗಳ ಜೊತೆಗೂಡಿ ರೈತ ಚಳುವಳಿಗಾರರು ಪ್ರತಿಭಟನೆ ನಡೆಸಿ, ರೈತರ ವಾಹನಗಳಿಗೆ ಟೋಲ್ ಸಿಬ್ಬಂದಿ ಕಿರುಕುಳ ನೀಡ್ತಾರೆ ಎಂದು ರೈತರಿಂದ ದೂರು ಬಂದ ಕಾರಣ ಟೋಲ್ ಹತ್ತಿರ ಬೃಹತ್ ಪ್ರತಿಭಟನೆ ನಡೆಸಿದ ಮುಖಂಡರು, ಈ ರಸ್ತೆಯಲ್ಲಿ ಹೋಗುವ ವಾಹನಗಳಿಗೆ ಚಳವಳಿ ಸಮಯದಲ್ಲಿ ಗಣಂಗೂರು ಟೋಲ್ ಪ್ಲಾಜಾ ಬಳಿ ರಾಷ್ಟ್ರೀಯ ಹೆದ್ದಾರಿ ಟೋಲ್ ಸುಂಕ ವಸೂಲಿಯನ್ನು 3 ಗಂಟೆ ಕಾಲ ಸ್ಥಗಿತಗೊಳಿಸುವಂತೆ ಮಾಡಿದರು.


**ಅಧಿಕಾರಿಗೆ ತರಾಟೆ :** ಪ್ರತಿಭಟನಾ ಸ್ಥಳಕ್ಕೆ ಬಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಉಸ್ತುವಾರಿ ಅಧಿಕಾರಿ ದೇವಿಕ್‌ರವರಿಗೆ ತರಾಟೆಗೆ ತೆಗೆದುಕೊಂಡ ಪ್ರತಿಭಟನಾಕಾರರು ರೈತರು ಹಣ್ಣು ಮತ್ತು ತರಕಾರಿ ಸಾಗಿಸುವ ವಾಹನಗಳಿಗೆ ಟೋಲ್ ಸಂಗ್ರಹ ಯಾಕೆ ಮಾಡುತ್ತೀರಿ, ನಮ್ಮ ಜಮೀನಿನ ಮೇಲೆ ರಸ್ತೆ ಮಾಡಿದ್ದು ಜಮೀನಿಗೆ ಇನ್ನೂ ಸರಿಯಾದ ಪರಿಹಾರ ನೀಡಿಲ್ಲ ಹಾಗೂ ಪ್ರಾಧಿಕಾರದ ನಿಯಮಾವಳಿಯನ್ನು ಪಾಲಿಸುತ್ತಿಲ್ಲ. ಪ್ರಯಾಣಿಕರಿಗೆ ಯಾವುದೇ ರೀತಿ ಅನುಕೂಲವಿಲ್ಲ, ಸರ್ವಿಸ್ ರಸ್ತೆಯನ್ನು ಮಾಡದೆ ಈ ಭಾಗದ ರೈತರ ಓಡಾಡುವುದೇ ಕಷ್ಟಕರವಾಗಿದೆ. ವಿದ್ಯಾರ್ಥಿಗಳಿಗೂ ತೊಂದರೆ ಆಗುತ್ತಿದ್ದು, ಟೋಲ್‌ನಿಂದ 20ಕಿ.ಮೀ.ವರೆಗೂ ಇರುವ ರೈತರಿಗೆ ಯಾವುದೇ ಸುಂಕ ಸಂಗ್ರಹಿಸಬಾರದು ಎಂದು ಒತ್ತಾಯಿಸಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತ ಕುಮಾರ್ ಮಾತನಾಡಿ, ಈಗಿನಿಂದಲೇ ರೈತರ ಹಣ್ಣು ತರಕಾರಿ ಮತ್ತಿತರ ವಾಹನಗಳಿಗೆ ಹಾಗೂ ರೈತ ಮುಖಂಡರ ವಾಹನಗಳಿಗೆ ವಿನಾಯಿತಿ ನೀಡಬೇಕು. 20ಕಿ.ಮೀ. ವ್ಯಾಪ್ತಿ ಗ್ರಾಮಗಳ ರೈತರಿಗೆ ಯಾವುದೇ ಸುಂಕ ವಸೂಲಿ ಮಾಡಬಾರದು ಎಂದು ಒತ್ತಾಯಿಸಿದರು. ಆಡ್ಡಿಒಪ್ಪದ ಅಧಿಕಾರಿ ದೇವಿಕ್, ಇಂದಿನಿಂದಲೇ ಟೋಲ್ ಬಳಿ ಪ್ರತ್ಯೇಕ ರಸ್ತೆ ವ್ಯವಸ್ಥೆ ಮಾಡಿ ವಿನಾಯಿತಿ ನೀಡಲಾಗುವುದು. ನಿಮ್ಮ ಎಲ್ಲಾ ಒತ್ತಾಯಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು ತಿಂಗಳಲ್ಲಿ ಸಮಸ್ಯೆ ಬಗೆಹರಿಸಲಾಗುವುದೆಂದು ಭರವಸೆ ನೀಡಿದ ಕಾರಣ ಚಳವಳಿಯನ್ನು ತಾತ್ಕಾಲಿಕವಾಗಿ ಕೈಬಿಡಲಾಯಿತು. ರೈತರ ಬೇಡಿಕೆಗಳನ್ನು ಈಡೇರಿಸುವವರೆಗೂ ನೀವು ಯಾವುದೇ ರೈತರಿಂದ ಟೋಲ್ ಸಂಗ್ರಹಿಸಬಾರದು ನಿಮಗೆ ತಿಂಗಳವರೆಗೆ ಗಡುವು ನೀಡುತ್ತಿದ್ದು ಅಷ್ಟರೊಳಗೆ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯಾದ್ಯಂತ ಹೋರಾಟವನ್ನು ರೂಪಿಸಬೇಕಾಗುತ್ತದೆ ಹಾಗೂ ಇಲ್ಲಿರುವ ಟೋಲ್‌ಗೇಟನ್ನು ಕಿತ್ತೊಗೆಯಬೇಕಾಗುತ್ತೆ ಎಂದು ಎಚ್ಚರಿಸಿದರು. ಕನ್ನಡ ಗೊತ್ತಿಲ್ಲದ ಅಧಿಕಾರಿಗಳನ್ನು ರಸ್ತೆ ಅಭಿವೃದ್ಧಿ ಪ್ರಾಧಿಕಾರ ನೇಮಿಸಿರುವುದು ಸರಿಯಲ್ಲ ಟೋಲ್ ಮತ್ತು ಕಚೇರಿ ಗಳಲ್ಲಿ ಕನ್ನಡಿಗರನ್ನೇ ನೇಮಿಸಬೇಕು ಎಂದು ಕನ್ನಡ ಸೇನೆ ಜಿಲ್ಲಾಧ್ಯಕ್ಷ ಎಚ್.ಸಿ. ಮಂಜುನಾಥ್ ಒತ್ತಾಯಿಸಿದರು. ರಾಜ್ಯ ರೈತ ಸಂಘದ ಹಿರಿಯ ಉಪಾಧ್ಯಕ್ಷ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಮಂಜೇಶ್‌ಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಳ್ಳಿ ದೇವರಾಜ್, ಮುಖಂಡರಾದ ಕಿರಗಸೂರು ಶಂಕರ್, ಬರ್ಡಗಳ್ಳಿ ನಾಗರಾಜ್ ಸೇರಿ 500ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

# ಶೆಟ್ಟಹಳ್ಳಿ ಗ್ರಾಮದಲ್ಲಿ ಗ್ರಾಮಲೆಕ್ಕಿಗನಿಂದ ವ್ಯಕ್ತಿಯ ಹತ್ಯೆ



ಗಣೇಶ್



ಜಯಚಂದ್ರ

ಭಾರತೀನಗರ, ಜೂ.23–ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬರನ್ನು ಗ್ರಾಮಲೆಕ್ಕಿಗ ಹತ್ಯೆಗೈದಿರುವ ಘಟನೆ ಸಮೀಪದ ಶೆಟ್ಟಹಳ್ಳಿ ಗ್ರಾಮದಲ್ಲಿ ನಡೆದಿದೆ. ಶೆಟ್ಟಹಳ್ಳಿ ಗ್ರಾಮದ ಗಣೇಶ್ (42) ಹತ್ಯೆಯಾದ ವ್ಯಕ್ತಿಯಾಗಿದ್ದು, ಇದೇ ಗ್ರಾಮದವರಾದ ಜಯಚಂದ್ರ ಎಂಬವರೇ ಹತ್ಯೆಗೈದ ಆರೋಪಿ ಎಂದು ಪೊಲೀಸರು ತಿಳಿಸಿದ್ದಾರೆ. ಈತ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ ಗ್ರಾಮ ಲೆಕ್ಕಿಗನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಹಿಂದೆ ಕರ್ತವ್ಯ ಲೋಪ ಆರೋಪದ ಮೇರೆಗೆ ಆರು ತಿಂಗಳ ಕಾಲ ಅಮಾನತುಗೊಂಡಿದ್ದ. ಬಳಿಕ ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದ ಎಂದು ತಿಳಿದುಬಂದಿದೆ.

ಸೋಮವಾರ ರಾತ್ರಿ ಮನೆಸಮೀಪದ ಅಂಗಡಿಯೊಂದರ ಮುಂದೆ ಗಣೇಶ್ ಕುಳಿತಿದ್ದರು. ಅದೇ ವೇಳೆ ಕುಡಿದ ಮತ್ತಿನಲ್ಲಿದ್ದ ಜಯಚಂದ್ರ ಗ್ರಾಮಸ್ಥರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಇದನ್ನು ಗಮನಿಸಿದ ಗಣೇಶ್, ಬೈಯದಂತೆ ಆತನಿಗೆ ಬುದ್ಧಿವಾದ ಹೇಳಿದ್ದಾರೆ. ಇದರಿಂದ ಆಕ್ರೋಶಗೊಂಡ ಜಯಚಂದ್ರ ಗಣೇಶ್ ಮೇಲೆ ಏಕಾಏಕಿ ಹಲ್ಲೆ ನಡೆಸಿದ್ದಾನೆ. ಗ್ರಾಮದ ಮುಖಂಡರು ಮಧ್ಯೆ ಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸಿ ಮನೆಗಳಿಗೆ ತೆರಳುವಂತೆ ತಿಳಿಸಿದ್ದಾರೆ. ಆದರೆ, ಏನೂ ಆಗಿಲ್ಲವೆಂಬಂತೆ ವರ್ತಿಸಿದ ಜಯಚಂದ್ರ, ಗಣೇಶ್‌ನನ್ನು ಅವರ ಮನೆಗೆ ಕರೆದುಕೊಂಡು ಹೋಗಿ, ಬಾಗಿಲಿಗೆ ಚಿಲಕ ಹಾಕಿ ಮರದ ದಿಮ್ಮಿಯಿಂದ ಮನಬಂದಂತೆ ಹಲ್ಲೆ ನಡೆಸಿದ್ದಾನೆ. ಗಂಭೀರವಾಗಿ ಗಾಯಗೊಂಡ ಗಣೇಶ್ ಚೀರಾಟ ಕೇಳಿ ಸಂಬಂಧಿಕರು ತಕ್ಷಣ ಅವರನ್ನು ಮಿಮ್ಸ್ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಮತ್ತೆ ಮನೆಗೆ ಕರೆತಂದಿದ್ದಾರೆ. ತಲೆಗೆ ಗಂಭೀರ ಗಾಯಗೊಂಡಿದ್ದ ಗಣೇಶ್ ಮಂಗಳವಾರ ಬೆಳಗಿನ ಜಾವ 5 ಗಂಟೆ ವೇಳೆಗೆ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಮೃತಪಟ್ಟಿದ್ದಾರೆ. ಈ ವಿಷಯ ತಿಳಿದ ಕೂಡಲೇ ಹಲ್ಲೆ ನಡೆಸಿದ ಜಯಚಂದ್ರ ಪರಾರಿಯಾಗಿದ್ದಾನೆ. ವಿಷಯ ತಿಳಿದ ಪೊಲೀಸರು ಮೃತದೇಹವನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಿ ಪಂಚನಾಮ ನಡೆಸಿದರು. ಬಳಿಕ ಮೃತ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಕೆ.ಎಂ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

**ಸ್ಥಳಕ್ಕೆ ಎಸ್ಪಿ ಭೇಟಿ :** ಮಾಹಿತಿ ತಿಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ಡಿವೈಎಸ್ಪಿ ಯಶವಂತ್ ಹಾಗೂ ಇನ್ಸ್‌ಪೆಕ್ಟರ್ ಆನಂದ ಕೆ.ಶೆಟ್ಟಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಘಟನೆ ನಡೆದ ಸ್ಥಳವನ್ನು ಪರಿಶೀಲಿಸಿದರು. ಅಪರಾಧ ತನಿಖಾ ತಂಡದ ತಜ್ಞರನ್ನು ಕರೆಸಿ ಮಹಜರು ನಡೆಸಲಾಯಿತು. ಸ್ಥಳದಲ್ಲಿ ಜಿಲ್ಲಾ ಸಶಸ್ತ್ರ ಪಡೆಯ ತಂಡವನ್ನು ನಿಯೋಜಿಸಲಾಗಿದ್ದು, ಶಾಂತಿ ಕಾಪಾಡುವ ನಿಟ್ಟಿನಲ್ಲಿ ಕೆ.ಎಂ.ದೊಡ್ಡಿ ಪೊಲೀಸರು ಅಗತ್ಯ ಕ್ರಮ ಕೈಗೊಂಡಿದ್ದಾರೆ.

## ಇಂದು ನಗರದಲ್ಲಿ ನಶಾ ಮುಕ್ತ ಭಾರತ ಅಭಿಯಾನ

ಮಂಡ್ಯ, ಜೂ.23.– ಮಂಡ್ಯ ಧ್ವನಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಆರ್. ಜಿ. ವ್ಯಸನಿಗಳ ಸಮಗ್ರ ಪುನಶ್ಚೇತನ ಕೇಂದ್ರದ ವತಿಯಿಂದ ನಶಾ ಮುಕ್ತ ಭಾರತ ಅಭಿಯಾನ ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಜೂ. 24ರ. ಬೆಳಗ್ಗೆ 11 ಗಂಟೆಗೆ ನಗರದ ಸಿಹಿ ನೀರು ಕೊಳ, ಆರ್.ಜಿ.ವ್ಯಸನಿಗಳ ಪುನಶ್ಚೇತನಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡರು ಅಧ್ಯಕ್ಷತೆಯನ್ನು ವಹಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಆನಂದ ಅಭಿಯಾನ ಉದ್ಘಾಟಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿ ಡಾ. ಸೋಮಶೇಖರ್ ವಿಕಲಚೇತನರ ಮತ್ತು ಹಿರಿಯ ನಾಗರಿಕ ಕಲ್ಯಾಣ ಅಧಿಕಾರಿ ಕೋಮಲ್ ಕುಮಾರ್ ಆಗಮಿಸಲಿದ್ದಾರೆ.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮನೋರೋಗ ತಜ್ಞ ಡಾ. ಹೆಚ್.ವಿ ಶಶಾಂಕ್ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ. ಮಹಮ್ಮದ್ ಸುಹೇಲ್ ಮದ್ಯಪಾನದಿಂದ ಆಗುವ ದುಷ್ಪರಿಣಾಮ ಕುರಿತು ಉಪನ್ಯಾಸವನ್ನು ನೀಡಲಿದ್ದಾರೆ. ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಡಿಎಚ್‌ಓ ಕಚೇರಿ ಜಿಲ್ಲಾ ಸಹ ಸಲಹೆಗಾರ ತಿಮ್ಮರಾಜು ತಂಬಾಕು ಕುರಿತು ಉಪನ್ಯಾಸ ನೀಡಲಿದ್ದಾರೆ. ಶಂಕರ ನಗರ ಬಿ.ಎಲ್.ಎಸ್. ನರ್ಸಿಂಗ್ ಕಾಲೇಜು ಪುಣ್ಯಶ್ರೀ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ

# ವಿದ್ಯುತ್ ಇಲಾಖೆ ಖಾಸಗೀಕರಣ ವಿರೋಧಿಸಿ ರಸ್ತೆತಡೆ



ವಿದ್ಯುತ್ ಇಲಾಖೆ ಖಾಸಗೀಕರಣ ವಿರೋಧಿಸಿ ರೈತಸಂಘ ಕಾರ್ಯಕರ್ತರು ಮತ್ತು ಸೆಸ್ಕ್ ನೌಕರರು ಪ್ರತಿಭಟನೆ ನಡೆಸಿದರು.

ಪಾಂಡವಪುರ, ಜೂ.23–ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸದಂತೆ ಆಗ್ರಹಿಸಿ ರೈತಸಂಘದ ಕಾರ್ಯಕರ್ತರು ಮತ್ತು ಸೆಸ್ಕ್ ನೌಕರರು ಮಾನವ ಸರಪಳಿ ಮೂಲಕ ಚಾಮರಾಜನಗರ–ಜೇವರ್ಗಿ ಹೆದ್ದಾರಿ ಸಂಚಾರ ತಡೆದು ಮಂಗಳವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಐದು ದೀಪ ಬಳಿ ಜಮಾವಣೆಗೊಂಡ ಪ್ರತಿಭಟನಾಕಾರರು, ವಿದ್ಯುತ್ ವಿತರಣಾ ಪರವಾನಗಿಯನ್ನು ಟಾಟಾ ಕಂಪನಿಯವರಿಗೆ ವರ್ಗಾಯಿಸಿದರೆ ರೈತರು, ಗ್ರಾಹಕರು ಮತ್ತು ನಿಗಮದ ನೌಕರರಿಗೆ ಸಂಕಷ್ಟ ಎದುರಾಗಲಿದೆ. ಹೀಗಾಗಿ ವಿತರಣಾ ಪರವಾನಗಿಗೆ ಟಾಟಾ ಸಂಸ್ಥೆಯವರು ನೀಡಿರುವ ಅರ್ಜಿಯನ್ನು ಸರಕಾರ ತಿರಸ್ಕರಿಸಿ ಎಲ್ಲರ ಹಿತ ಕಾಪಾಡಬೇಕು ಎಂದು ಘೋಷಣೆಗಳ ಮೂಲಕ ಆಗ್ರಹಿಸಿದರು. ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್. ಕೆಂಪೂಗೌಡ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸರ್ಕಾರಿ ಸ್ವಾಮ್ಯದ ನಿಗಮ ಮತ್ತು ಇಲಾಖೆಗಳನ್ನು ಖಾಸಗೀಕರಣಗೊಳಿಸುವುದು ಬಿಟ್ಟರೆ ಬೇರೇನೂ ಕೆಲಸವಿಲ್ಲ. ರೈತರ ಹಿಡಿತದಲ್ಲಿದ್ದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಈಗಾಗಲೇ ಖಾಸಗಿಯವರಿಗೆ ಗುತ್ತಿಗೆ ನೀಡಿದ್ದಾರೆ. ಇದೇ ರೀತಿ ಹಲವಾರು ಕಾರ್ಖಾನೆಗಳನ್ನು ಖಾಸಗೀಕರಣಗೊಳಿಸುವ ಹುನ್ನಾರ ನಡೆಯುತ್ತಿದೆ. ವಿದ್ಯುತ್ ನಿಗಮ ಖಾಸಗೀಕರಣಗೊಂಡರೆ ರೈತರ ಪಂಪ್ ಸೆಟ್‌ಗಳಿಗೆ ಉಚಿತವಾಗಿ ನೀಡುತ್ತಿರುವ ವಿದ್ಯುತ್ ಸ್ಥಗಿತಗೊಳ್ಳುತ್ತದೆ. ಸರಕಾರ ವಿವಿಧ ಯೋಜನೆಗಳಾದ ಕುಟೀರ ಜ್ಯೋತಿ, ಗಂಗಾ ಕಲ್ಯಾಣ, ಭಾಗ್ಯ ಜ್ಯೋತಿ ಸೇರಿದಂತೆ ವಿವಿಧ ಜನಪರ ಕಾರ್ಯಗಳು ಮೊಟಕುಗೊಳ್ಳುತ್ತವೆ. ಹೀಗಾಗಿ ರೈತಸಂಘ ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣಕ್ಕೆ ಬಿಡುವುದಿಲ್ಲ ಎಂದರು.

ರೈತಸಂಘ ತಾಲೂಕು ಅಧ್ಯಕ್ಷ ವೈ.ಪಿ. ಮಂಜು ಮಾತನಾಡಿ, ವಿದ್ಯುತ್ ಇಲಾಖೆ ಖಾಸಗೀಕರಣಗೊಂಡರೆ ನಿಗಮದ 55 ಸಾವಿರ ನೌಕರರ ಭವಿಷ್ಯ ಬೀದಿಗೆ ಬೀಳುತ್ತದೆ. ನಿಗಮವನ್ನು ಸರ್ಕಾರಿ ಸ್ವಾಮ್ಯದಲ್ಲೇ ಇಟ್ಟುಕೊಂಡು ಗುಣಮಟ್ಟದ ವಿದ್ಯುತ್ ಪೂರೈಸಲಿ ಎಂದು ಒತ್ತಾಯಿಸಿದರು. ಬಳಿಕ ತಾಲೂಕು ಕಚೇರಿ ಮುತ್ತಿಗೆ ಹಾಕಿ ಉಪ ತಹಸೀಲ್ದಾರ್ ಮೋಹನ್‌ಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರೈತಸಂಘ ತಾಲೂಕು ಅಧ್ಯಕ್ಷ ವೈ.ಪಿ.ಮಂಜು, ಉಪಾಧ್ಯಕ್ಷ ಡಾಮಡಹಳ್ಳಿ ಅಶೋಕ್, ಕಾರ್ಯದರ್ಶಿ ವೈ.ಜಿ.ರಘು, ಜಿಪಂ ಮಾಜಿ ಸದಸ್ಯ ಕೆ.ಟಿ. ಗೋವಿಂದೇಗೌಡ, ಅರಳಕುಪ್ಪೆ ರೂಪ, ಸೆಸ್ಕ್ ಸುಷ್ಮಾ, ದೇವರಾಜು ಇತರರು ಇದ್ದರು.

## ಹೇಮಂತ್ ಗೌಡ ನಿಧನ



ಪಾಂಡವಪುರ, ಜೂ.23–ತಾಲೂಕಿನ ಜೆಡಿಎಸ್ ಮುಖಂಡ ಹೇಮಂತ್ ಗೌಡ(53) ಅನಾರೋಗ್ಯದಿಂದ ಮಂಗಳವಾರ ನಿಧನರಾಗಿದ್ದಾರೆ.

ಮೃತರು ತಂದೆ ಪ್ರಭುದೇವ್, ತಾಯಿ ಧನಲಕ್ಷ್ಮಮ್ಮ, ಪತ್ನಿ ಸುಜಾತ, ಸೋದರ ಜೆಡಿಎಸ್ ರೈತವಿಭಾಗದ ಮಾಜಿ ಉಪಾಧ್ಯಕ್ಷ ಪ್ರವೀಣ್(ಗವಿಗೌಡ), ಅಕ್ಕ ವಸುಂಧರ, ಸೇರಿದಂತೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಮಧ್ಯಾಹ್ನ 1.30ಕ್ಕೆ ಕ್ಯಾತನಹಳ್ಳಿ ಗ್ರಾಮದ ಸ್ವಜಮೀನಿನಲ್ಲಿ ನೆರವೇರಲಿದೆ ಎಂದು ಸೋದರ ಪ್ರವೀಣ್ ತಿಳಿಸಿದ್ದಾರೆ. ಮೃತರ ನಿಧನಕ್ಕೆ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಅನೇಕ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಮೂರನೇ ಪುಟದಿಂದ

## ಸಿದ್ದರಾಮಯ್ಯ ಆಪ್ತನಿಗೆ ಹಿಗ್ಗಾಮುಗ್ಗಾ ತರಾಟೆ

ಸ್ಥಳಕ್ಕೆ ಡಾ.ಯತೀಂದ್ರ, ಸಂಸದ ಸುನೀಲ್ ಬೋಸ್ ಬರುವವರೆಗೂ ಮೃತದೇಹಗಳನ್ನು ಸ್ವೀಕರಿಸಬಾರದು ಎಂದು ಪಟ್ಟು ಹಿಡಿದಿದ್ದರು.

**5 ಕೋಟಿ ಪರಿಹಾರ ಕೊಡಬೇಕು:** ಇದೇ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಉಪ್ಪಾರ ಸಮುದಾಯದ ಮುಖಂಡರೊಬ್ಬರು, ಮಾಜಿ ಸಿಎಂ ಸಿದ್ದರಾಮಯ್ಯ ಈ ದುರಂತದ ನೈತಿಕ ಹೊಣೆಹೊತ್ತು ಸಂತ್ರಸ್ತ ಕುಟುಂಬಕ್ಕೆ 5 ಕೋಟಿ ರೂ. ಪರಿಹಾರ ನೀಡಬೇಕು. ಉಲ್ಲಾಸ್ ಗೌಡನನ್ನು ಬಂಧಿಸಿರುವುದನ್ನು ಪೊಲೀಸರು ಸ್ಪಷ್ಟಪಡಿಸದೇ ಮೃತದೇಹಗಳನ್ನು ಇಲ್ಲಿಂದ ತೆಗೆಯಲು ಬಿಡುವುದಿಲ್ಲ. ರಾಜ್ಯದ ಇಡೀ ಉಪ್ಪಾರ ಸಮುದಾಯವೇ ಒಗ್ಗೂಡಿ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ. ರಕ್ಷಿತಾ ಬರೆದ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿರುವ ಉಲ್ಲಾಸ್‌ಗೌಡನನ್ನು ಮೊದಲು ಬಂಧಿಸಲಿ, ನಂತರ ತನಿಖೆಗೆ ಎಲ್ಲರೂ ಸಹಕರಿಸುತ್ತೇವೆ. ಯಾವುದೇ ಸಮುದಾಯದ ಕುಟುಂಬಗಳು ಇಂತಹ ಕಿಡಿಗೇಡಿಗಳಿಂದ ಹಾಳಾಗಬಾರದು. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

**ಜೈ ಕನ್ನಡಾಂಬೆ ಮಹಾಸೇನೆ:** ಇದೇ ವೇಳೆ ಜೈ ಕನ್ನಡಾಂಬೆ ಮಹಾಸೇನೆ ಕಾರ್ಯಕರ್ತರು ಡಾ.ಅಂಬೇಡ್ಕರ್ ಭಾವಚಿತ್ರ ಹಿಡಿದು ಶವಾಗಾರದ ಬಳಿ ಆಗಮಿಸಿ, ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ. ಮದುಮಗಳು ರಕ್ಷಿತಾಳಿಗೆ ಕಿರುಕುಳ ನೀಡಿ ಮೂವರ ಸಾವಿಗೆ ಕಾರಣನಾದ ಆರೋಪಿ ಉಲ್ಲಾಸ ಗೌಡನಿಗೆ ಮರಣದಂಡನೆ ನೀಡಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

## ಸಚಿವರ ಭೇಟಿ; 5 ಲಕ್ಷ ರೂ. ವೈಯಕ್ತಿಕ ಆರ್ಥಿಕ ನೆರವು



ಮೈಸೂರು, ಜೂ.23(ಎಂಟಿವೈ)– ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಹಳೆ ಕೆಂಪಯ್ಯನಹುಂಡಿ ಗ್ರಾಮಕ್ಕೆ ಆಗಮಿಸಿ ಸಂತ್ರಸ್ತ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರಲ್ಲದೆ, ವೈಯಕ್ತಿಕವಾಗಿ 5 ಲಕ್ಷ ರೂ. ಆರ್ಥಿಕ ನೆರವು ನೀಡಿದರು. ಸರ್ಕಾರದ ವತಿಯಿಂದ ಹೆಚ್ಚಿನ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ವಿಷಯ ತಿಳಿದು ತೀವ್ರ ದುಃಖವಾಗಿದೆ. ಅತ್ಯಂತ ನೋವಿನ ಘಟನೆ ಇದಾಗಿದ್ದು, ದುಃಖ ಭರಿಸುವ ಶಕ್ತಿಯನ್ನು ಕುಟುಂಬ ಸದಸ್ಯರಿಗೆ ದೇವರು ನೀಡಲೆಂದು ಪ್ರಾರ್ಥಿಸುತ್ತೇನೆ. ಈಗಾಗಲೇ ಪ್ರಕರಣದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ನೆನ್ನೆಯಿಂದ ಪ್ರಕರಣದ ಸಂಬಂಧ ಪೊಲೀಸರೊಂದಿಗೆ ಮಾಹಿತಿ ಪಡೆದು ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೆ. ಆರೋಪಿಗೆ ಕಾನೂನು ಚೌಕಟ್ಟಿನಡಿ ಕಠಿಣ ಶಿಕ್ಷೆಯಾಗುವಂತೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ. ಈ ಸಂಕಷ್ಟದ ಸಮಯದಲ್ಲಿ ನಿಮ್ಮ ಜೊತೆ ನಾನಿದ್ದೇನೆ ಎಂದು ಕುಟುಂಬಸ್ತರಿಗೆ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಸಂಸದ ಸುನಿಲ್ ಬೋಸ್, ಶಾಸಕ ಪುಟ್ಟರಂಗಶೆಟ್ಟಿ ಹಾಗೂ ಉಪ್ಪಾರ ಸಮುದಾಯ ಮುಖಂಡರು ಉಪಸ್ಥಿತರಿದ್ದರು. ಈ ವೇಳೆ ಮುಖಂಡರು ಆರೋಪಿಗೆ ಕಠಿಣ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಲು ಮನವಿ ಮಾಡಿದರು.

## ಕೆ.ಆರ್.ಆಸ್ಪತ್ರೆ ಶವಾಗಾರದ ಬಳಿ ಬಿಗುವಿನ ವಾತಾವರಣ



ಸಂತ್ರಸ್ತರ ಸಮಾಧಾನಪಡಿಸುತ್ತಿರುವ ಮಾಜಿ ಸಚಿವರಾದ ಸಾ.ರಾ. ಮಹೇಶ್, ಪುಟ್ಟರಂಗಶೆಟ್ಟಿ.

ನಿರಂತರ ಕಿರುಕುಳದಿಂದ ಅದೇ ಗ್ರಾಮದ ಉಪ್ಪಾರ ಸಮುದಾಯದ ಶಿವಣ್ಣ, ನಾಗರತ್ನ ದಂಪತಿ ಹಾಗೂ ಪುತ್ರಿ ರಕ್ಷಿತಾ ವಿಷ ಸೇವಿಸಿ ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದರು. ಸಂಜೆ ವೇಳೆಗೆ ಮೂವರ ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರಕ್ಕೆ ಸ್ಥಳಾಂತರಿಸಲಾಗಿತ್ತು.

ಇಂದು ಬೆಳಗ್ಗೆ ಉಪ್ಪಾರ ಸಮುದಾಯದ ಎರಡು ಪ್ರತ್ಯೇಕ ಗುಂಪುಗಳು ಶವಾಗಾರದ ಬಳಿ ಜಮಾಯಿಸಿದ್ದವು. ಒಂದು ಗುಂಪು ಬಲಿಯಾದ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು, ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು, ಆತನಿಗೆ ಸೇರಿದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಮೃತರ ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದವು.

**ಗಲ್ಲು ಶಿಕ್ಷೆ ವಿಧಿಸಬೇಕು:** ತಮ್ಮ ಸಮುದಾಯದ ಮೂವರು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ತಿಳಿದು ಮೈಸೂರು, ಚಾಮರಾಜನಗರ ಸೇರಿದಂತೆ ವಿವಿಧೆಡೆಯಿಂದ ಸಮುದಾಯ ಹಲವು ಮಂದಿ ಶವಾಗಾರದ ಬಳಿ ಜಮಾಯಿಸಿದ್ದರು. ಹಸೆಮಣೆ ಏರಬೇಕಾಗಿದ್ದ ಯುವತಿ ಹಾಗೂ ಆಕೆಯ ತಂದೆ–ತಾಯಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣನಾಗಿರುವ ಆರೋಪಿ ಉಲ್ಲಾಸ್‌ಗೌಡನನ್ನು ಯಾವ ಕಾರಣಕ್ಕೂ ಕಾನೂನು ಕ್ರಮದಿಂದ ರಕ್ಷಿಸಬಾರದು. ಇಡೀ ಕುಟುಂಬವನ್ನೇ ನಾಶ ಮಾಡಿದ ಆರೋಪಿಗೆ ಗಲ್ಲು ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

**ಶಾಸಕರ ಆಗಮನ:** ಆತ್ಮಹತ್ಯೆ ಮಾಡಿಕೊಂಡ ಮೂವರ ಅಂತಿಮ ದರ್ಶನ ಪಡೆದ ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ ಅವರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ವೇಳೆ ಕುಟುಂಬಸ್ಥರು, ಆರೋಪಿ ಉಲ್ಲಾಸ್‌ಗೌಡ ನೀಡುತ್ತಿದ್ದ ಕಿರುಕುಳವನ್ನು ವಿವರಿಸಿದರು. ಮದುವೆ ಸಂಭ್ರಮದಲ್ಲಿದ್ದ ಮನೆ ಮಸಣವಾಗಿದೆ ಎಂದು ಕಣ್ಣೀರಾದರು. ಆರೋಪಿಗೆ ಕಠಿಣ ಶಿಕ್ಷೆ ಆಗಬೇಕು. ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಚಾಮರಾಜನಗರ ಸಂಸದ ಸುನೀಲ್ ಬೋಸ್, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಸ್ಥಳಕ್ಕೆ ಕರೆಸುವಂತೆ ಬಿಗಿಪಟ್ಟು ಹಿಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಪುಟ್ಟರಂಗಶೆಟ್ಟಿ, ಸಚಿವ ಯತೀಂದ್ರ ಅವರು ಬೆಂಗಳೂರಲ್ಲಿ ಸಭೆ ನಡೆಸುತ್ತಿದ್ದಾರೆ. ಅಂತ್ಯಕ್ರಿಯೆ ವೇಳೆ ಗ್ರಾಮಕ್ಕೆ ಬರುತ್ತಾರೆ ಎಂದರು. ಇದಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಶಾಸಕರು ಸಮಾಧಾನಪಡಿಸಿ, ಆರೋಪಿಯನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ. ಸರ್ಕಾರದ ವತಿಯಿಂದ ಪರಿಹಾರ ಸೇರಿದಂತೆ ಏನೆಲ್ಲಾ ನೆರವು ಸಿಗಬೇಕೋ ಅದನ್ನು ಕುಟುಂಬಕ್ಕೆ ಕೊಡಿಸಲು ನಾನು ಹಾಗೂ ಸಚಿವ ಡಾ.ಯತೀಂದ್ರ ಬದ್ಧವಾಗಿದ್ದೇವೆ ಎಂದು ಭರವಸೆ ನೀಡಿದರು. ಇದೇ ವೇಳೆ ವಿಧಾನ ಪರಿಷತ್ ಸದಸ್ಯ ರಘು ಆರ್. ಕೌಟಿಲ್ಯ ಶವಾಗಾರಕ್ಕೆ ಬಂದು ಮೃತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

**ಸ್ಥಳದಲ್ಲೇ ಸಾ.ರಾ.ಮಹೇಶ್ ನೆರವು:** ಮಾಜಿ ಶಾಸಕ ಸಾ.ರಾ.ಮಹೇಶ್ ಶವಾಗಾರದ ಬಳಿ ಆಗಮಿಸಿ ಮೂವರ ಅಂತಿಮ ದರ್ಶನ ಪಡೆದು, ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಿದರು. ಬಳಿಕ ಮೃತ ಶಿವಣ್ಣ ಅವರ ತಾಯಿ ಮಲ್ಲಮ್ಮ ಅವರಿಗೆ 50 ಸಾವಿರ ರೂ. ಆರ್ಥಿಕ ನೆರವು ನೀಡಿ, ಇದು ವೈಯಕ್ತಿಕವಾಗಿ ಕೊಡುತ್ತಿರುವ ಹಣ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಶೀಘ್ರದಲ್ಲೇ ಬಂದು 4.50 ಲಕ್ಷ ರೂ. ನೆರವು ನೀಡಲಿದ್ದಾರೆ ಎಂದು ತಿಳಿಸಿದರು.

## ಮಂಜುನಾಥ್ ನಿಧನ



ಮಂಡ್ಯ, ಜೂ.23–ನಗರದ ಗುತ್ತಲು ನಿವಾಸಿ, ಮಹದೇವಪ್ಪ ಅವರ ಪುತ್ರ ಮಂಜುನಾಥ್(28) ಮಂಗಳವಾರ ಹೃದಯಘಾತದಿಂದ ನಿಧನರಾದರು. ಮೃತರು ತಂದೆ, ತಾಯಿ, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ(ಜೂ.24) ಮಧ್ಯಾಹ್ನ ಮಂಡ್ಯದ ಶಂಕರನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

## ಫಿಫಾ ವಿಶ್ವಕಪ್ 2026: ಸಾರ್ವಕಾಲಿಕ ಅತ್ಯಧಿಕ ಗೋಲು ಗಳಿಸಿದ ಆಟಗಾರ ಮೆಸ್ಸಿ



**ಮೆಕ್ಸಿಕೋ:** ವಿಶ್ವಕಪ್ ಇತಿಹಾಸದಲ್ಲೇ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎಂಬ ಐತಿಹಾಸಿಕ ದಾಖಲೆಯನ್ನು ಲಿಯೋನೆಲ್ ಮೆಸ್ಸಿ ತಮ್ಮದಾಗಿಸಿಕೊಂಡಿದ್ದಾರೆ.

38 ವರ್ಷದ ಅರ್ಜೆಂಟೀನಾ ತಂಡದ ನಾಯಕ 2026ರ ಫಿಫಾ ವಿಶ್ವಕಪ್ ಗ್ರೂಪ್ ಹಂತದ ಪಂದ್ಯದಲ್ಲಿ ಜರ್ಮನಿಯ ಮಿರೋಸ್ಲಾವ್ ಕ್ಲೋಸ್ ಅವರ 16 ಗೋಲುಗಳ ಪುರುಷರ ದಾಖಲೆಯನ್ನು ಮುರಿದರು. ಅಲ್ಲದೆ, ಬ್ರೆಜಿಲ್‌ನ ಮಹಿಳಾ ದಂತಕಥೆ ಮಾರ್ಟಾ ಅವರ 17 ಗೋಲುಗಳ ದಾಖಲೆಯನ್ನು ಮೀರಿಸುವ ಮೂಲಕ, ಮೆಸ್ಸಿ ಪುರುಷರ ಮತ್ತು ಮಹಿಳಾ ಎರಡೂ ವಿಭಾಗಗಳ ವಿಶ್ವಕಪ್ ಇತಿಹಾಸದಲ್ಲೇ ಅತ್ಯುನ್ನತ ಗೋಲು ಸರದಾರನಾಗಿ ಹೊರಹೊಮ್ಮಿದ್ದಾರೆ.

**ದಾಖಲೆ ಬರೆದ ಪಂದ್ಯ:** ಟೆಕ್ಸಾಸ್‌ನ ಆರ್ಲಿಂಗ್ಟನ್‌ನಲ್ಲಿರುವ ಡಲ್ಲಾಸ್ ಸ್ಟೇಡಿಯಂನಲ್ಲಿ ಸೋಮವಾರ (22 ಜೂನ್ 2026) ನಡೆದ ಆಸ್ಟ್ರಿಯಾ ವಿರುದ್ಧದ ಗ್ರೂಪ್ 'ಜೆ' ಪಂದ್ಯದಲ್ಲಿ ಅರ್ಜೆಂಟೀನಾ 2–0 ಅಂತರದಲ್ಲಿ ಜಯಗಳಿಸಿತು. ಈ ಪಂದ್ಯದಲ್ಲಿ ಮೆಸ್ಸಿ ಈ ಮೈಲಿಗಲ್ಲು ತಲುಪಿದರು.

**ತಪ್ಪಿದ ಪೆನಾಲ್ಟಿ:** ಪಂದ್ಯದ 9 ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶದಲ್ಲಿ ಮೆಸ್ಸಿ ಚೆಂಡನ್ನು ಹೊರಗೆ ಒದ್ದು ಗೋಲು ಗಳಿಸುವ ಅವಕಾಶ ತಪ್ಪಿಸಿಕೊಂಡರು.

**ಫಿಫಾ ಪುರುಷರ ವಿಶ್ವಕಪ್‌ನ ಸಾರ್ವಕಾಲಿಕ ಟಾಪ್ ಸ್ಕೋರರ್‌ಗಳು:** 2026ರ ಟೂರ್ನಿಯಲ್ಲಿ ಭರ್ಜರಿ ಆರಂಭ ಪಡೆದಿರುವ ಮೆಸ್ಸಿ, ಕೇವಲ ಎರಡು ಪಂದ್ಯಗಳಲ್ಲಿ 5 ಗೋಲುಗಳನ್ನು (ಅಲ್ಜೀರಿಯಾ ವಿರುದ್ಧದ ಹ್ಯಾಟ್ರಿಕ್ ಸೇರಿದಂತೆ) ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. ಆದರೆ, ಇರಾಕ್ ವಿರುದ್ಧ ಎರಡು ಗೋಲು ಗಳಿಸಿರುವ ಫ್ರಾನ್ಸ್‌ನ ಕಿಲಿಯನ್ ಎಂಬಪ್ಪೆ 16 ಗೋಲುಗಳೊಂದಿಗೆ ಮೆಸ್ಸಿಗೆ ತೀವ್ರ ಪೈಪೋಟಿ ನೀಡುತ್ತಿದ್ದಾರೆ.

**ಮುಂದಿನ ಹಾದಿ:** ಆಸ್ಟ್ರಿಯಾ ವಿರುದ್ಧದ ಗೆಲುವಿನೊಂದಿಗೆ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವು ಜೋರ್ಡಾನ್ ವಿರುದ್ಧದ ಕೊನೆಯ ಗ್ರೂಪ್ ಪಂದ್ಯಕ್ಕೂ ಮುನ್ನವೇ ರೌಂಡ್ ಆಫ್ 32 (ನಾಕೌಟ್ ಹಂತ) ಕ್ಕೆ ಅರ್ಹತೆ ಪಡೆದಿದೆ. ಇದರಿಂದಾಗಿ ಮೆಸ್ಸಿ ಅವರಿಗೆ ತಮ್ಮ ಗೋಲುಗಳ ದಾಖಲೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಕನಿಷ್ಠ ಕೆಲವು ಪಂದ್ಯಗಳ ಅವಕಾಶ ಸಿಗಲಿದೆ.

## ರದ್ದುಗೊಳಿಸದಿದ್ದರೆ ಆಮರಣಾಂತ ಉಪವಾಸ

ಮೇಲಿನ ದಂಡವನ್ನೇಕೆ ಹೆಚ್ಚಳ ಮಾಡಬಾರದು ಎಂದೂ ಅವರು ಪ್ರಶ್ನಿಸಿದ್ದಾರೆ. ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆಯಲು ಗುರುತಿನ ಚೀಟಿಯನ್ನು ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿರುವ ಅಣ್ಣಾ ಹಝಾರೆ, ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 6(2)ರ ಅನ್ವಯ ಅರ್ಜಿದಾರರು ಮಾಹಿತಿಯನ್ನು ಪಡೆಯಲು ತಮ್ಮ ವೈಯಕ್ತಿಕ ವಿವರಗಳನ್ನಾಗಲಿ ಅಥವಾ ಕಾರಣಗಳನ್ನಾಗಲಿ ಬಹಿರಂಗಗೊಳಿಸಬೇಕಾದ ಅಗತ್ಯವಿಲ್ಲ. ಇಂತಹ ಷರತ್ತುಗಳು ವಿಷಲ್ ಬ್ಲೋಯರ್ ಗಳು ಹಾಗೂ ಹೋರಾಟಗಾರರಿಗೆ ಅಪಾಯವನ್ನು ತಂದೊಡ್ಡುತ್ತವೆ ಎಂದು ಅವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

## 15 ದಿನದೊಳಗೆ ಅರ್ಜಿ ಸಲ್ಲಿಸಿ

ಅರ್ಜಿ ಸಲ್ಲಿಸಬೇಕು. ತಾತ್ಕಾಲಿಕ ಮತ್ತು ಶಾಶ್ವತ ಸಂಪರ್ಕದ ಅರ್ಜಿಗಳಲ್ಲಿನ ಹೆಸರು ಒಂದೇ ಆಗಿರಬೇಕು. ಸ್ಥಳದ ಜಿಯೋ–ಟ್ಯಾಗ್ ಫೋಟೋಗಳು ಕಡ್ಡಾಯವಾಗಿವೆ.

ಮೇ 31ರ ಮೊದಲು ನಿರ್ಮಾಣ ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕ ವಿಲ್ಲದ ಕಟ್ಟಡಗಳ ಮಾಲೀಕರು ತಮ್ಮ ಸಂಬಂಧಿತ ಉಪವಿಭಾಗ ಕಚೇರಿಗಳಲ್ಲಿ 15 ದಿನಗಳೊಳಗೆ ನೇರವಾಗಿ ನೋಂದಣಿ ಮಾಡಿ ಅರ್ಜಿ ಸಲ್ಲಿಸಬಹುದು. ಸ್ಥಳೀಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡ ಪೂರ್ಣಗೊಂಡಿರುವುದನ್ನು ದೃಢ ಪಡಿಸಿ, ಜಿಯೋ–ಟ್ಯಾಗ್ ಫೋಟೋಗಳೊಂದಿಗೆ ವರದಿಯನ್ನು ಅಃ ಸಾಫ್ಟ್ ವೇರ್‌ಗೆ ಅಪ್‌ಲೋಡ್ ಮಾಡುತ್ತಾರೆ. ಯಾವುದೇ ಅರ್ಜಿಯನ್ನು 15 ದಿನಗಳಿಗಿಂತ ಹೆಚ್ಚು ಬಾಕಿ ಇಡಲಾಗುವುದಿಲ್ಲ. ಈ ವಿನಾಯಿತಿ ಕೇವಲ ವಸತಿ ಕಟ್ಟಡಗಳಿಗೆ ಮಾತ್ರವಲ್ಲದೆ ಕೃಷಿ ಮತ್ತು ಗ್ರಾಮೀಣ ಕಟ್ಟಡಗಳಿಗೂ ಅನ್ವಯಿಸುತ್ತದೆ. ಫಾರ್ಮ್ ಹೌಸ್, ಗ್ರಾಮೀಣ ಮನೆಗಳು, ಕೃಷಿ ಉಪಕರಣ ಶೆಡ್‌ಗಳು, ಹಸು ಕೊಟ್ಟಿಗೆಗಳು ಮತ್ತು ರೇಷ್ಮೆ ಹುಳು ಸಾಕಾಣಿಕೆ ಮನೆಗಳು ಇತ್ಯಾದಿಗಳಿಗೆ ಸಹ ಅನ್ವಯವಾಗುತ್ತಿದ್ದು, ಯಾವುದೇ ಪ್ಲಾಟ್ ಅಥವಾ ಕಟ್ಟಡದ ಗಾತ್ರದ ಮಿತಿ ಇರುವುದಿಲ್ಲ.

## ವಾರ್ಷಿಕ ವೈದ್ಯಕೀಯ ತಪಾಸಣೆ

ಪಡೆಯಲು ಅರ್ಹರಿರುವುದಿಲ್ಲ. ಈ ತಪಾಸಣೆಗಳನ್ನು ಸರಕಾರಿ ಆಸ್ಪತ್ರೆ ಹಾಗೂ ಆರೋಗ್ಯ ಸಂಜೀವಿನಿ ಯೋಜನೆಯಡಿ ನೋಂದಾಯಿಸಲ್ಪಟ್ಟಿರುವ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಪಡೆಯಬಹುದು. ಈ ತಪಾಸಣೆಗಳನ್ನು ಒಂದೇ ಸಂಸ್ಥೆಯಲ್ಲಿ ಪಡೆದು ಒಂದೇ ಕ್ಲೇಮಿನಲ್ಲಿ ಅವುಗಳನ್ನು ಇತ್ಯರ್ಥಪಡಿಸಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ. ನಿಗದಿಪಡಿಸಿರುವ ವಾರ್ಷಿಕ ವೈದ್ಯಕೀಯ ತಪಾಸಣೆಗಳಿಗೆ ಪುರುಷ ನೌಕರರಿಗೆ 2 ಸಾವಿರ ರೂ., ಮಹಿಳಾ ನೌಕರರಿಗೆ 2,200 ರೂ. ಸಂಚಿತ ದರಗಳನ್ನು ನಿಗದಿ ಪಡಿಸಲಾಗಿದೆ. ವಿವಿಧ ತಪಾಸಣೆಗಳಿಗೆ ಸರಕಾರ ನಿಗದಿಪಡಿಸಿದ ಗರಿಷ್ಠ ಮೊತ್ತದ ಮಿತಿಗೊಳಪಟ್ಟು ಮಂಜೂರಾತಿ ನೀಡಬೇಕು. ವಾರ್ಷಿಕ ವೈದ್ಯಕೀಯ ತಪಾಸಣೆಗಳನ್ನು ಕೆಎಎಸ್‌ಎಸ್ ಯೋಜನೆಯಡಿ ಅಳವಡಿಸಿಕೊಳ್ಳಲು ಹಾಗೂ ಈ ಸಂಬಂಧ ನೋಂದಾಯಿತ ಖಾಸಗಿ ಆಸ್ಪತ್ರೆಗಳೊಂದಿಗೆ ಸೂಕ್ತ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕ್ರಮ ಕೈಗೊಳ್ಳಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಉಪ ಕಾರ್ಯದರ್ಶಿ ಎಸ್.ಆರ್. ಶಿವಶಂಕರ್ ಆದೇಶದಲ್ಲಿ ಸೂಚಿಸಿದ್ದಾರೆ.

## ಅಭಿನಂದನೆ



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಮಂಗಳವಾರ ಮೈಸೂರಿನ ಪತ್ರಕರ್ತರು ಭೇಟಿಯಾಗಿ ಅಭಿನಂದಿಸುವುದರೊಂದಿಗೆ ಪತ್ರಕರ್ತರ ಭವನ ನಿರ್ಮಾಣಕ್ಕೆ ಅಗತ್ಯ ಸಹಕಾರ ನೀಡುವಂತೆ ಮನವಿ ಮಾಡಿದರು. ಈ ವೇಳೆ ಪತ್ರಕರ್ತರಾದ ಕೆ.ಪಿ. ನಾಗರಾಜ್, ದಿಲೀಪ್ ಚೌಡಳ್ಳಿ, ವಿನೋದ್ ಪಡುವಾರಹಳ್ಳಿ, ಎಂ.ಎನ್. ಸ್ವರೂಪ್, ವಕೀಲ ಬಿ.ಎಸ್. ಪೂರ್ಣೇಶ್, ಉದ್ಯಮಿಗಳಾದ ಅಜಿತ್, ಎಂ.ಕೆ. ಜಗದೀಶ್‌ಗೌಡ ಉಪಸ್ಥಿತರಿದ್ದಾರೆ.

ಮೈಸೂರು ಮಿತ್ರ



# ಮೈಸೂರು ನ್ಯಾಯಾಲಯದ ಆವರಣದಲ್ಲಿ ಮಹಿಳಾ ವಕೀಲರು, ನೋಟರಿಗಳ ನೂತನ ಕಟ್ಟಡ ನಿರ್ಮಾಣ

## ಸಂಸದ ಯದುವೀರ್ ಒಡೆಯರ್‌ರಿಂದ ಶಿಲಾನ್ಯಾಸ



ಮೈಸೂರು ನ್ಯಾಯಾಲಯದ ಆವರಣದಲ್ಲಿ ಮಹಿಳಾ ವಕೀಲರು ಹಾಗೂ ನೋಟರಿಗಳಿಗೆ ನೂತನವಾಗಿ ನಿರ್ಮಿಸುತ್ತಿರುವ ಕಟ್ಟಡಕ್ಕೆ ಸಂಸದ ಯದುವೀರ್ ಅವರು ಮಂಗಳವಾರ ಶಿಲಾನ್ಯಾಸ ನೆರವೇರಿಸಿದರು.

ಮೈಸೂರು, ಜೂ.23(ಬಿಎಲ್‌ಯು)– ಮೈಸೂರು ನ್ಯಾಯಾಲಯದ ಆವರಣದಲ್ಲಿ ಮಹಿಳಾ ವಕೀಲರು ಹಾಗೂ ನೋಟರಿಗಳಿಗೆ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೆ ಸಂಸದ ಯದುವೀರ್ ಒಡೆಯರ್ ಮಂಗಳವಾರ ಶಂಕುಸ್ಥಾಪನೆ ನೆರವೇರಿಸಿದರು.

ನ್ಯಾಯಾಲಯದ ಕ್ಯಾಂಟಿನ್ ಬಳಿ 55 ಲಕ್ಷ ವೆಚ್ಚದಲ್ಲಿ ನಿರ್ಮಿಸುತ್ತಿರುವ ಕಟ್ಟಡ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಯದುವೀರ್, ಕಳೆದ ವರ್ಷ ಈ ಕಟ್ಟಡ ನಿರ್ಮಾಣಕ್ಕೆ ಸಂಸದರ ನಿಧಿಯಿಂದ 10 ಲಕ್ಷ ಅನುದಾನ ಬಿಡುಗಡೆ ಮಾಡಿದ್ದೆ. ಈಗ ಮತ್ತೆ 10 ಲಕ್ಷ ರೂ. ನೀಡುತ್ತಿದ್ದೇನೆ ಎಂದು ತಿಳಿಸಿದರು.

ವಕೀಲರ ಸಂಘದ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ನನ್ನ ಬೆಂಬಲ ಇದ್ದೇ ಇರುತ್ತದೆ. ವಕೀಲರ ಕಲ್ಯಾಣ ಕಾರ್ಯಕ್ರಮಗಳಿಗೆ ಮುಂದೆಯೂ ಅನುಕೂಲ ಮಾಡಿಕೊಡುತ್ತೇನೆ ಎಂದು ಯದುವೀರ್ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಉಷಾರಾಣಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಬಿ.ಆರ್.ಚಂದ್ರಮೌಳಿ, ಕಾರ್ಯದರ್ಶಿ ಎ.ಜಿ.ಸುಧೀರ್ ಹಾಗೂ ಇತರರು ಉಪಸ್ಥಿತರಿದ್ದರು.

### ಪಾರಂಪರಿಕ ಶೈಲಿಯಲ್ಲಿ ಕಟ್ಟಡ ನಿರ್ಮಾಣ

ಮೈಸೂರು ನ್ಯಾಯಾಲಯದ ಕಟ್ಟಡವನ್ನು ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಿರುವ ಹಿನ್ನೆಲೆಯಲ್ಲಿ ಮಹಿಳಾ ವಕೀಲರು ಹಾಗೂ ನೋಟರಿಗಳ ಕಟ್ಟಡವನ್ನು ಕೂಡ ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಲಾಗುತ್ತಿದೆ. ಕಳೆದ ವರ್ಷವೇ ಈ ಕಟ್ಟಡದ ನಿರ್ಮಾಣ ಕಾರ್ಯ ಆರಂಭವಾಗಬೇಕಿತ್ತು. ಇದಕ್ಕಾಗಿ ಯದುವೀರ್ ಅವರು ಸಂಸದರ ನಿಧಿಯಿಂದ 10 ಲಕ್ಷ ಅನುದಾನ ಕೂಡ ನೀಡಿದ್ದರು. ಆದರೆ, ಪಾರಂಪರಿಕ ಕಟ್ಟಡವಾದ ಹಿನ್ನೆಲೆಯಲ್ಲಿ ಹೈಕೋರ್ಟ್ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳುವ ಕಾರಣ ಕಟ್ಟಡ ನಿರ್ಮಾಣ ಕಾರ್ಯ ವಿಳಂಬವಾಗಿತ್ತು. ಒಂದೆರಡು ದಿನದಲ್ಲಿ ಕಟ್ಟಡದ ನಿರ್ಮಾಣ ಕಾರ್ಯ ಆರಂಭವಾಗಲಿದೆ. ನೂತನ ಕಟ್ಟಡದ ಕೆಳ ಅಂತಸ್ತಿನಲ್ಲಿ ಮಹಿಳಾ ವಕೀಲರಿಗೆ ಹಾಗೂ ಮೊದಲ ಮಹಡಿಯನ್ನು ನೋಟರಿಗಳಿಗೆ ಮೀಸಲಿಡಲಾಗಿದೆ.

# ಚಾಮುಂಡಿಬೆಟ್ಟದ ಕಮಾನು ಬಳಿ ಪಾರಂಪರಿಕ ಶೈಲಿ ಬಸ್ ನಿಲ್ದಾಣ

## ಆಷಾಢ ಮಾಸಕ್ಕೂ ಮುನ್ನ ಸಾರ್ವಜನಿಕ ಬಳಕೆಗೆ ಲಭ್ಯ



ಚಾಮುಂಡಿಬೆಟ್ಟದ ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಪಾರಂಪರಿಕ ಶೈಲಿಯ ಬಸ್ ನಿಲ್ದಾಣ.

ಮೈಸೂರು, ಜೂ.23(ಜಿಎ)– ಚಾಮುಂಡಿಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳಿಗಾಗಿ ಪಾರಂಪರಿಕ ಶೈಲಿಯ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಾಣವಾಗುತ್ತಿದ್ದು, ಆಷಾಢ ಮಾಸದೊಳಗೆ ಸಾರ್ವಜನಿಕರಿಗೆ ಲಭ್ಯವಾಗಲಿದೆ.

ಆಷಾಢ ಮಾಸದಲ್ಲಿ ದೇಶದ ನಾನಾ ಭಾಗದಿಂದ ಲಕ್ಷಾಂತರ ಮಂದಿ ಭಕ್ತಾದಿಗಳು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ 17 ಲಕ್ಷ ರೂ. ವಿಶೇಷ ಅನುದಾನದಲ್ಲಿ ಬೆಟ್ಟದ ರಸ್ತೆಯಲ್ಲಿ ನೂತನವಾದ ಬಸ್ ಪ್ರಯಾಣಿಕರ ತಂಗುದಾಣವನ್ನು ನಿರ್ಮಾಣ ಮಾಡಲಾಗುತ್ತಿದೆ.

ಮೈಸೂರು ಎಂದರೇ ಪಾರಂಪರಿಕ ನಗರಿಯಾಗಿದೆ. ಇಲ್ಲಿನ ಅರಮನೆ, ಕಟ್ಟಡಗಳು ವಿನ್ಯಾಸದಿಂದಲ್ಲೇ ಎಲ್ಲರ ಗಮನ ಸೆಳೆದಿದೆ. ಈಗ ಇದೇ ಪರಿಕಲ್ಪನೆಯಲ್ಲಿಯೇ ನಗರದಲ್ಲಿ ಕಟ್ಟಡಗಳ ನಿರ್ಮಾಣ ಮಾಡಲಾಗುತ್ತಿದೆ. ಅದೇ ಸಾಲಿಗೆ ಈಗ ಈ ಬಸ್ ಪ್ರಯಾಣಿಕರ ತಂಗುದಾಣವೂ ಸೇರ್ಪಡೆಯಾಗಲಿದೆ.

ಶಾಸಕ ಜಿ.ಟಿ.ದೇವೇಗೌಡರು ವಿಶೇಷ ಕಾಳಜಿ ವಹಿಸಿ ಈಗಾಗಲೇ ಮೈಸೂರಿನ ವಿಜಯನಗರದ ಸಂಗಮ್ ಸರ್ಕಲ್‌ನಲ್ಲಿ ದೊಡ್ಡ ಗಡಿಯಾರ ನಿರ್ಮಾಣ ಮಾಡಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಅದೇ ರೀತಿ ಸಂಪೂರ್ಣ ಕಲ್ಲಿನಿಂದಲೇ ನಿರ್ಮಾಣಗೊಳ್ಳುತ್ತಿರುವ ಬಸ್ ನಿಲ್ದಾಣವೂ ಮತ್ತೊಂದು ಕೊಡುಗೆಯಾಗಲಿದೆ. ಆಷಾಢ ಮಾಸದಲ್ಲಿ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳಿಗೆ ನಿರ್ಬಂಧ ಇರುವುದರಿಂದ ಎಲ್ಲರೂ ಸರ್ಕಾರ ನಿಯೋಜಿಸಿರುವ ಬಸ್‌ಗಳ ಮೂಲಕ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು ಧನ್ಯರಾಗುತ್ತಾರೆ.

ಕೆಲವರು ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಕಮಾನು ಬಳಿ ಬಂದು ಅಲ್ಲಿಂದ ಬಸ್ ಮೂಲಕ ಬೆಟ್ಟಕ್ಕೆ ತೆರಳುತ್ತಾರೆ. ಆದರೆ, ಕಮಾನುಗಳ ಬಳಿ ಬಸ್ ನಿಲ್ದಾಣ ಇಲ್ಲದಿರುವುದರಿಂದ ಭಕ್ತಾದಿಗಳಿಗೆ ಕಷ್ಟವಾಗಿತ್ತು. ಈ ಹಿನ್ನೆಲೆಯಲ್ಲಿ ಭಕ್ತಾದಿಗಳು ಬಸ್ ಬರುವವರೆಗೂ ವಿಶ್ರಾಂತಿ ತೆಗೆದುಕೊಳ್ಳಲು ಒಂದು ಬಸ್ ತಂಗುದಾಣ ಇದ್ದರೆ ಒಳಿತಾಗಲಿದೆ ಎಂಬ ಉದ್ದೇಶದಿಂದ ವಿಭಿನ್ನವಾಗಿ ಬಸ್ ನಿಲ್ದಾಣ ನಿರ್ಮಿಸಲಾಗುತ್ತಿದೆ. ಕಳೆದ 2 ತಿಂಗಳಿನಿಂದ ಭರದಿಂದ ಕಾಮಗಾರಿ ನಡೆಯುತ್ತಿದ್ದು, 20X17 ವಿಸ್ತೀರ್ಣದಲ್ಲಿ ಬಸ್ ನಿಲ್ದಾಣ ಸಿದ್ಧಗೊಳ್ಳುತ್ತಿದೆ. ಈಗಾಗಲೇ ಅಡಿಪಾಯ ಕಾರ್ಯ ಪೂರ್ಣಗೊಂಡಿದೆ. ಮತ್ತೊಂದೆಡೆ ಯಂತ್ರಗಳ ಮೂಲಕ ಕಂಬಗಳ ಕಲಾಕೃತಿ ಕೆಲಸವೂ ನಡೆಯುತ್ತಿದೆ ಕಲ್ಲಿನಿಂದ ನಿರ್ಮಾಣ ಮಾಡುತ್ತಿರುವುದರಿಂದ ಸೂಕ್ಷ್ಮವಾಗಿ ಕಾಮಗಾರಿ ನಡೆಸಲಾಗುತ್ತಿದೆ. ಜು.17ರಂದು ಮೊದಲನೇ ಆಷಾಢ ಶುಕ್ರವಾರಕ್ಕೂ ಮುನ್ನ ಎಲ್ಲಾ ಕಾಮಗಾರಿ ಪೂರ್ಣಗೊಂಡು ಭಕ್ತಾದಿಗಳ ಬಳಕೆಗೆ ಲಭ್ಯವಾಗಲಿದೆ.

ಬಸ್ ನಿಲ್ದಾಣದ ನೀಲನಕ್ಷೆ






"ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ತೆರಳುವ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಯಾಣಿಕರ ತಂಗುದಾಣವನ್ನು ನಿರ್ಮಿಸಲಾಗುತ್ತಿದ್ದು, ಮೈಸೂರಿನ ಪರಂಪರೆ ಬಿಂಬಿಸುವ ನಿಟ್ಟಿನಲ್ಲಿ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

–ಜಿ.ಟಿ.ದೇವೇಗೌಡ, ಶಾಸಕರು

# ರಕ್ಷಣಾ ಪಡೆಗಳಲ್ಲಿ ಉದ್ಯೋಗಾವಕಾಶ ಕುರಿತು ಮಾರ್ಗದರ್ಶನ



ಮೈಸೂರು ನಗರ ಕೇಂದ್ರ ಗ್ರಂಥಾಲಯದಲ್ಲಿ ಮಂಗಳವಾರ ರಕ್ಷಣಾ ಪಡೆಗಳಲ್ಲಿ ಉದ್ಯೋಗಾವಕಾಶ ಕುರಿತು ಮಾರ್ಗದರ್ಶನ ಕಾರ್ಯಕ್ರಮ ನಡೆಯಿತು.

ಮೈಸೂರು,ಜೂ.23(ಎಂಕೆ)–ರಕ್ಷಣಾ ಪಡೆ ಸೇರುವ ಆಕಾಂಕ್ಷಿಗಳು ತಮ್ಮ ಬದ್ಧತೆ ಜೊತೆಗೆ ಕಠಿಣ ಪರಿಶ್ರಮಪಟ್ಟಲ್ಲಿ ಮಾತ್ರವೇ ಯಶಸ್ಸು ಪಡೆಯಲು ಸಾಧ್ಯ ಎಂದು ಮೇಜರ್ ಡಿ.ಸತೀಶ್ ತಿಳಿಸಿದರು.

ಮೈಸೂರು ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ ರಕ್ಷಣಾ ಪಡೆಗಳಲ್ಲಿ ಉದ್ಯೋಗಾವಕಾಶ ಕುರಿತು ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಾಮಾಣಿಕತೆ, ದಕ್ಷತೆ ಹಾಗೂ ಪರಿಶ್ರಮದಿಂದ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯಬಹುದು ಎಂದರು.

ಭಾರತೀಯ ರಕ್ಷಣಾ ಪಡೆಗೆ ಸೇರಲು ಅವಕಾಶಗಳಿದ್ದು, ಕೇಂದ್ರ ಲೋಕ ಸೇವಾ ಆಯೋಗ ನಡೆಸುವ ಅತ್ಯಂತ ಕಠಿಣ ಪರೀಕ್ಷೆಗಳಾದ 'ಸಂಯೋಜಿತ ರಕ್ಷಣಾ ಸೇವೆ(Combined defence service) ಪರೀಕ್ಷೆ' ಹಾಗೂ 'ಎಸ್‌ಎಸ್‌ಬಿ (Service Selection Board) ಪರೀಕ್ಷೆಗಳನ್ನು ಪಾಸ್ ಮಾಡಬೇಕು ಎಂದು ತಿಳಿಸಿದರು.

ಕೂರ್ಗ್ ವಿಶ್ವವಿದ್ಯಾನಿಲಯ ಸಹಾಯಕ ಪ್ರಾಧ್ಯಾಪಕಿ ಪಿ.ಪಾವನಿ ಮಾತನಾಡಿ, ವಿದ್ಯಾರ್ಥಿಗಳಲ್ಲಿನ ಉತ್ತಮ ಸಂವಹನ ಕೌಶಲ ಮತ್ತು ಪ್ರಾಮಾಣಿಕ ಪರೀಕ್ಷಾ ಸಿದ್ಧತೆ ಯಶಸ್ಸು ತಂದು ಕೊಡಲಿದೆ. ಹಾಗಾಗಿ ಓದು ದೈನಂದಿನ ಚಟುವಟಿಕೆಗಳಲ್ಲಿ ಪ್ರಮುಖವಾಗಿರಬೇಕು ಎಂದು ತಿಳಿ ಹೇಳಿದರು.

**ಅಗ್ನಿವೀರ್ ಯಶಸ್ವಿ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಮಾತನಾಡಿ, ಕಳೆದ ತಿಂಗಳಷ್ಟೇ ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಒಂದು ವಾರ ಕಾಲ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿ ಯಶಸ್ವಿಯಾಗಿ ನಡೆಯಿತು. ಮೂರು ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದು, ಅವರಲ್ಲಿ 200ಕ್ಕೂ ಹೆಚ್ಚು ಮಂದಿ ಆಯ್ಕೆಯಾಗಿದ್ದಾರೆ. ಭಾರತೀಯ ಸೇನೆಯಲ್ಲಿರುವ ಅವಕಾಶದ ಬಗ್ಗೆ ಯಾವುದೇ ಮಾಹಿತಿ ಬೇಕಿದ್ದರೂ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ಅರಮನೆ ಪೊಲೀಸ್ ಉಪ ಆಯುಕ್ತ ಚಂದ್ರಶೇಖರ್, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಉಪ ಆಯುಕ್ತ ರಮೇಶ್ ನರಸಯ್ಯ, ಜಿಲ್ಲಾ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕಿ ಸುಮ ಕೋಡಿಹಳ್ಳಿ, ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಬಿ.ಮಂಜುನಾಥ್ ಮತ್ತಿತರರಿದ್ದರು.

# ಸುವರ್ಣ ಪರಿಸರ ಪ್ರಶಸ್ತಿ–2026 ಪ್ರದಾನ



ಪರಿಸರ ದಿನಾಚರಣೆ ಅಂಗವಾಗಿ ಯೋಗಶಿಕ್ಷಕ ಯೋಗ ಪ್ರಕಾಶ್, ಡಾ.ಭೇರ್ಯ ರಾಮಕುಮಾರ್‌ರಿಗೆ 'ಸುವರ್ಣ ಪರಿಸರ ಪ್ರಶಸ್ತಿ–2026' ನೀಡಿ ಅಭಿನಂದಿಸಲಾಯಿತು.

ಮೈಸೂರು,ಜೂ.23(ಎಂಕೆ)–ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಯೋಗ ಶಿಕ್ಷಕ ಯೋಗ ಪ್ರಕಾಶ್ ಹಾಗೂ ಡಾ.ಭೇರ್ಯ ರಾಮಕುಮಾರ್ ಅವರಿಗೆ 'ಸುವರ್ಣ ಪರಿಸರ ಪ್ರಶಸ್ತಿ–2026' ನೀಡಿ, ಅಭಿನಂದಿಸಲಾಯಿತು.

ನಗರದ ಪ್ರಕೃತಿ ಫುಡ್‌ನಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸುವರ್ಣ ಬೆಳಕು ಫೌಂಡೇಷನ್ ಅಧ್ಯಕ್ಷ ಎಸ್.ಮಹೇಶ್ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಡಾ.ಭೇರ್ಯ ರಾಮಕುಮಾರ್, ಹಿಂದಿನ ತಲೆಮಾರು ಉತ್ತಮ ಪರಿಸರ ಉಳಿಸಿದ್ದು, ಅದನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಹೊಣೆ ನಮ್ಮೆಲ್ಲರ ಮೇಲಿದೆ ಎಂದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ತಲೆಮಾರು ಪರಿಸರ ಹಾನಿಯ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಯೋಗ ಪ್ರಕಾಶ್ ಮಾತನಾಡಿ, ನಾನು ಕೃಷಿಕ ಕುಟುಂಬದಿಂದ ಬಂದವನಲ್ಲ. ಆದರೆ ಕೃಷಿಯೇ ನನ್ನ ಬದುಕಿನಲ್ಲಿ ಸಂತೋಷ ತಂದಿದೆ. 'ಬಂಗಾರದ ಮನುಷ್ಯ' ಸಿನಿಮಾ ನನಗೆ ಪ್ರೇರಣೆಯಾಯಿತು. ಅದರ ಪ್ರಭಾವದಿಂದ ಯಾವುದೇ ರಾಸಾಯನಿಕ ಬಳಕೆ ಮಾಡದೆ ಇಂದಿಗೂ ಸಾವಯವ ಕೃಷಿ ಮಾಡುತ್ತಿದ್ದೇನೆ ಎಂದು ತಿಳಿಸಿದರು. ಸುವರ್ಣ ಬೆಳಕು ಫೌಂಡೇಷನ್ ಗೌರವಾಧ್ಯಕ್ಷ ಮಂಜುನಾಥ್, ಪಾಂಚಜನ್ಯ ಚಾರಿಟಬಲ್ ಟ್ರಸ್ಟ್‌ನ ಕಿಶೋರ್, ರಾಜು, ಲಯನ್ ಸುರೇಶ್, ಬಿ.ವಿ.ಮಂಜುನಾಥ್, ಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ಅಯೋಧ್ಯೆ ರಾಮಮಂದಿರ ದೇಣಿಗೆ ವಿವಾದ

# ಉತ್ತರ ಪ್ರದೇಶ ಸರ್ಕಾರಕ್ಕೆ ಎಸ್‌ಐಟಿ ಪ್ರಾಥಮಿಕ ವರದಿ ಸಲ್ಲಿಕೆ



**ಲಖನೌ:** ಅಯೋಧ್ಯೆಯ ರಾಮ ಮಂದಿರಕ್ಕೆ ಬಂದಿರುವ ದೇಣಿಗೆ ದುರುಪಯೋಗವಾಗಿದೆ ಮತ್ತು ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪಗಳು ಕೇಳಿ ಬಂದಿದ್ದವು. ಆ ಬೆನ್ನಲ್ಲೇ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು ತನ್ನ ಪ್ರಾಥಮಿಕ ವಿಚಾರಣಾ ವರದಿಯನ್ನು ಮಂಗಳವಾರ (ಜೂ.23) ಉತ್ತರ ಪ್ರದೇಶ ಸರ್ಕಾರಕ್ಕೆ ಸಲ್ಲಿಸಿದೆ. ಲಖನೌ ವಿಭಾಗೀಯ ಕಮಿಷನರ್ ವಿಜಯ್ ವಿಶ್ವಾಸ್ ಪಂತ್ ಅವರು ಈ ಪ್ರಾಥಮಿಕ ತನಿಖಾ ವರದಿಯನ್ನು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂಜಯ್ ಪ್ರಸಾದ್ ಅವರಿಗೆ ಹಸ್ತಾಂತರಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆಯು ಇನ್ನು ಪ್ರಗತಿಯಲ್ಲಿದ್ದು, ಮತ್ತಷ್ಟು ಪ್ರಮುಖ ಸಾಕ್ಷ್ಯ ಹಾಗೂ ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ.

ರಾಮಮಂದಿರಕ್ಕೆ ಬಂದಿರುವ ಕಾಣಿಕೆ ಹಾಗೂ ದೇಣಿಗೆಯ ಹಣದಲ್ಲಿ ಅಕ್ರಮ ನಡೆದಿದೆ ಎಂಬ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ, ಈ ಕುರಿತು ಸಮಗ್ರ ತನಿಖೆ ನಡೆಸುವಂತೆ ದೇವಸ್ಥಾನದ ಟ್ರಸ್ಟ್ ಉತ್ತರ ಪ್ರದೇಶ ಸರ್ಕಾರಕ್ಕೆ ವಿನಂತಿಸಿತ್ತು. ಟ್ರಸ್ಟ್‌ನ ಮನವಿ ಮೇರೆಗೆ ರಾಜ್ಯ ಸರ್ಕಾರವು ಜೂ.13ರಂದು ಉನ್ನತ ಮಟ್ಟದ ಎಸ್‌ಐಟಿ ತಂಡವನ್ನು ತನಿಖೆಗೆ ಆದೇಶಿಸಿತ್ತು.

# ವಕೀಲರ ಬದಲಿಸಿದ ಬೆನ್ನಲ್ಲೇ ಸುಪ್ರೀಂಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ ದರ್ಶನ್



ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ವಕೀಲರನ್ನು ಬದಲಾಯಿಸಿದ್ದಾರೆ. ಈ ಬೆನ್ನಲ್ಲೇ ನೂತನ ವಕೀಲರ ಮೂಲಕ ಪ್ರಕರಣದ 60 ಸಾಕ್ಷಿಗಳ ವಿಚಾರಣೆಗೆ ನಿಗದಿಪಡಿಸಲಾಗಿರುವ ಒಂದು ವರ್ಷದ ಗಡುವನ್ನು ಕಡಿತಗೊಳಿಸುವಂತೆ ಸುಪ್ರೀಂಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದಾರೆ.

ಕೇಸ್ ವಾದದಿಂದ ವಕೀಲ ಸುನಿಲ್ ಕುಮಾರ್ ಹಿಂದೆ ಸರಿದು 59ನೇ ಸೆಷನ್ಸ್ ನ್ಯಾಯಾಲಯಕ್ಕೆ ಮೆಮೋ ಸಲ್ಲಿಕೆ ಮಾಡಿದ್ದಾರೆ. ದರ್ಶನ್, ಲಕ್ಷ್ಮಣ್ ಮತ್ತು ನಾಗರಾಜ್ ಸೇರಿದಂತೆ ಮೂವರು ಆರೋಪಿಗಳ ಪರ ವಕಾಲತ್ತಿನಿಂದ ಹಿಂದೆ ಸರಿಯುವುದಾಗಿ ಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ನ್ಯಾಯಾಲಯವು ದರ್ಶನ್‌ಗೆ, ಹಿರಿಯ ವಕೀಲ ಹಷ್ಮತ್ ಪಾಷಾ ನಿಮ್ಮ ಪರ ವಕಾಲತ್ತು ಹಾಕಿದ್ದಾರೆ ಎಂದು ತಿಳಿಸಿತು. ಪ್ರಕರಣದ ದಾಖಲೆಗಳನ್ನು ನೂತನ ವಕೀಲರಿಗೆ ಹಸ್ತಾಂತರಿಸುವಂತೆ ಕೋರ್ಟ್ ಸೂಚಿಸಿತು. ದಾಖಲೆಗಳನ್ನು ಈಗಾಗಲೇ ಕುಟುಂಬಸ್ಥರಿಗೆ ನೀಡಲಾಗಿದೆ ಎಂದು ಸುನೀಲ್ ಪರ ವಕೀಲರು ಕೋರ್ಟ್‌ಗೆ ತಿಳಿಸಿದರು

# ನೀಟ್ ಮರು ಪರೀಕ್ಷೆ ಬಳಿಕ ಟೆಲಿಗ್ರಾಮ್ ನಿರ್ಬಂಧ ತೆರವು

**ನವದೆಹಲಿ:** ಜೂನ್ 22ರ ಮಧ್ಯರಾತ್ರಿ ಸರ್ಕಾರ ಟೆಲಿಗ್ರಾಂ ಆ್ಯಪ್ ಮೇಲೆ ವಿಧಿಸಿದ್ದ ತಾತ್ಕಾಲಿಕ ನಿಷೇಧ ಮುಗಿದ ನಂತರ ಮಂಗಳವಾರ ಬೆಳಿಗ್ಗೆ ಗೂಗಲ್ ಟೆಲಿಗ್ರಾಮ್ ಅನ್ನು ಮರು ಸ್ಥಾಪಿಸಿದೆ. ಮೆಸೇಜಿಂಗ್ ಅಪ್ಲಿಕೇಶನ್ ಅನ್ನು ಈಗಾಗಲೇ ಕೆಲವು ಅಸ್ತಿತ್ವದಲ್ಲಿರುವ ಬಳಕೆದಾರರು ಬಳಸಬಹುದಾಗಿತ್ತಾದರೂ, ಹೊಸ ಬಳಕೆದಾರರು ಆಪಲ್‌ನ ಆಪ್ ಸ್ಟೋರ್‌ನಿಂದ ಬೆಳಿಗ್ಗೆ 10 ಗಂಟೆವರೆಗೆ ಅದನ್ನು ಹುಡುಕಲು ಅಥವಾ ಡೌನ್‌ಲೋಡ್ ಮಾಡಲು ಸಾಧ್ಯವಾಗಲಿಲ್ಲ. ಏಕೆಂದರೆ, ಅದನ್ನು ತಾತ್ಕಾಲಿಕವಾಗಿ ತೆಗೆದುಹಾಕಲಾಗಿತ್ತು.





ಈ ವಿಷಯದಲ್ಲಿ ಸುದ್ದಿಸಂಸ್ಥೆ ಪಿಟಿಐ ಆ್ಯಪ್‌ಗೆ ಕಳುಹಿಸಿದ ಇಮೇಲ್ ಪ್ರಶ್ನೆಗೆ ತಕ್ಷಣದ ಪ್ರತಿಕ್ರಿಯೆ ಸಿಕ್ಕಿಲ್ಲ. ದೇಶದಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದ ವೈದ್ಯಕೀಯ ಪ್ರವೇಶ ಪರೀಕ್ಷೆ NEET-UG 2026 ಪ್ರಶ್ನೆಪತ್ರಿಕೆ ಲೀಕ್ ತಡೆಯಲು ವಿಫಲವಾಗಿದ್ದ ಮೋದಿ ಸರ್ಕಾರ, ಮೆಸೇಜಿಂಗ್ ಆ್ಯಪ್ ಟೆಲಿಗ್ರಾಮ್ ಅನ್ನು ಜೂ.22ರವರೆಗೆ ತಾತ್ಕಾಲಿಕವಾಗಿ ನಿಷೇಧಿಸಿತ್ತು.

ಈ ನಿಷೇಧ ಹೇರುವ ಮುನ್ನ, ಸರ್ಕಾರಿ ಅಧಿಕಾರಿಗಳು ಜೂ.3ರಂದು ಟೆಲಿಗ್ರಾಂ ಪ್ರತಿನಿಧಿಗಳನ್ನು ಭೇಟಿಯಾದರು. ನಂತರ, ಜೂ.22ರವರೆಗೆ ವೆಬ್ ಆವೃತ್ತಿ ಸೇರಿದಂತೆ ಅಪ್ಲಿಕೇಶನ್ ಮತ್ತು ಅದರ ಸಂಬಂಧಿತ ವೆಬ್ ಲಿಂಕ್‌ಗಳನ್ನು ನಿರ್ಬಂಧಿಸಲು ಕೇಂದ್ರ ನಿರ್ಧರಿಸಿತು. ತನ್ನ ಸಂದೇಶ ಎಡಿಟ್ ವೈಶಿಷ್ಟ್ಯವನ್ನು ಸಹ ಜೂನ್ 30 ರವರೆಗೆ ನಿರ್ಬಂಧಿಸಲು ಟೆಲಿಗ್ರಾಮ್‌ಗೆ ನಿರ್ದೇಶಿಸಲಾಗಿದೆ. ಜೂ.21ರಂದು NEET ಮರು ಪರೀಕ್ಷೆ ನಡೆದಿದ್ದು, ಇಲ್ಲಿವರೆಗೆ ಯಾವುದೇ ವಂಚನೆಯಾಗಿರುವ ಕುರಿತು ವರದಿಯಾಗಿಲ್ಲ.

# ದೇಶ - ವಿದೇಶ


## ತಿರುಮಲ ಬೆಟ್ಟಗಳಲ್ಲಿ ವಿಜಯನಗರ ಸಾಮ್ರಾಜ್ಯದ ಪುರಾವೆಗಳು ಪತ್ತೆ

**ತಿರುಪತಿ:** ಆಂಧ್ರಪ್ರದೇಶದ ತಿರುಮಲ ಬೆಟ್ಟಗಳನ್ನು ಒಳಗೊಂಡಿರುವ ಶೇಷಾಚಲಂ ಅರಣ್ಯ ವಲಯದಲ್ಲಿ ಕರುನಾಡಿನ ವಿಜಯನಗರ ಸಾಮ್ರಾಜ್ಯದ ಕಾಲದ ಅತ್ಯಂತ ಅಪರೂಪದ ಐತಿಹಾಸಿಕ ಪುರಾವೆಗಳು ಮತ್ತು ಶಿಲ್ಪಕಲೆಗಳು ಪತ್ತೆಯಾಗಿವೆ. ಇತಿಹಾಸ ಸಂಶೋಧಕರು, ಪುರಾತತ್ವ ಇಲಾಖೆ ವಿಜ್ಞಾನಿಗಳು ನಡೆಸಿರುವ ಅನ್ವೇಷಣೆಯಲ್ಲಿ ಈ ಮಹತ್ವದ ವಿಷಯ ಬೆಳಕಿಗೆ ಬಂದಿದೆ, ಅಭಯಾರಣ್ಯಗಳಲ್ಲಿ ಅಡಗಿರುವ ಐತಿಹಾಸಿಕ ಸಂಪತ್ತನ್ನು ಬೆಳಕಿಗೆ ತರಲು ನಲ್ಲಮಲ, ಲಂಕಮಲ ಮತ್ತು ಶೇಷಾಚಲಂ ಕಾಡುಗಳಲ್ಲಿ ಸಮೀಕ್ಷೆ ನಡೆಸುತ್ತಿದೆ. ತೆಲುಗು, ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಶಿಲಾಫಲಕಗಳ ಮೇಲೆ ಬರೆಯಲಾಗಿದೆ. ಪಲ್ಲವರು ಮತ್ತು ಕಾಕತೀಯ ರಾಜರು ಮಾಡಿದ ಅಭಿವೃದ್ಧಿ ಕುರಿತು ಹಲವಾರು ಶಿಲಾ ಶಾಸನಗಳನ್ನು ಗುರುತಿಸಿದ್ದು, ಅವುಗಳ ವಿವರಗಳನ್ನು ಸಂರಕ್ಷಿಸಲು ಪ್ರಯತ್ನಿಸಲಾಗುತ್ತಿದೆ. ಮೊದಲ ಶತಮಾನಕ್ಕೂ ಮೊದಲಿನಿಂದಲೂ ನಲ್ಲಮಲದಲ್ಲಿ ಶ್ರೀಶೈಲ ದೇವಾಲಯವಿತ್ತು ಎಂದು ಶಾಸನಗಳ ಮೂಲಕ ಸ್ಪಷ್ಟಪಡಿಸಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಶ್ರೀ ಕೃಷ್ಣದೇವರಾಯ ಮತ್ತು ಶಿವಾಜಿ ಸೇರಿದಂತೆ ಅನೇಕ ಜನರು ಶ್ರೀಶೈಲಕ್ಕೆ ಭೇಟಿ ನೀಡಿದ್ದರು ಎಂದು ಗುರುತಿಸಿದೆ. ಈಗಾಗಲೇ 38 ಶಾಸನ ಗಳನ್ನು ಗುರುತಿಸಿ, ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಮಹತ್ವವನ್ನು ತಿಳಿದುಕೊಂಡಿದೆ.



## ಸಿಂಧೂ ನದಿ ನೀರಿಗಾಗಿ ಯುದ್ಧಕ್ಕೂ ಸಿದ್ಧ ಎಂದ ಪಾಕ್ ರಕ್ಷಣಾ ಸಚಿವ

**ಇಸ್ಲಾಮಾಬಾದ್:** ಸಿಂಧೂ ನದಿ ನೀರು ಒಪ್ಪಂದ ವಿಚಾರವಾಗಿ ಭಾರತಕ್ಕೆ ಪಾಕಿಸ್ತಾನ ಯುದ್ಧದ ಎಚ್ಚರಿಕೆ ನೀಡಿದೆ.




ನೀರು ನಮ್ಮ ರಾಷ್ಟ್ರೀಯ ಭದ್ರತೆಯ ಭಾಗವಾಗಿದ್ದು, ಅದರ ಮೇಲೆ ಯಾವುದೇ ರೀತಿಯ ಅಪಾಯ ಎದುರಾದರೆ ಭಾರತದ ವಿರುದ್ಧ ಯುದ್ಧಕ್ಕೂ ಹಿಂಜರಿಯುವುದಿಲ್ಲ ಎಂದು ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್ ಉದ್ಧಟತನ ಹೇಳಿಕೆ ನೀಡಿದ್ದಾರೆ.

ಪಾಕಿಸ್ತಾನ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಆಸಿಫ್, ನಮ್ಮ ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಎದುರಾದರೆ, ಅದರಲ್ಲೂ ನೀರು ನಮ್ಮ ಭದ್ರತೆಯ ಭಾಗವಾಗಿರುವುದರಿಂದ ಭಾರತದ ವಿರುದ್ಧ ಯುದ್ಧಕ್ಕೂ ಸಿದ್ಧರಾಗುತ್ತೇವೆ ಎಂದು ಹೇಳಿದ್ದಾರೆ. ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್, 2028ರ ಜೂನ್ ವೇಳೆಗೆ ಸಿಂಧೂ ನದಿ ನೀರು ಹರಿವನ್ನು ಪಾಕಿಸ್ತಾನಕ್ಕೆ ತಡೆಯುವ ಸಾಮರ್ಥ್ಯ ಭಾರತಕ್ಕೆ ಸಿಗಬಹುದು ಎಂಬ ಹೇಳಿಕೆ ಪಾಕಿಸ್ತಾನಕ್ಕೆ ಹೆಚ್ಚು ಆತಂಕ ಸೃಷ್ಟಿಸಿದೆ. ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿಯಲ್ಲಿ 26 ಮಂದಿ ಬಲಿಯಾದ ಕಾರಣ ವಿಶ್ವಸಂಸ್ಥೆ ಮಧ್ಯಸ್ಥಿಕೆಯಲ್ಲಿ ಭಾರತ 1960ರ ಸಿಂಧೂ ಜಲ ಒಪ್ಪಂದ ಅಮಾನತುಗೊಳಿಸಿದ್ದು, ಇದರಿಂದ ಕಂಗಾಲಾಗಿರುವ ಪಾಕಿಸ್ತಾನದ ನಾಯಕರು ಹೀಗೆ ಭಾರತದ ವಿರುದ್ಧ ಬೆದರಿಕೆ ಪ್ರಯತ್ನ ನಡೆಸಿದ್ದಾರೆ.

## ಅಧಿವೇಶನದಲ್ಲಿ ಸಿಎಂ ಕೈ ಸನ್ನೆ; ಹೊರನಡೆದ ವಿಪಕ್ಷ ನಾಯಕರು


**ಚೆನ್ನೈ:** ತಮಿಳುನಾಡು ವಿಧಾನಸಭೆಯಲ್ಲಿ ಇಂದು ಅಧಿವೇಶನದಲ್ಲಿ ಮುಖ್ಯಮಂತ್ರಿ ಜೋಸೆಫ್ ವಿಜಯ್ ಮಾಡಿದ ಕೈ ಸನ್ನೆ ರಾಜಕೀಯ ಹೈಡ್ರಾಮಾಕ್ಕೆ ಕಾರಣವಾಗಿದೆ. ಭಾಷಣದ ವೇಳೆ ಸಿಎಂ ವಿಜಯ್ ಮಾಡಿದ ಸನ್ನೆ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗುವುದರ ಜೊತೆಗೆ ತೀವ್ರ ಚರ್ಚೆಗೆ ಗ್ರಾಸವಾಗಿದೆ.



ವಿಜಯ್ ಈ ಸನ್ನೆ ಮಾಡುತ್ತಿದ್ದಂತೆ ಆಡಳಿತಾರೂಢ ಟಿವಿಕೆ ಪಕ್ಷದ ಶಾಸಕರು ಮೇಜು ತಟ್ಟಿ ಹರ್ಷ ವ್ಯಕ್ತಪಡಿಸಿದರೆ, ವಿರೋಧ ಪಕ್ಷ ಡಿಎಂಕೆ ಶಾಸಕರು ಸದನದಿಂದ ಹೊರನಡೆದಿದ್ದಾರೆ. ಈ ಹಿಂದೆ ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಅವರು ಮಾಡಿದ್ದ ಕೈ ಸನ್ನೆಯನ್ನೇ ಇದೀಗ ವಿಜಯ್ ಮರುಸೃಷ್ಟಿಸಿದ್ದಾರೆ ಎನ್ನಲಾಗಿದೆ. ಈ ವರ್ಷದ ಆರಂಭದಲ್ಲಿ ಡಿಎಂಕೆ ಪ್ರಧಾನ ಕಚೇರಿಯಲ್ಲಿ ಕಾಂಗ್ರೆಸ್ ಜೊತೆಗಿನ ಸೀಟು ಹಂಚಿಕೆ ಮಾತುಕತೆ ಮುಗಿಸಿ ಹೊರಬರುವಾಗ ಎಂ.ಕೆ.ಸ್ಟಾಲಿನ್ ಮಾಧ್ಯಮಗಳತ್ತ ಕೈ ಎತ್ತಿ ಸನ್ನೆ ಮಾಡಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು. ಈ ಬಗ್ಗೆ ನಂತರ ಸ್ಪಷ್ಟನೆ ನೀಡಿದ್ದ ಸ್ಟಾಲಿನ್, ವರದಿಗಾರರು ಪದೇ ಪದೇ ಪ್ರಶ್ನೆ ಕೇಳುತ್ತಿದ್ದರಿಂದ, ಮಾತುಕತೆ ಮುಗಿಯಿತು ಎಂದು ಹೇಳಲು ಸಹಜವಾಗಿ ಕೈ ಸನ್ನೆ ಮಾಡಿದ್ದೆ ಅಷ್ಟೇ ಎಂದಿದ್ದರು. ಇದೀಗ ಅದೇ ಸನ್ನೆಯನ್ನು ಸಿಎಂ ವಿಜಯ್ ವಿಧಾನಸಭೆಯಲ್ಲಿ ಬಳಸಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

## ಟೆಕ್ ಕಂಪನಿಗಳಲ್ಲಿ ಎಐ ಆರ್ಭಟ; ಕಂಪನಿಯೊಂದರ 21 ಸಾವಿರ ಮಂದಿ ಮನೆಗೆ


**ಅಮೆರಿಕ:** ಡಿಜಿಟಲ್ ಯುಗವನ್ನು ಸರ್ವಾಧಿಕಾರಿಯಾಗಿ ಆಳಲು ಪ್ರಾರಂಭಿಸಿರುವ ಎಐ ಟೆಕ್ನಾಲಜಿ,




ಟೆಕ್ ಕಂಪನಿಗಳನ್ನು ಪೆಡಂಭೂತದಂತೆ ಕಾಡಲಾರಂಭಿಸಿದೆ. ದೈತ್ಯ ಕಂಪನಿಗಳಾದ ಟಿಸಿಎಸ್, ಅಮೆಜಾನ್, ಮೈಕ್ರೋಸಾಫ್ಟ್, ಇನ್ಫೋಸಿಸ್ ತಿಂಗಳುಗಳ ಹಿಂದಷ್ಟೇ ತನ್ನ ಉದ್ಯೋಗಿಗಳನ್ನು ಸೇವೆಯಿಂದ ಬಿಡುಗಡೆ ಮಾಡಿವೆ. ಈ ಸಾಲಿಗೆ ಅಮೆರಿಕ ಮೂಲದ ಒರಾಕಲ್ ಕಂಪನಿಯೂ ಸೇರಿದೆ. ಅಮೆರಿಕದ ಟೆಕ್ನಾಲಜಿಯ ಈ ದೈತ್ಯ ಕಂಪನಿಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಾಗತಿಕವಾಗಿ ಸುಮಾರು 21,000 ಉದ್ಯೋಗಗಳನ್ನು ಕಡಿತಗೊಳಿಸಿರುವುದು ನಿಜ, ಇದಕ್ಕೆ ಎಐ ಮೂಲ ಕಾರಣ ಎಂದು ಸ್ಪಷ್ಟಪಡಿಸಿದೆ. ಕಳೆದ ವರ್ಷವಿದ್ದ ಸುಮಾರು 1,62,000 ಉದ್ಯೋಗಿಗಳಿಂದ ಈ ವರ್ಷದ ಮೇ 31ರ ಹೊತ್ತಿಗೆ 1,41,000ಕ್ಕೆ(ಶೇ.13) ಕಡಿಮೆ ಮಾಡಲಾಗಿದೆ. ಭವಿಷ್ಯದಲ್ಲಿ ಇನ್ನಷ್ಟು ಉದ್ಯೋಗಿಗಳ ಹಾಗೂ ಉದ್ಯೋಗಗಳು ಕಡಿತವಾಗಲಿದೆ. ಇದು ಇಲ್ಲಿಗೆ ಮುಗಿಯುವುದಿಲ್ಲ ಎಂದು ಸಂಸ್ಥೆ ತಿಳಿಸಿದ್ದು, ಉದ್ಯೋಗಿಗಳ ಆತಂಕ ಹೆಚ್ಚಾಗಿದೆ.

## ಕೆಮಿಕಲ್ ಪ್ಲಾಂಟ್‌ನಲ್ಲಿ ಅಗ್ನಿ ಅವಘಡ: ಇಬ್ಬರು ಮೃತ

**ಆಂಧ್ರಪ್ರದೇಶ:** ಕೆಮಿಕಲ್ ಪ್ಲಾಂಟ್‌ನಲ್ಲಿ ಬೆಂಕಿ ಅವಘಡ ಸಂಭವಿಸಿ, ಇಬ್ಬರು ಕಾರ್ಮಿಕರು ಸಾವನ್ನಪ್ಪಿದ ಘಟನೆ ಆಂಧ್ರದ ಅನಕಪಲ್ಲಿ ಜಿಲ್ಲೆಯ ಪರವಾಡ ಫಾರ್ಮಾ ಸಿಟಿಯಲ್ಲಿ ನಡೆದಿದೆ. ಇಲ್ಲಿನ ದಕ್ಷಿಣ ಎನರ್ಜಿ ಕೆಮಿಕಲ್ ಪ್ಲಾಂಟ್‌ನಲ್ಲಿ ಮಂಗಳವಾರ ಬೆಳಗ್ಗೆ ಈ ಅವಘಡ ಸಂಭವಿಸಿದ್ದು,




ಮೃತರನ್ನು ಅಚ್ಯುತಪುರಂನ ತ್ರಿನಾಥ್ ಮತ್ತು ವೆಂಕಟೇಶ್ ಎಂದು ಗುರುತಿಸಲಾಗಿದೆ. ಗಾಯಗೊಂಡಿರುವ ಹಲವು ಕಾರ್ಮಿಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ರಾಸಾಯನಿಕ ಘಟಕದೊಳಗೆ ಏಕಾಏಕಿ ಬೆಂಕಿ ಕಾಣಿಸಿಕೊಂಡು, ಕೆಲವೇ ಕ್ಷಣಗಳಲ್ಲಿ ದಟ್ಟ ಹೊಗೆ ಆವರಿಸಿದೆ. ಫಾರ್ಮಾ ಸಿಟಿ ಅಗ್ನಿಶಾಮಕ ಠಾಣೆ ಮತ್ತು ಪರವಾಡ ಅಗ್ನಿಶಾಮಕ ಠಾಣೆಯ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಹಲವರನ್ನು ರಕ್ಷಿಸಿದ್ದಾರೆ. ಹರಸಾಹಸಪಟ್ಟು ಬೆಂಕಿ ನಂದಿಸುವ ಮೂಲಕ ಪಕ್ಕದ ಕೈಗಾರಿಕಾ ಘಟಕಗಳಿಗೆ ಜ್ವಾಲೆ ಹರಡುವುದನ್ನು ತಡೆದಿದ್ದಾರೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸಿ, ಸಂತ್ರಸ್ತರಿಗೆ ಪರಿಹಾರ ಒದಗಿಸಲು ಮತ್ತು ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ನೀಡಲು ಆದೇಶಿಸಿದ್ದಾರೆ. ತಮಿಳುನಾಡಿನ ತಿರುವಳ್ಳೂರು ಖಾಸಗಿ ಮೀನು ಘಟಕದ ಕೂಲಿಂಗ್ ಪೈಪ್‌ನಿಂದ ಅಮೋನಿಯಾ ಅನಿಲ ಸೋರಿಕೆಯಿಂದ ಒಟ್ಟು 9 ಮಂದಿ ಸಾವನ್ನಪ್ಪಿದ ಬೆನ್ನಲ್ಲೇ ಆಂಧ್ರದ ರಾಸಾಯನಿಕ ಘಟಕದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಇದಕ್ಕೆ ಕಾರಣವೇನು ಎಂಬುದರ ಕುರಿತು ತನಿಖೆಯಲ್ಲಿ ತಿಳಿಯಬೇಕಿದೆ.

ಮೈಸೂರು ಮಿತ್ರ ಬುಧವಾರ 24 ಜೂನ್ 2026

# ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ: ಕೆಲಕಾಲ ಆತಂಕ ವಾತಾವರಣ

ಮಡಿಕೇರಿ, ಜೂ.23– ಬಾಂಬ್ ಇಡಲಾಗಿದೆ ಎಂದು ಸಂದೇಶಗಳನ್ನು ಕಳಿಸಿ ಕ್ಷಣಕಾಲ ಭೀತಿಯ ವಾತಾವರಣ ಕಲ್ಪಿಸಿ ನಂತರ ಅದು ಸುಳ್ಳೆಂಬುದನ್ನು ಜಾಹೀರುಗೊಳಿಸಿವುದು ಇತ್ತೀಚೆಗೆ ಸರ್ವೇಸಾಮಾನ್ಯವಾಗಿದೆ. ಅದರಂತೆ ಇಂದು ಮಡಿಕೇರಿಯ ಜಿಲ್ಲಾ ನ್ಯಾಯಾಲಯಕ್ಕೂ ಇಂಥ ಬೆದರಿಕೆ ಸಂದೇಶ ಬಂದಿತ್ತು.

ಜಿಲ್ಲಾ ನ್ಯಾಯಾಲಯದಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆಯ ಇ–ಮೇಲ್ ಸಂದೇಶದ ಹಿನ್ನೆಲೆ ತೀವ್ರ ತಪಾಸಣೆ ನಡೆಸಲಾಯಿತು. ಇ–ಮೇಲ್ ಗಮನಿಸಿದ ನ್ಯಾಯಾಲಯದ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದರು. ಜಿಲ್ಲಾ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳ ನ್ಯಾಯಾಲಯಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಿದರು.



ನ್ಯಾಯಾಲಯದೊಳಗೆ ಬಾಂಬ್ ನಿಷ್ಕ್ರಿಯ ದಳದಿಂದ ಶೋಧನೆ

ಸುರಕ್ಷತೆಯ ದೃಷ್ಟಿಯಿಂದ ನ್ಯಾಯಾಧೀಶರು, ವಕೀಲರು, ಸಿಬ್ಬಂದಿಗಳು ಹಾಗೂ ಸಾರ್ವಜನಿಕರ ಪ್ರವೇಶವನ್ನು ತಪಾಸಣೆ ಪೂರ್ಣಗೊಳ್ಳುವವರೆಗೆ ನಿರ್ಬಂಧಿಸಲಾಗಿತ್ತು. ನ್ಯಾಯಾಧೀಶರ ಕೊಠಡಿಗಳು, ನ್ಯಾಯಾಲಯದ ಕೊಠಡಿಗಳು, ಆವರಣ, ವಾಹನ ಪಾರ್ಕಿಂಗ್ ಪ್ರದೇಶ, ಕಚೇರಿಗಳು, ಸಮೀಪದ ಕ್ಯಾಂಟೀನ್‌ನಲ್ಲೂ ಶೋಧ ಕಾರ್ಯ ನಡೆಸಲಾಯಿತು. ಆದರೆ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡು ಬರಲಿಲ್ಲ. ಆ ಬಳಿಕವೇ ನ್ಯಾಯಾಲಯಕ್ಕೆ ತೆರಳಲು ಪೊಲೀಸರು ಅನುಮತಿಸಿದರು.

ಬೆಳಿಗ್ಗೆ ನ್ಯಾಯಾಲಯಕ್ಕೆ ಇ–ಮೇಲ್ ಸಂದೇಶದ ಮೂಲಕ ಬಾಂಬ್ ಬೆದರಿಕೆ ಬಂದಿದೆ. ಬಾಂಬ್ ನಿಷ್ಕ್ರೀಯ ದಳ ಮತ್ತು ಶ್ವಾನದಳ ಸಂಪೂರ್ಣ ನ್ಯಾಯಾಲಯವನ್ನು ತಪಾಸಣೆ ನಡೆಸಿದೆ. ಯಾವುದೇ ಸಂಶಯಾಸ್ಪದ ವಸ್ತು ಅಥವಾ ಬಾಂಬ್ ಪತ್ತೆಯಾಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎನ್ನುವುದು ಮೇಲ್ನೋಟಕ್ಕೆ ಖಾತ್ರಿಯಾಗಿದ್ದರೂ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಈ ಕುರಿತು ಹೈಕೋರ್ಟ್ ನ್ಯಾಯಾಧೀಶರಿಗೂ ಮಾಹಿತಿ ನೀಡಿ ಮುಂದಿನ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮುಮ್ತಾಝ್ ಸುದ್ದಿಗಾರರಿಗೆ ತಿಳಿಸಿದರು.

**ಇ–ಮೇಲ್ ಸಂದೇಶ:** ಟಿ. ಸಹನ. ಎಂಬ ಹೆಸರಿನಲ್ಲಿ ಜಿಲ್ಲಾ ನ್ಯಾಯಾಧೀಶರಿಗೆ ಈ ಮೇಲ್ ಸಂದೇಶ ರವಾನಿಸಲಾಗಿದ್ದು, ಬೆಳಗೆ 8 ಗಂಟೆ 10 ನಿಮಿಷಕ್ಕೆ ಪೋಸ್ಟ್ ಮಾಡಲಾಗಿದೆ. 'ಗೌರವಾನ್ವಿತ ನ್ಯಾಯಾಧೀಶರೇ' ಎಂದು ಸಂಬೋಧಿಸಿ,' ನಿಮ್ಮ ನ್ಯಾಯಾಲಯವನ್ನು ಮಧ್ಯಾಹ್ನ 2 ಗಂಟೆಗೆ ಸೈನೈಡ್ ಬಾಂಬ್‌ಗಳನ್ನು ಬಳಸಿ ಸ್ಫೋಟಿಸಲಾಗುವುದು. ದುರ್ಗಾ ಎಂಬುವವರು ಪ್ರವಾದಿ ಮುಹಮ್ಮದ್ ಅವರನ್ನು ಅವಮಾನಿಸಿದ್ದಾರೆ. ಎಲ್ಲಾ ಸಾರ್ವಜನಿಕರನ್ನು ಸ್ಥಳಾಂತರಿಸಿ, 2 ಐಸಿಸ್ ಆತ್ಮಹತ್ಯಾ ಬಾಂಬರ್‌ಗಳು ಸಹ ಬರಬಹುದು. ಈ ಸ್ಫೋಟವು ಮುಂಬರುವ ಘಟನೆಗಳಿಗೆ ಸಂಕೇತವಾಗಲಿ' ಎಂದು ಇ–ಮೇಲ್ ಸಂದೇಶದಲ್ಲಿ ಉಲ್ಲೇಖಿಸಲಾಗಿದೆ. ಇದು 2ನೇ ಬಾಂಬ್ ಬೆದರಿಕೆಯ ಸಂದೇಶವಾಗಿದ್ದು, ಫೆ.16 ರಂದು ಕೂಡ ಬಾಂಬ್ ಬೆದರಿಕೆಯ ಇ–ಮೇಲ್ ಸಂದೇಶ ನ್ಯಾಯಾಲಯಕ್ಕೆ ಬಂದಿತ್ತು. ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕೊಂಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಲವ್ ಜಿಹಾದ್: ಅಗತ್ಯ ಕ್ರಮಕ್ಕೆ ಆಗ್ರಹಿಸಿ ಜೂ.30 ಜನಾಂದೋಲನ

ಮಡಿಕೇರಿ, ಜೂ.23–ಲವ್ ಜಿಹಾದ್ ಮತಾಂತರ ಪ್ರಕರಣಗಳನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಹಿಂದೂ ಸುರಕ್ಷಾ ಸಮಿತಿ ಜೂ.30 ಕುಶಾಲನಗರದಲ್ಲಿ ಬೃಹತ್ ಜನಜಾಗೃತಿ ಜನಾಂದೋಲನ ನಡೆಸಲಿದ್ದು, ಇದಕ್ಕೆ ಹಿಂದೂ ಜಾಗರಣಾ ವೇದಿಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.



ವಿಹೆಚ್‌ಪಿ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ನಿಸರ್ಗಧಾಮದ ವಾಣಿಜ್ಯ ಮಳಿಗೆಯೊಂದರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಿಂದೂ ಮಹಿಳೆ ಮತ್ತು ಆಕೆಯ ಮಗನನ್ನು ಮತಾಂತರ ಮಾಡಿದ ಪ್ರಕರಣ ನಡೆದಿದೆ. ಹೀಗಿದ್ದೂ ಪೊಲೀಸರು 2 ಮಳಿಗೆಗಳನ್ನು ಮುಚ್ಚಿರುವುದನ್ನು ಹೊರತುಪಡಿಸಿದರೆ ಸಮಗ್ರ ತನಿಖೆಗೆ ಮುಂದಾಗಿಲ್ಲ ಎಂದು ಹಿಂದೂ ಜಾಗರಣಾ ವೇದಿಕೆಯ ಜಿಲ್ಲಾ ಸಂಯೋಜಕ ಬೋಜೇಗೌಡ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಈ ಹಿಂದೆ ಗುಡ್ಡೆಹೊಸೂರು ಭಾಗದ ಹಿಂದೂ ಮಹಿಳೆ ಲವ್ ಜಿಹಾದ್‌ಗೆ ಸಿಲುಕಿ ಮಾತಾಂತರಗೊಂಡಿದ್ದಳು. ಬಳಿಕ ಎನ್‌ಐಎ ತನಿಖೆಯೊಂದರ ಸಂದರ್ಭ ಈ ಮಹಿಳೆ ಅಂತರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿತ್ತು ಎಂದು ತಿಳಿಸಿದರು. ಲವ್ ಜಿಹಾದ್, ಮತಾಂತರಗಳ ಬಗ್ಗೆ ಹಿಂದೂ ಸಮಾಜ ಜಾಗೃತವಾಗಬೇಕೆಂದು ಕರೆ ನಿಡಿದರು.

**ಬೃಹತ್ ಮೆರವಣಿಗೆ:** ಪ್ರಾಂತ ಕಾರ್ಯಕಾರಿಣಿ ಸದಸ್ಯ ಕುಕ್ಕೇರ ಅಜಿತ್ ಮಾತನಾಡಿ, ಜೂ.30 ರ ಬೆಳಗ್ಗೆ 10.30 ಗಂಟೆಗೆ ನಿಸರ್ಗಧಾಮದ ಬಳಿಯಿಂದ ಗಣಪತಿ ದೇವಸ್ಥಾನದ ಬಳಿಯ ಕಾರು ನಿಲ್ದಾಣದವರೆಗೆ ಬೃಹತ್ ಜನ ಜಾಗೃತಿ ಮೆರವಣಿಗೆ ಮತ್ತು ಸಭಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿ ನೀಡಿದರು. ನಿಸರ್ಗಧಾಮದ ಮಳಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಹಿಳೆ ಮತ್ತು ಆಕೆಯ ಮಗನನ್ನು ಕೇರಳದ ಮಲಪ್ಪುರಂನ ಮದರಸವೊಂದರಲ್ಲಿ ಮತಾಂತರಗೊಳಿಸಲಾಗಿದೆ. ಮಾತ್ರವಲ್ಲದೇ ಇಂತಹ 12 ಪ್ರಕರಣಗಳು ಇಲ್ಲಿ ನಡೆದಿದ್ದು, ಎಲ್ಲಿಯೂ ಬಹಿರಂಗವಾಗಿಲ್ಲ. ಈ ಹಿನ್ನೆಲೆ ಸಮಗ್ರ ತನಿಖೆ ನಡೆಸಿ ಮತಾಂತರಕ್ಕೆ ಕಾರಣವಾಗಿರುವ ಮದರಸದ ಪ್ರಮುಖರನ್ನು ತನಿಖೆಗೆ ಒಳಪಡಿಸಲು ಪೊಲೀಸರು ಮುಂದಾಗಬೇಕು. ಮತಾಂತರಗಳ ಹಿಂದಿರುವ ಶಕ್ತಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವ ಕಾರ್ಯ ಮಾಡಬೇಕೆಂದು ಒತ್ತಾಯಿಸಿದರು.

**ಬೀದಿಗಿಳಿದು ಹೋರಾಟ:** ಅಕ್ರಮ ಬಾಂಗ್ಲಾ ದೇಶಿಗರನ್ನು ಗುರುತಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆನ್ನುವುದು ಹಿಂಜಾವೇ ಆಗ್ರಹವಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಬೀದಿಗಿಳಿದು ಹೋರಾಟ ನಡೆಸಲು ಹಿಂದೇಟು ಹಾಕುವುದಿಲ್ಲ ಎಂದು ಅಜಿತ್ ಎಚ್ಚರಿಸಿದರು.

ಶಾಂತೆಯಂಡ ತಿಮ್ಮಯ್ಯ, ಭುವನ್ ಮೇಕೇರಿ, ಅಪ್ಪು ಬಾಲಕೃಷ್ಣ ರೈ, ಇದ್ದರು.

# ವಿದೇಶಿ ಪ್ರವಾಸಿಗರ ಮಾಹಿತಿ ಪಡೆದುಕೊಳ್ಳಿ



ಹೋಮ್ ಸ್ಟೇಗಳ ಮಾಲಿಕರು ಮತ್ತು ವ್ಯವಸ್ಥಾಪಕರ ಸಭೆ ನಡೆಸಲಾಯಿತು.

ವಿರಾಜಪೇಟೆ, ಜೂ.23–ಹೋಮ್ ಸ್ಟೇಗಳಿಗೆ ವಿದೇಶಿ ಪ್ರವಾಸಿಗರು ಬಂದಲ್ಲಿ ಅಂತಹ ಪ್ರವಾಸಿಗರ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳಬೇಕು ಹಾಗೂ ಹೋಮ್‌ಸ್ಟೇಗಳಲ್ಲಿ ನಡೆಯುವಂತ ವಿಚಾರಗಳ ಮಾಹಿತಿಯನ್ನು ಇಲಾಖೆಗೆ ನೀಡುವಂತಾಗಬೇಕು ಎಂದು ಡಿವೈಎಸ್‌ಪಿ ಮಹೇಶ್ ಕುಮಾರ್ ಹೇಳಿದರು

ವೃತ್ತ ನಿರೀಕ್ಷಕರ ಕಛೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಠಾಣಾ ಉಪ ವಿಭಾಗ ವ್ಯಾಪ್ತಿಯ ಹೋಮ್ ಸ್ಟೇಗಳ ಮಾಲಿಕರು ಮತ್ತು ವ್ಯವಸ್ಥಾಪಕರ ಸಭೆ ಅಧ್ಯಕ್ಷತೆ ವಹಿಸಿದ್ದ ಅವರು, ಎಲ್ಲಾ ಹೋಮ್‌ಸ್ಟೇಗಳು ರಾಜ್ಯ ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ನೋದಾಯಿತ ಗೊಂಡಿರಬೇಕು ಇಲ್ಲವಾದಲ್ಲಿ ಅಂತ ಹೋಮ್‌ಸ್ಟೇಗಳನ್ನು ಕಾನೂನುಬಾಹಿರ ಎಂದು ಪರಿಗಣಿಸಲಾಗುವುದು

ಪ್ರತಿ ಹೋಮ್‌ಸ್ಟೇಗಳಲ್ಲಿ ಸಿಸಿ ಕ್ಯಾಮರಗಳನ್ನು ಕಡ್ಡಾಯವಾಗಿ ಅಳವಡಿಸಿರ ಬೇಕು. 30 ದಿನಗಳ ಸಂಗ್ರಹಣೆಯು ಕ್ಯಾಮರಾಗಳಲ್ಲಿ ಹೊಂದಿರಬೇಕು. ಯಾವುದೇ ಸಮಯದಲ್ಲಿ ಪೊಲೀಸ್ ಅಧಿಕಾರಿಗಳು ಬಂದರೂ ಫುಟೇಜ್ ನೀಡುವಂಥ ಸೌಲಭ್ಯವಿರಬೇಕೆಂದು ಸೂಚಿಸಿದರು. ಹೋಮ್‌ಸ್ಟೇಗಳಿಗೆ ಭೇಟಿ ನೀಡುವ ಪ್ರವಾಸಿಗರು ಯಾವ ಉದ್ದೇಶಕ್ಕಾಗಿ ಬಂದಿದ್ದಾರೆ ಎಂಬ ಮಾಹಿತಿ ಮತ್ತು ವಿಳಾಸವನ್ನು ಪಡೆದುಕೊಳ್ಳಬೇಕು ಎಂದು ಡಿವೈಎಸ್‌ಪಿ ಹೇಳಿದರು.

ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಮಾತನಾಡಿ ಪ್ರತಿಯೊಬ್ಬರು ಕಾನೂನನ್ನು ಪಾಲಿಸುವಂತಾಗಬೇಕು ಎಂದರು. ಸಭೆಯಲ್ಲಿ ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿ ಹೆಚ್.ಎಸ್.ಪ್ರಮೋದ್ ಇದ್ದರು.

# ಸುಶಿಕ್ಷಿತರೆ ಇಂದು ಜಾತಿಯ ಸಂಕೋಲೆಯಲ್ಲಿ ಸಿಲುಕುತ್ತಿದ್ದಾರೆ

## ಶರಣ ಸಾಹಿತ್ಯ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ

ಕುಶಾಲನಗರ, ಜೂ.23 (ಆರ್‌ಹೆಚ್)– ಸುಶಿಕ್ಷಿತರೆ ಇಂದು ಜಾತಿಯ ಸಂಕೋಲೆಯಲ್ಲಿ ಸಿಲುಕುತ್ತಿದ್ದು, ಎಲ್ಲರೂ ಬಸವಣ್ಣನವರ ತತ್ವ ಸಿದ್ದಾಂತವನ್ನು ಅರಿತುಕೊಳ್ಳುವ ಅಗತ್ಯವಿದೆ ಎಂದು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ರೈತ ಸಹಕಾರ ಭವನದ ಶ್ರೀ ದೊಡ್ಡ ವೀರ ರಾಜೇಂದ್ರ ವೇದಿಕೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕೊಡಗು ಜಿಲ್ಲಾ ಘಟಕ ಹಾಗೂ ಕದಳಿ ವೇದಿಕೆ ಆಯೋಜಿಸಿದ್ದ ಶರಣ ಸಾಹಿತ್ಯ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ, ಬಸವಣ್ಣ ಎಲ್ಲರನ್ನೂ ಸಮಾನರೆಂದು ಭಾವಿಸಿದವರು. ಆದರೆ ಇಂದು ಜಾತಿ ಎಂಬುದು ಎಲ್ಲೆಡೆ ಮುಖ್ಯ ವಿಚಾರವಾಗಿದೆ. ಸುಶಿಕ್ಷಿತರೆ ಜಾತಿಯ ಸಂಕೋಲೆಯಲ್ಲಿ ಸಿಲುಕಿದ್ದಾರೆ. ಹೀಗಾಗಿ ಎಲ್ಲರೂ ಬಸವಣ್ಣನವರ ತತ್ವ, ಸಿದ್ಧಾಂತದ ಬಗ್ಗೆ ಅರಿತುಕೊಳ್ಳುವ ಅಗತ್ಯವಿದೆ. ಸಮಾನತೆಯನ್ನು ಪ್ರತಿಪಾದಿಸುವ ಅಗತ್ಯವಿದೆ ಎಂದರು.

6 ರಾಜ್ಯದಲ್ಲಿ ಅನೇಕ ಮಂದಿ ವೀರಶೈವ ಲಿಂಗಾಯತ ಸಮುದಾಯ ಮುಖ್ಯಮಂತ್ರಿಗಳೆ ಆಡಳಿತ ನಡೆಸಿದರೂ ಯಾರಿಗೂ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣ ಫೋಟೋ ಹಾಕಿಸಲು ಸಾಧ್ಯವಾಗಿರಲಿಲ್ಲ. ಆದರೆ ಸಿದ್ದರಾಮಯ್ಯನವರ ಕಾಲದಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕುವಂತೆ ಆದೇಶ ಹೊರಡಿಸಿ ದಿಟ್ಟತನ ಪ್ರದರ್ಶಿಸಿದರು. –ಹೊರಟ್ಟಿ



ಶರಣ ಸಾಹಿತ್ಯ ಪ್ರಥಮ ಸಮ್ಮೇಳನವನ್ನು ಗಣ್ಯರು, ಮಠಾಧಿಪತಿಗಳು ಉದ್ಘಾಟಿಸಿದರು,

ಸಮಾಜದಲ್ಲಿ ಮಹಿಳೆಯರಿಗೆ ಸಮಾನವಾದ ಸ್ಥಾನಮಾನ ನೀಡಬೇಕು. 12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನವಾದ ಸ್ಥಾನಮಾನ ಕೊಟ್ಟಿದ್ದರು. ಆದರೆ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಬಿಲ್ ತರಲು ಸಾಧ್ಯವಾಗಿಲ್ಲ. ಮಹಿಳಾ ಮಸೂದೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು.

ಸಮ್ಮೇಳನದ ಸಾನಿಧ್ಯ ವಹಿಸಿದ್ದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಬಸವಾದಿ ಶರಣರ ವಚನ ಸಾಹಿತ್ಯ ಕೂಡ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು. ಕೊಡಗನ್ನು ಆಳ್ವಿಕೆ ನಡೆಸಿದ ರಾಜರು ಅಭೂತಪೂರ್ವ ಕೊಡುಗೆಯನ್ನು ನೀಡಿದ್ದಾರೆ. ಸಾಂಸ್ಕೃತಿಕವಾಗಿ ಆಧ್ಯಾತ್ಮಿಕವಾಗಿ ಜಗತ್ತಿನ ಮನ್ನಣೆ ಗಳಿಸಿದೆ. ಕೊಡಗು ವೀರಪರಂಪರೆಯ ನಾಡು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ಸದನದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ**

ಸದನದಲ್ಲಿ ಮಾತನಾಡಲು ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡುತ್ತಿದ್ದೇನೆ. ಸಾಮಾನ್ಯವಾಗಿ ಪುರುಷರು ಮಾತನಾಡುವುದಕ್ಕಿಂತ ಮಹಿಳೆಯರು ಮಾತನಾಡುವಾಗ ಉಳಿದ ಸದಸ್ಯರು ಗೌರವದಿಂದ ಕೇಳುತ್ತಾರೆ. ಯಾಕೆಂದರೆ ಮಹಿಳೆಯರು ತಾವು ಮಾತನಾಡ ಬೇಕಿರುವ ವಿಷಯದ ಬಗ್ಗೆ ಅಧ್ಯಯನ ಮಾಡಿಕೊಂಡು ಬಂದು ಮಾತನಾಡುತ್ತಾರೆ. – ಹೊರಟ್ಟಿ

ಸಮ್ಮೇಳನಾಧ್ಯಕ್ಷ ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಪೀಠಾಧ್ಯಕ್ಷ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಕೊಡಗು ವಿವಿಯಲ್ಲಿ ಶರಣ ಚಿಂತನೆಗಳ ಅಧ್ಯಯನಕ್ಕೆ ಬಸವ ಪೀಠ ಸ್ಥಾಪಿಸಬೇಕು. ಶಾಲಾ ಕಾಲೇಜುಗಳಲ್ಲಿ ಸರಳ ವಚನಗಳ ಕಂಠಪಾಠ ಮಾಡಿಸಬೇಕು. ಹಳ್ಳಿ ಹಳ್ಳಿಗಳಲ್ಲಿ ಪೂಜ್ಯರ ಸಂಕಲ್ಪದಂತೆ ಬಸವಾದಿ ಶರಣರ ಚಿಂತನೆಗಳನ್ನು ಹರಡಿ ಸಮಸಮಾಜ ನಿರ್ಮಿಸಲು ಪ್ರಯತ್ನಿಸಬೇಕು ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ಡಾ.ಸಿ.ಸೋಮಶೇಖರ್ ಮಾತನಾಡಿದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 8 ಮಂದಿ ಸಾಧಕರನ್ನು ಸನ್ಮಾನಿಸಲಾಯಿತು.

# ಜು.7 ರಂದು ಮೈಸೂರಿನಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾದಿಂದ ಜಾಗೃತಿ ಸಮಾವೇಶ

## ಚಾಮರಾಜನಗರ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ



ಚಾಮರಾಜನಗರ ಬಿಜೆಪಿ ಜಿಲ್ಲಾ ಎಸ್‌ಟಿ ಮೋರ್ಚಾದ ವತಿಯಿಂದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

**ಚಾಮರಾಜನಗರ:** ಬಿಜೆಪಿ ಎಸ್‌ಟಿ ಮೋರ್ಚಾವು ಸಂವಿಧಾನ ಬದ್ಧ ಶೇ.7 ರಷ್ಟು ಎಸ್‌ಟಿ ಮೀಸಲಾತಿ ಜಾರಿಗೆ ಆಗ್ರಹಿಸಿ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶವನ್ನು ಮೈಸೂರಿನಲ್ಲಿ ಜು.7 ರಂದು ಹಮ್ಮಿಕೊಂಡಿದೆ ಎಂದು ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಮೇಯರ್ ಶಿವಕುಮಾರ್ ತಿಳಿಸಿದರು.

ನಗರದ ರಾಮಸಮುದ್ರ ಕುಲುಮೆ ರಸ್ತೆಯಲ್ಲಿರುವ ಬಿಜೆಪಿ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸಂವಿಧಾನಬದ್ಧ ಶೇ.7 ಎಸ್‌ಟಿ ಮೀಸಲಾತಿ ಜಾರಿಗೆ ಒತ್ತಾಯಿಸಿ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಹೊರಟಿದೆ. ಹಿಂದಿನ ಬಿಜೆಪಿ ಸರ್ಕಾರ ಎಸ್‌ಟಿಗೆ ಶೇ. 3 ರಿಂದ ಶೇ.7 ರಷ್ಟು ಮೀಸಲಾತಿ ಹೆಚ್ಚಳ ಮಾಡಿದೆ. ಅದರಂತೆ 3 ಸಾವಿರದಿಂದ 4 ಸಾವಿರದಷ್ಟು ಹುದ್ದೆಗಳು ಸಿಗಬೇಕಾಗಿದೆ. ಜನಾಂಗದ ಅನೇಕರಿಗೆ ಕೆಎಎಸ್, ಐಪಿಎಸ್ ಸೇರಿದಂತೆ ಉನ್ನತವಾದ ದೊಡ್ಡ ದೊಡ್ಡ ಹುದ್ದೆಗಳು ಕೂಡ ಸಿಗಬೇಕಿದೆ. ಶೇ.3ರಷ್ಟು ಮೀಸಲಾತಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಿದರೆ ಸಮುದಾಯಕ್ಕೆ ಅನ್ಯಾಯ ಆಗುತ್ತದೆ, ಅದೇ ರೀತಿ ಸಮುದಾಯ ಮಕ್ಕಳ ಶಿಕ್ಷಣದಲ್ಲೂ ಪದವಿ, ಇಂಜಿನಿಯರ್, ಮೆಡಿಕಲ್ ಸೀಟ್‌ಗಳಲ್ಲೂ ಅನ್ಯಾಯ ಆಗಲಿದೆ. ಯಾವುದೇ ಸಮುದಾಯ ಮುಖ್ಯವಾಹಿನಿಗೆ ಬರಬೇಕು ಎಂದರೆ. ಶಿಕ್ಷಣ ಮುಖ್ಯವಾಗಿದೆ ಎಂದರು.

ಸಂವಿಧಾನ ಬದ್ಧ ಶೇ.7 ಎಸ್‌ಟಿ ಮೀಸಲಾತಿ ಜಾರಿಗೆ ಒತ್ತಾಯಿಸಿ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶವನ್ನು ಪ್ರತಿ ಜಿಲ್ಲೆಯಲ್ಲೂ ಮಾಡಲಾಗುತ್ತಿದ್ದು, ಈಗಾಗಲೇ ದಾವಣಗೆರೆ ಇತರೆ ಜಿಲ್ಲೆಗಳಲ್ಲಿ ಸಮಾವೇಶಗಳು ಯಶಸ್ವಿಯಾಗಿದ್ದು, ಜು. 7ರಂದು ಮೈಸೂರಿನಲ್ಲಿ ಜಾಗೃತಿ ಸಮಾವೇಶವನ್ನು ಆಯೋಜಿಸಲಾಗಿದೆ ಈ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಬಿಜೆಪಿ ಎಸ್‌ಟಿ ಮೋರ್ಚಾವು ಸಂವಿಧಾನ ಬದ್ಧ ಶೇ.7 ಎಸ್‌ಪಿ ಮೀಸಲಾತಿ ಜಾರಿಗೆ ಒತ್ತಾಯಿಸಿ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶವನ್ನು ರಾಜ್ಯಾದ್ಯಂತ ಮಾಡುತ್ತಿದೆ. ರಾಜ್ಯದಲ್ಲಿ ಸಮುದಾಯಕ್ಕೆ ಏನಾದರು ಅನ್ಯಾಯವಾದಾಗ ಮೊದಲು ಹೋರಾಟ ಮಾಡುತ್ತಿದ್ದು, ಮೈಸೂರು, ಚಾಮರಾಜನಗರ ಜಿಲ್ಲೆಯವರು. ಎಸ್‌ಟಿಗಾಗಿ ಹೋರಾಟ ಮಾಡಿದ್ದು ಈ ಭಾಗದಲ್ಲಿ 3 ಜನರು ಶಾಸಕರು ಆಗುತ್ತಿದ್ದೇವೆ. ಈಗ ಎಸ್‌ಟಿಗೆ ಒಂದೇ ಒಂದು ಶಾಸಕ ಸ್ಥಾನ ಸಿಕ್ಕಿದೆ.

ಎಸ್‌ಟಿ ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಯಸುಂದರ್ ಮಾತನಾಡಿದರು. ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು, ಸಭೆಯಲ್ಲಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಬಿಜೆಪಿ ಮುಖಂಡ ಅಪ್ಪಣ್ಣ, ಬಿಜೆಪಿ ಮಾಜಿ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುಡಾ ಕೂಡುಪ್ರಕಾಶ್, ಕೋಶಾಧ್ಯಕ್ಷ ರಘು, ಜಿಲ್ಲಾ ಉಪಾಧ್ಯಕ್ಷ ಹರದನಹಳ್ಳಿ ಚಂದ್ರು, ಜಿಲ್ಲಾ ಉಪಾಧ್ಯಕ್ಷ ತಿವ್ರವಿರಾಟ್, ನಾಗೇಶ್ ಮಾಸ್ಟರ್, ಕೃಷ್ಣ, ಸೀಗಮಾರನಾಯಕ, ಚಂದ್ರೇಶ್, ರಾಮನಾಯಕ, ಯಳಂದೂರು ಸುನಿಲ್, ಚಿಕ್ಕಾಟಿ ಶಿವಣ್ಣ, ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಕಮಲಮ್ಮ, ರಾಜೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಾಗಡೆ ಗುರುಪ್ರಸಾದ್, ಹತ್ತೂರು ನಾಗರಾಜು ಇದ್ದರು.

# ಬಿಳಿಗಿರಿರಂಗನ ಬೆಟ್ಟದಲ್ಲಿ ಕಾಡಾನೆ ದಾಳಿ

## ಜ್ಯೂಸ್ ಅಂಗಡಿ, ಕಾರು ಜಖಂ

ಯಳಂದೂರು, ಜೂ.23– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಕಾಡಾನೆಯೊಂದು ಜ್ಯೂಸ್ ಅಂಗಡಿ ಹಾಗೂ ಕಾರಿನ ಮೇಲೆ ದಾಳಿ ಮಾಡಿ ಧ್ವಂಸಗೊಳಿಸಿದೆ.



ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನದ ರಾಜಗೋಪುರ ಬಳಿ ಕಾಡಾನೆ ದಾಳಿ ಮಾಡಿದ್ದು ರಂಗನಾಥ್ ಎಂಬುವರಿಗೆ ಸೇರಿದ ಕಾರು ಜಖಂಗೊಂಡಿದೆ. ಅಲ್ಲದೇ ಸಿದ್ದರಾಜು ಎಂಬುವರಿಗೆ ಸೇರಿದ ಜ್ಯೂಸ್ ಅಂಗಡಿ ಧ್ವಂಸವಾಗಿದ್ದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಸಂಬಂಧಪಟ್ಟ ಅರಣ್ಯ ಇಲಾಖೆ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಮಾಲೀಕರು ಒತ್ತಾಯಿಸಿದ್ದಾರೆ.

# ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಆಗಿ ಡಾ.ಆರ್.ಎನ್.ದೇವಕಿ ನೇಮಕ

ಚಾಮರಾಜನಗರ, ಜೂ. 23– ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಸಿಮ್ಸ್)ಯ ಡೀನ್ ಆಗಿ ಬಯೋಕೆಮಿಸ್ಟ್ರಿ ವಿಭಾಗದ ಪ್ರಾಧ್ಯಾಪಕಿ ಡಾ. ದೇವಕಿ ಆರ್.ಎನ್ ಅವರನ್ನು ನೇಮಕ ಮಾಡಲಾಗಿದೆ.



ಸರ್ಕಾರದ ವೈದ್ಯಕೀಯ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಿಮ್ಸ್ ಆಡಳಿತ ಮಂಡಳಿಯ ಉಪಾಧ್ಯಕ್ಷ ಮೊಹಮ್ಮದ್ ಮೊಹಸಿನ್ ಅವರು ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ಆದೇಶದ ಪ್ರಕಾರ, ಡಾ. ದೇವಕಿ ಆರ್.ಎನ್ ಅವರು ಮುಂದಿನ ನಾಲ್ಕು ವರ್ಷಗಳ ಅವಧಿಗೆ ಸಿಮ್ಸ್‌ನ ಡೀನ್ ಆಗಿ ಕಾರ್ಯನಿರ್ವಹಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಮತ್ತು ಆಡಳಿತ ಕ್ಷೇತ್ರದಲ್ಲಿ ಅವರ ಅನುಭವ ಹಾಗೂ ಸೇವೆಯನ್ನು ಪರಿಗಣಿಸಿ ಈ ನೇಮಕಾತಿ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಇದೇ ವೇಳೆ, ಸಿಮ್ಸ್‌ನಲ್ಲಿ ಪ್ರಭಾರ ಡೀನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ಹೆಚ್.ಜಿ.ಮಂಜುನಾಥ್ ಅವರನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅರವಳಿಕೆಶಾಸ್ತ್ರ ವಿಭಾಗದ ಪ್ರಾಧ್ಯಾಪಕರ ಹುದ್ದೆಯಲ್ಲಿ ಮುಂದುವರೆಯುವಂತೆ ಸರ್ಕಾರ ಸೂಚಿಸಿದೆ. ಡಾ. ದೇವಕಿ ಅವರ ನೇಮಕಾತಿಗೆ ವೈದ್ಯಕೀಯ ವಲಯದ ಗಣ್ಯರು ಹಾಗೂ ಸಿಮ್ಸ್ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದು, ಸಂಸ್ಥೆಯ ಅಭಿವೃದ್ಧಿಗೆ ಅವರ ಆಡಳಿತಾತ್ಮಕ ಅನುಭವ ಸಹಕಾರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಗಿರಿಜಾ ಕಲ್ಯಾಣ ಮಹೋತ್ಸವ: ಚಾಮರಾಜೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಉಯ್ಯಾಲೋತ್ಸವ

ಚಾಮರಾಜನಗರ, ಜೂ.23– ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಸೋಮವಾರ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ನೆರವೇರಿದವು.

ಮಹೋತ್ಸವದ ಅಂಗವಾಗಿ ಚಾಮರಾಜೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಲಂಕಾರ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯಿತು. ಸಪ್ತಮಿ ದಿನದ ಕಾರ್ಯಕ್ರಮಗಳಲ್ಲಿ ಪ್ರಾತಃಕಾಲ ಔಪಾಸನೆ, ಉರುಟಣೆ, ಉಯ್ಯಾಲೋತ್ಸವ ಸೇರಿದಂತೆ ಹಲವು ಧಾರ್ಮಿಕ ಆಚರಣೆಗಳು ಜರುಗಿದವು. ರಾತ್ರಿ ಔಪಾಸನೆ ಹಾಗೂ ಪಾಕಿನಿ ಮಹೋತ್ಸವವೂ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಕಾರ್ಯಕ್ರಮದ ಕೊನೆಯಲ್ಲಿ ಮಹಾಮಂಗಳಾರತಿ ನೆರವೇರಿಸಿ, ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು. ದೇವಸ್ಥಾನ ಆವರಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರ ಗಮನ ಸೆಳೆದವು.



ಈ ಸಂದರ್ಭದಲ್ಲಿ ಪ್ರಧಾನ ಅರ್ಚಕರಾದ ಆಗಮಿಕ ದರ್ಶನ್, ಕೆಂಪನಂಜಾಂಬ ತಾಯಿ ಅರ್ಚಕರಾದ ರಾಮಕೃಷ್ಣ ಭಾರದ್ವಾಜ್, ಚಾಮುಂಡೇಶ್ವರಿ ತಾಯಿ ಅರ್ಚಕರಾದ ನಾಗರಾಜ ದೀಕ್ಷಿತ್, ಉತ್ಸವ ಸಮಿತಿ ಸದಸ್ಯರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿಗೆ ಕರಾಟೆ ಸಮಗ್ರ ಪ್ರಶಸ್ತಿ

**ಚಾಮರಾಜನಗರ:** ಗೋಜುಕಾನ್ ಕರಾಟೆಡು ಅಸೋಸಿಯೇಷನ್ ವತಿಯಿಂದ ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ನಗರದ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆಪಟುಗಳು ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿ ಉತ್ತಮ ಪ್ರದರ್ಶನ ನೀಡಿ ವಿಜೇತರಾಗಿ ಬಹುಮಾನಗಳನ್ನು ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಚಾಮರಾಜನಗರದ ನಾಗ ಮಾರ್ಷಲ್ ಆರ್ಟ್ಸ್ ಅಕಾಡಮಿ ಕರಾಟೆ ಪಟುಗಳು ಕತಾ ವಿಭಾಗದಲ್ಲಿ ವಿಜಯ್. ಜ್ಞಾನೇಶ್ ಕುಮಾರ್. ಹರ್ಷವರ್ಧನ್ ಪ್ರಥಮ ಸ್ಥಾನ, ಹೇಮಂತ್. ಪವನ್. ಮನ್ವಿತ್ ದ್ವಿತೀಯ ಸ್ಥಾನ, ಮಂಜುನಾಥ್. ನವನೀತ್. ವಿವೇಕ್ ತೃತೀಯ ಸ್ಥಾನ ಪಡೆದು.



ವಿಜೇತರಾಗಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಅವರನ್ನು ಮುಖ್ಯ ತರಬೇತುದಾರರು, ವಕೀಲರಾದ ಸೆನ್ಸಾಯ್ ರಾಜೇಂದ್ರ, ತರಬೇತುದಾರ ಸೆನ್ಸಾಯ್ ಯೋಗೇಶ್. ಸೆನ್ಸಾಯ್ ರಮೇಶ್.ಸೆನ್ಸಾಯ್ ಶೇಖರ್ ಅಭಿನಂದಿಸಿದ್ದಾರೆ.

# ಡೇರಿ ಅಧ್ಯಕ್ಷರುಗಳಿಗೆ ಆಡಳಿತ ನಿರ್ವಹಣೆ ಸಂಬಂಧ ತರಬೇತಿ



ಡೇರಿ ಅಧ್ಯಕ್ಷರುಗಳಿಗೆ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.

ಗುಂಡ್ಲುಪೇಟೆ, ಜೂ.23– ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರುಗಳಿಗೆ ಪಟ್ಟಣದ ಲ್ಯಾಂಪ್ಸ್ ಸಭಾಂಗಣದಲ್ಲಿ ನಡೆದ ಒಂದು ದಿನದ ಆಡಳಿತ ನಿರ್ವಹಣೆ ತರಬೇತಿ ಕಾರ್ಯಾಗಾರವನ್ನು ಸಹಕಾರ ಒಕ್ಕೂಟದ ಅಧ್ಯಕ್ಷರು ಹಾಗೂ ಚಾಮುಲ್ ನಿರ್ದೇಶಕರಾದ ಎಚ್.ಎಸ್.ನಂಜುಂಡ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಉದ್ಘಾಟನೆಯನ್ನು ಚಾಮುಲ್ ನಿರ್ದೇಶಕ ಎಂ.ಪಿ.ಸುನಿಲ್ ನೆರವೇರಿಸಿದರು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಂಜುಂಡ ಪ್ರಸಾದ್ ಸಹಕಾರ ಸಂಘಗಳು ಗಳಿಸಿದ ಲಾಭಾಂಶದ ಮೇಲೆ ಶೇಕಡ ಎರಡರಷ್ಟು ಶಿಕ್ಷಣಕ್ಕಾಗಿ ಪಾವತಿಸುತ್ತಿದ್ದು ಇದರಿಂದ ಸಹಕಾರ ಶಿಕ್ಷಣವನ್ನು ಬಲಪಡಿಸಲು ಸಂಘಗಳ ಅಧ್ಯಕ್ಷರುಗಳಿಗೆ ಒಂದು ದಿನದ ಆಡಳಿತ ನಿರ್ವಹಣಾ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕಾರದಲ್ಲಿ ಸಂಘಗಳ ನಿರ್ವಹಣೆ ಹಾಗೂ ಆಡಳಿತದ ಬಗ್ಗೆ ತಿಳಿದು ಸಂಘಗಳಲ್ಲಿ ಉತ್ತಮ ಆಡಳಿತ ನಡೆಸುವುದರ ಜೊತೆಗೆ ಸಂಘವು ಲಾಭಾಂಶದತ್ತ ಕೊಂಡೊಯ್ಯಲು ಸಹಕಾರಿಯಾಗುತ್ತದೆ ಎಂದರು.

ಸಹಕಾರ ಸಂಸ್ಥೆಗಳು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದ್ದು ಪ್ರತಿಯೊಬ್ಬರೂ ಸಹಕಾರ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ತಿಳಿಸಿದರು ಹಾಗೂ ಸಂಘದ ಅಧ್ಯಕ್ಷರುಗಳಿಗೆ ಸಂಘದಲ್ಲಿ ನಡೆಯುವ ದೈನಂದಿನ ಚಟುವಟಿಕೆಗಳ ಕಡೆ ಗಮನಹರಿಸಿ ಸಂಘದ ಸಮಸ್ಯೆಗಳನ್ನು ಆಲಿಸಿ, ಆಗಿಂದಾಗ್ಗೆ ಪರಿಹರಿಸಿಕೊಳ್ಳಲು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಎಂಪಿ ಸುನಿಲ್, ಸಹಕಾರ ಒಕ್ಕೂಟದ ನಿರ್ದೇಶಕ ಮುದ್ದಯ್ಯ, ಸಹಾಯಕ ನಿಬಂಧಕರಾದ, ಶೋಭಾ ಸಿಡಿಓ ಸರ್ವಮಂಗಳ ಚಾಮುಲ್ ಉಪಕಚೇರಿ ಮೇಲ್ವಿಚಾರಕ ಪ್ರಕಾಶ್ ಹೆಚ್ ವಿಸ್ತರಣಾಧಿಕಾರಿ ಸಿದ್ದಲಿಂಗೇಶ್, ರಂಜಿತಾ ಮನುಜ ಹಾಜರಿದ್ದರು

# ಚಲಿಸುತ್ತಿದ್ದ ಬಸ್ಸಿನಿಂದ ಬಿದ್ದು ಮಹಿಳೆಗೆ ಗಾಯ

**ಚಾಮರಾಜನಗರ:** ಚಲಿಸುತ್ತಿದ್ದ ಬಸ್‌ನಿಂದ ಮಹಿಳೆಯೊಬ್ಬಳು ಬಿದ್ದು ಗಾಯಗೊಂಡಿರುವ ಘಟನೆ ಕೋಳಿಪಾಳ್ಯ ಗ್ರಾಮದಲ್ಲಿ ನಡೆದಿದೆ. ಸುಶೀಲಬಾಯಿ ಗಾಯಗೊಂಡು ತಮಿಳುನಾಡು ರಾಜ್ಯದ ಸತ್ಯಮಂಗಲದ ತ್ಯಾಗೂ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರದ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ.

# ಮೈಸೂರಲ್ಲಿ 122 ಜನರ ಜೀವ ತೆಗೆದಿರುವ ಜಲ್ಲಿಕಲ್ಲುಗಳು...!!!

●ಟಿಪ್ಪರ್‌ಗಳಲ್ಲಿ ಓವರ್ ಲೋಡ್; ಹಾದಿಯುದ್ದಕ್ಕೂ ಜಲ್ಲಿ ಸುರಿದು ರಸ್ತೆ ಹಾಳು
●ದ್ವಿಚಕ್ರ ವಾಹನ ಸವಾರರಿಗೆ ಸಾವಿನ ಹಾದಿ; ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ ●ರಸ್ತೆಗಳೆಲ್ಲಾ ಗುಂಡಿಮಯ; ಪ್ರತಿ ರಸ್ತೆ ನಿರ್ಮಾಣ ಸಾಮಗ್ರಿಗಳ 'ಡಂಪಿಂಗ್ ಯಾರ್ಡ್'!



ಟ್ರ್ಯಾಕ್ಟರ್‌ನಲ್ಲಿ ಗಾರೆ ಮಿಶ್ರಿತ ಜಲ್ಲಿಕಲ್ಲು ಓವರ್‌ಲೋಡ್



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಜಲ್ಲಿಕಲ್ಲಿನ ರಾಶಿ ಜೊತೆಗೆ ವೃತ್ತದ ಬಹುತೇಕ ಭಾಗದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಜಲ್ಲಿಕಲ್ಲು.



ಸಾಹುಕಾರ್ ಚೆನ್ನಯ್ಯ ರಸ್ತೆ(ಮಾಜಿ ಶಾಸಕ ದಿ.ಶಂಕರಲಿಂಗೇಗೌಡ ಅವರ ಮನೆ ಎದುರು)ಯಲ್ಲಿ ಜಲ್ಲಿಕಲ್ಲು ಹರಡಿರುವುದು.

ಮೈಸೂರು, ಜೂ.23(ಎಂಕೆ)– ಜಲ್ಲಿಕಲ್ಲು, ಗಾರೆ ಮಿಶ್ರಿತ ಕಲ್ಲುಗಳ ಓವರ್‌ಲೋಡ್ ಹಾಕಿಕೊಂಡು ಬರುವ ಟಿಪ್ಪರ್‌ಗಳು, ಸಾಂಸ್ಕೃತಿಕ ನಗರಿ ಮೈಸೂರಿನ ರಸ್ತೆಗಳಲ್ಲಿ ಸುರಿದುಕೊಂಡು ಸಂಚರಿಸುತ್ತಿದ್ದರೂ ಪಾಲಿಕೆ ಅಧಿಕಾರಿಗಳಾಗಲಿ, ಪೊಲೀಸರಾಗಲಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಹೀಗೆ ಟಿಪ್ಪರ್‌ಗಳಿಂದ ಸುರಿದು, ರಸ್ತೆಯಲ್ಲಿ ಹರಡಿರುವ ಜಲ್ಲಿಕಲ್ಲುಗಳಿಂದಾಗಿ ಸ್ಕಿಡ್ಡಾಗಿ ಬೀಳುವ ದ್ವಿಚಕ್ರ ವಾಹನ ಸವಾರರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದ್ದು, ಕಳೆದ ಮೂರುವರೆ ವರ್ಷಗಳಲ್ಲಿ 122 ಮಂದಿ ಅಮಾಯಕರು ಅಸುನೀಗಿದ್ದಾರೆ...!

ಅಭಿವೃದ್ಧಿ ನೆಪದಲ್ಲಿ ಡಾಂಬರೀಕರಣಗೊಂಡಿರುವ ರಸ್ತೆಗಳನ್ನು ಅಗೆಯುವುದು. ಅಗೆದ ಗುಂಡಿಯನ್ನು ಮುಚ್ಚಲು ಲೋಡ್‌ಗಟ್ಟಲೇ ಜಲ್ಲಿಕಲ್ಲು ತಂದು ನಡು ರಸ್ತೆಯಲ್ಲಿ ಸುರಿಯುವುದು. ಗುಂಡಿ ಮುಚ್ಚಿದ ಬಳಿಕವೂ ತಿಂಗಳುಗಟ್ಟಲೇ ಜಲ್ಲಿಕಲ್ಲಿನ ರಾಶಿಯನ್ನು ಅಲ್ಲೇ ಬಿಟ್ಟಿರುವುದು ಒಂದೆಡೆಯಾದರೆ ಜಲ್ಲಿಕಲ್ಲು ಸಾಗಿಸುವ ಟಿಪ್ಪರ್, ಟ್ರ್ಯಾಕ್ಟರ್‌ಗಳು ಓವರ್ ಲೋಡ್ ಮಾಡಿಕೊಂಡು ಹಾದಿಯುದ್ದಕ್ಕೂ ಸುರಿದುಕೊಂಡು ಸಾಗುವುದರ ಜೊತೆಗೆ ಕಟ್ಟಡಗಳ ನಿರ್ಮಾಣಕ್ಕೆಂದು ರಸ್ತೆಗಳಲ್ಲಿ ಬೇಕಾಬಿಟ್ಟಿ ಮರಳು, ಎಂ ಸ್ಯಾಂಡ್ ಸುರಿಯುವುದರಿಂದಾಗಿಯೂ ಮೈಸೂರಿನ ಬಹುತೇಕ ರಸ್ತೆಗಳು ಅಪಾಯಕಾರಿಯಾಗಿ ಪರಿಣಮಿಸಿವೆ.

ಗುಂಡಿಗಳ ಜೊತೆಗೆ ರಸ್ತೆಯಲ್ಲೆಲ್ಲಾ ಹರಡಿರುವ ಜಲ್ಲಿಕಲ್ಲಿನಿಂದಾಗಿ ಸ್ಕಿಡ್ಡಾಗಿ ಬಿದ್ದು, ತೀವ್ರವಾಗಿ ಗಾಯಗೊಂಡು ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಮೈಸೂರು ನಗರದಲ್ಲೇ ಕಳೆದ ಮೂರು ವರ್ಷಗಳಲ್ಲಿ 212 ಸ್ವಯಂ ರಸ್ತೆ ಅಪಘಾತ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 122 ಮಂದಿ ಮೃತಪಟ್ಟಿದ್ದರೆ, 164 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ 111 ಮಂದಿಗೆ ಗಂಭೀರ ಗಾಯಗಳಾಗಿವೆ.

**ಬಲಿಗಾಗಿ ಕಾದಿವೆ:** ಹಾರ್ಡಿಂಜ್ ವೃತ್ತ, ಹೈವೇ ಸರ್ಕಲ್, ಜೋಡಿ ತೆಂಗಿನಮರ ರಸ್ತೆ, ಸಾಹುಕಾರ್ ಚೆನ್ನಯ್ಯ ರಸ್ತೆ ಯಾದವಗಿರಿ ಆಕಾಶವಾಣಿ ಸರ್ಕಲ್, ಹೆಬ್ಬಾಳಿನ ಅಂಬರೀಶ್ ರಸ್ತೆ ಉದ್ದಕ್ಕೂ, ಕೋರ್ಟ್ ಎದುರಿನ ವಾಣಿವಿಲಾಸ ರಸ್ತೆ, ಕೆ.ಆರ್.ಎಸ್ ರಸ್ತೆ ಅದರಲ್ಲೂ ಕುಂಬಾರಕೊಪ್ಪಲು ಜಯದೇವ ಆಸ್ಪತ್ರೆ ಬಳಿ ಸೇರಿದಂತೆ ಮೈಸೂರು ನಗರದ ಬಹುತೇಕ ರಸ್ತೆಗಳಲ್ಲಿ ಜಲ್ಲಿಕಲ್ಲು ಬಲಿಗಾಗಿ ಕಾದಿವೆ. ದ್ವಿಚಕ್ರ ವಾಹನ ಸವಾರರು ಭಯದಲ್ಲೇ ಸಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**ತೀವ್ರ ನಿರ್ಲಕ್ಷ:** ನಗರದಲ್ಲಿನ ರಸ್ತೆಗಳಲ್ಲಿ ಜಲ್ಲಿಕಲ್ಲು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದಕ್ಕೆ ನಗರ ಪಾಲಿಕೆ ಹಾಗೂ ಪೊಲೀಸರ ನಿರ್ಲಕ್ಷ್ಯವೇ ಪ್ರಮುಖ ಕಾರಣ. ಯಾವುದಾದರೂ ರಸ್ತೆ ಕಾಮಗಾರಿ ಕೈಗೊಂಡರೆ ನಿಗದಿತ ಅವಧಿಯಲ್ಲಿ ಮುಗಿಸಿ, ಡಾಂಬರೀಕರಣ ಮಾಡಿ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಆದರೆ, ಪಾಲಿಕೆಯ ಅಧಿಕಾರಿಗಳು ಬೇಕಾಬಿಟ್ಟಿಯಾಗಿ ಕಾಮಗಾರಿ ಕೈಗೆತ್ತಿಗೊಂಡು, ತಿಂಗಳುಗಳ ಕಾಲ ನಡೆಸಿ ಕೊನೆಗೆ ಅಲ್ಪಸ್ವಲ್ಪ ಚೆನ್ನಾಗಿದ್ದ ರಸ್ತೆಯನ್ನು ಹಾಳು ಮಾಡುತ್ತಿದ್ದಾರೆ. ಜೊತೆಗೆ ಒಳಚರಂಡಿ ಪೈಪ್‌ಲೈನ್ ಇಲವೇ ನೀರಿನ ಪೈಪ್ ಲೈನ್ ಅಳವಡಿಸಲು ತುಂಡರಿಸಿದ ರಸ್ತೆಗಳು ಅಪಾಯದ ಗುಂಡಿಗಳಾಗಿ ಪರಿಣಮಿಸಿವೆ.

**ಬಹುತೇಕ ರಸ್ತೆ ಹಾಳು:** ವ್ಯವಸ್ಥಿತ ಯೋಜನೆ ಮತ್ತು ಆಲೋಚನೆ ಇಲ್ಲದೆ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ನಗರಪಾಲಿಕೆ, ಮೈಸೂರಿನ ಬಹುತೇಕ ರಸ್ತೆಗಳನ್ನು ಸರ್ವನಾಶ ಮಾಡಿದೆ. ನಗರದ ಕೆಲವೇ ಕೆಲವು ರಸ್ತೆಗಳನ್ನು ಬಿಟ್ಟರೆ ಬಹುತೇಕ ರಸ್ತೆಗಳು ಹಾಳಾಗಿದ್ದು, ಒಂದಲ್ಲಾ ಒಂದು ಕಡೆ ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬಿದ್ದು ಕೈ–ಕಾಲು ಮುರಿದುಕೊಳ್ಳುವ ದುಸ್ಥಿತಿಯನ್ನು ನಿರ್ಮಾಣ ಮಾಡಲಾಗುತ್ತಿದೆ.

**ಪೊಲೀಸರ ವೈಫಲ್ಯ:** ಮೈಸೂರು ನಗರಕ್ಕೆ ಪ್ರತಿನಿತ್ಯ ಸಾವಿರಾರು ಲೋಡ್ ಜಲ್ಲಿ, ಗಾರೆ ಜಲ್ಲಿ ಸರಬರಾಜಾಗುತ್ತಿದೆ. ಇದನ್ನು ಸಾಗಿಸುವ ಟಿಪ್ಪರ್‌ಗಳು ಸದಾ ಓವರ್‌ಲೋಡ್ ಹಾಕಿಕೊಂಡು ಬಂದು, ಕಡಿದಾದ ಹಾಗೂ ರೋಡ್ ಹಂಪ್ ಇರುವಲ್ಲಿ ಇಲ್ಲವೇ ಬ್ರೇಕ್ ಹಾಕಿದಾಗ ರಸ್ತೆಯಲ್ಲೇ ಸುರಿಸುತ್ತಿವೆ ಅದರ ಮೇಲೆ ಸಾಗುವಾಗ ದ್ವಿಚಕ್ರ ವಾಹನ ಸವಾರರು ಆಯಾತಪ್ಪಿ ಬಿದ್ದು, ಅನಾಹುತಕ್ಕೀಡಾಗುತ್ತಿದ್ದಾರೆ. ರಸ್ತೆ ಅಪಘಾತಗಳನ್ನು ತಡೆಗಟ್ಟಲು ಮತ್ತು ಸಂಚಾರ ನಿಯಮಗಳ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳುವ ಪೊಲೀಸರು, ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುತ್ತಾರೆಯೇ ಹೊರತು ಇವೆಲ್ಲಾ ಕಾರಣಕ್ಕೆ ರಸ್ತೆಗಳು ಹಾಳಾಗಿವೆ, ಗುಂಡಿ ಬಿದ್ದಿವೆ. ಎಲ್ಲೆಂದರಲ್ಲಿ ಜಲ್ಲಿಕಲ್ಲು ಸುರಿದು ಅಪಾಯಕ್ಕೆ ಕಾದಿದೆ ಎಂಬುದನ್ನು ಅರಿತು, ಅದನ್ನು ಸರಿಪಡಿಸಿ ಎಂಬುದರ ಕುರಿತು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೇಕೆ ಹೇಳುವುದಿಲ್ಲ ಎಂಬ ಪ್ರಶ್ನೆಗಳ ಸಾರ್ವಜನಿಕರಲ್ಲಿ ಕಾಡುತ್ತಿವೆ.

**ಪೊಲೀಸರ ನಿಸ್ಸಾಯಕತೆ:** ಜಲ್ಲಿಕಲ್ಲು ಸಾಗಿಸುವ ಟಿಪ್ಪರ್, ಟ್ರ್ಯಾಕ್ಟರ್‌ಗಳು ರಸ್ತೆಯಲ್ಲಿ ಮನಸೋ ಇಚ್ಛೆ ಸುರಿಸುತ್ತಾ ಸಂಚರಿಸುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಪೊಲೀಸರು, ಕೊನೆಗೆ ತಾವೇ ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಕೆಲಸಕ್ಕೆ ಮುಂದಾಗುತ್ತಿರುವುದು ಪೊಲೀಸರ ಅಸಹಾಯಕತೆಗೆ ಪ್ರತ್ಯೇಕ ನಿದರ್ಶನವಾಗುತ್ತಿದೆ.

**ಸವಾರರ ಸಂಕಟ:** ದ್ವಿಚಕ್ರ ವಾಹನ ಸವಾರರು ತಮ್ಮ ವಾಹನದ ಸಮಗ್ರ ವಾಹನ ವಿಮೆ ಮಾಡಿಸಿದ್ದಲ್ಲಿ ಮಾತ್ರವೇ ಸ್ವಯಂ ಅಪಘಾತಕ್ಕೆ ವಿಮೆ ಕ್ಲೈಮ್ ಮಾಡಬಹುದು. ಥರ್ಡ್ ಪಾರ್ಟಿ ವಿಮೆ ಇದ್ದಲ್ಲಿ ಅದು ಸಿಗುವುದಿಲ್ಲ. ಸಮಗ್ರ ವಾಹನ ವಿಮೆಗೆ ಹಣ ಜಾಸ್ತಿಎಂದೇ ಬಹುತೇಕರು, ಥರ್ಡ್ ಪಾರ್ಟಿ ಇನ್ಶೂರೆನ್ಸ್ ಮಾಡಿಸಿಕೊಂಡಿರುತ್ತಾರೆ. ಇದರ ನಡುವೆ ಜಲ್ಲಿಕಲ್ಲಿನ ರಸ್ತೆಗಳಲ್ಲಿ ಸ್ಕಿಡ್ಡಾಗಿ ಬಿದ್ದು, ದೈಹಿಕವಾಗಿ ಹಾನಿಗೊಳಗಾಗುವುದಲ್ಲದೆ ಆರ್ಥಿಕವಾಗಿಯೂ ಸಂಕಷ್ಟ ಅನುಭವಿಸಬೇಕಾದ ಸಂದರ್ಭಗಳು ಸಹ ಸೃಷ್ಟಿಯಾಗುತ್ತಿದ್ದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸವಾರರು ಸಂಕಟ ಪಡುವಂತಾಗಿದೆ.

### ಸಾರ್ವಜನಿಕರು ಪ್ರಶ್ನಿಸದಿದ್ದರೆ ಯಾವ ಕಾರ್ಯವೂ ಆಗದು...!

"ಪೊಲೀಸರು, ಪತ್ರಿಕೆಯವರನ್ನು ಬಿಟ್ಟರೆ ಇನ್ಯಾರು ಮಾಡುತ್ತಿದ್ದಾರೆ... ರಸ್ತೆ ಗುಂಡಿ ಮುಚ್ಚುವುದರಿಂದ ಹಿಡಿದು ಕೆಲವೊಮ್ಮೆ ಕಸವನ್ನೂ ಗುಡಿಸಿದ್ದೇವೆ. ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಿ, ಜಲ್ಲಿಕಲ್ಲು ತೆರವುಗೊಳಿಸಿ ಮನವಿ ಮೇಲೆ ಮನವಿ ಮಾಡಿ ಸಾಕಾಗಿ ಕೊನೆಗೆ ಬೇರೆ ದಾರಿ ಇಲ್ಲದೆ ನಾವೇ ಗುಂಡಿ ಮುಚಲು ಮುಂದಾಗಿದ್ದೇವೆ. ಅವರದೊಂದು... ನಮ್ಮದೊಂದು ಸರ್ಕಾರ ಎಂಬಂತಾಗಿದೆ. ನಾವೂ, ರಸ್ತೆಯಲ್ಲಿ ಜಲ್ಲಿಕಲ್ಲು ಸುರಿದುಕೊಂಡು ಹೋಗುವ ಟಿಪ್ಪರ್, ಟ್ರ್ಯಾಕ್ಟರ್‌ಗಳು ಕಂಡು ಬಂದರೆ ತಡೆದು ಪ್ರಶ್ನಿಸಿ, ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ, ಮುಖ್ಯವಾಗಿ ಸಾರ್ವಜನಿಕರು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು.

– ಹಿರಿಯ ಪೊಲೀಸ್ ಅಧಿಕಾರಿ, ಸಂಚಾರಿ ವಿಭಾಗ, ಮೈಸೂರು

### ಎಲ್ಲದಕ್ಕೂ ಉತ್ತರ ಕೊಡಲಾಗದು...!



ಮೈಸೂರಿನ ರಸ್ತೆ ಅಭಿವೃದ್ಧಿ, ಕಸ ವಿಲೇವಾರಿ ಸೇರಿದಂತೆ ಇನ್ನಿತರೆ ಸಾಮಾಜಿಕ ಕಳಕಳಿಯುಳ್ಳ ವಿಚಾರಗಳಿಗೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನ ಪ್ರಶ್ನೆಗೆ ಮೈಸೂರು ನಗರಪಾಲಿಕೆ ಆಯುಕ್ತರಾದ ಶೇಖ್ ತನ್ವೀರ್ ಆಸಿಫ್ ಸಿಡಿಮಿಡಿಗೊಂಡಿದ್ದಾರೆ, ಎಲ್ಲದಕ್ಕೂ ಉತ್ತರ ಕೊಡಲಾಗದು. ನಮಗೂ ಟೈಂ ಲಿಮಿಟ್ ಎಂಬುದಿದೆ. ಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೇನೆ. ಆದರೆ, ಮೈಸೂರಿನ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಿಂದ ಬರುವ ಕರೆಗಳೇ ಜಾಸ್ತಿ ಎನ್ನುವ ಮೂಲಕ ಅಸಡ್ಡೆ ತೋರಿದ್ದಾರೆ. ಹಾಗಾದರೆ, ರಸ್ತೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಜಲ್ಲಿಕಲ್ಲುಗಳಿಂದ ಸ್ಕಿಡ್ಡಾಗಿ ಬೀಳುವ ದ್ವಿಚಕ್ರ ವಾಹನ ಸವಾರರ ಪ್ರಾಣಕ್ಕೆ ಕುತ್ತಾದರೆ ಜವಾಬ್ದಾರರು ಯಾರು... ಮಳೆಗಾಲವೆಂಬ ಅರಿವಿಲ್ಲದೆ ಅಭಿವೃದ್ಧಿ ಹೆಸರಿನಲ್ಲಿ ರಸ್ತೆಗಳನ್ನು ಅಗೆದು ಹಾಳು ಮಾಡಿದ್ದರಿಂದ ಆಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ಜವಾಬ್ದಾರಿ ಯಾರದು ಎಂಬುದಕ್ಕೆ ಪಾಲಿಕೆ ಆಯುಕ್ತರು ಉತ್ತರಿಸಬೇಕಿದೆ...!

# ಇಟ್ಟಿಗೆ ಫ್ಯಾಕ್ಟರಿಯಲ್ಲಿ 'ಜೀತ'ಕ್ಕಿದ್ದವರಿಗೆ ಮುಕ್ತಿ

## ಪುನರ್ವಸತಿ ಜೊತೆಗೆ ಪ್ರಮಾಣಪತ್ರ; ಪರಿಹಾರ



ಸಂತ್ರಸ್ತರಿಗೆ ಜೀತ ವಿಮುಕ್ತಿ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಮೈಸೂರು,ಜೂ.23(ಎಂಟಿವೈ)– ತಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಬೇವಿನಹಳ್ಳಿ ಗ್ರಾಮದ ಅನಧಿಕೃತವಾಗಿ ನಡೆಯುತ್ತಿದ್ದ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಜೀತಕ್ಕೊಳಪಡಿಸಿದ್ದ 18 ಮಂದಿಗೆ ತಾತ್ಕಾಲಿಕ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ, ಸಂತ್ರಸ್ತರಿಗೆ ತಲಾ 30 ಸಾವಿರ ರೂ. ಪರಿಹಾರದೊಂದಿಗೆ ಜೀತ ಪದ್ಧತಿ ವಿಮುಕ್ತಿ ಪ್ರಮಾಣ ಪತ್ರ ನೀಡಲಾಗಿದೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ ಆದ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಹಾಗೂ ಸದಸ್ಯ ಕಾರ್ಯದರ್ಶಿ ನಾಗರಾಜಪ್ಪ ಸಿದ್ದಪ್ಪ ಅಂಕಸದೊಡ್ಡಿ, ಮೈಸೂರು ಉಪ ವಿಭಾಗಾಧಿಕಾರಿ ಆಶಪ್ಪ, ತಿ.ನರಸೀಪುರ ತಹಶೀಲ್ದಾರ್ ಸುರೇಶ್ ಆಚಾರ್, ಸಂತ್ರಸ್ತರನ್ನು ಭೇಟಿ ಮಾಡಿ ಸಮಸ್ಯೆ ಆಲಿಸಿದ ಬಳಿಕ ಜೀತ ವಿಮುಕ್ತಿ ಪ್ರಮಾಣ ಪತ್ರ ವಿತರಿಸಿದರು. ಜಿಲ್ಲಾಡಳಿತದ ಕಾರ್ಪಸ್ ನಿಧಿಯಿಂದ ಪ್ರತಿಯೊಬ್ಬರಿಗೆ ತಲಾ 30 ಸಾವಿರ ರೂ. ತಕ್ಷಣದ ಪರಿಹಾರ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸೂಚನೆ ಮೇರೆಗೆ ನಡೆದ ದಾಳಿಯಲ್ಲಿ ತಿ.ನರಸೀಪುರ ತಾಲೂಕು ಆಡಳಿತವು ಮಡಿಲು, ಐಜೆಎಂ(ಇಂಟರ್ ನ್ಯಾಷನಲ್ ಜಸ್ಟೀಸ್ ಮಿಷನ್)ಸ್ವಯಂ ಸೇವಾ ಸಂಸ್ಥೆಗಳು ಭಾಗಿಯಾಗಿದ್ದವು. ಬೇವಿನಹಳ್ಳಿ ಗ್ರಾಮದಲ್ಲಿನ ಜಮೀನಿನಲ್ಲಿದ್ದ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಜೀತಕ್ಕಿದ್ದ ಬೇವಿನಹಳ್ಳಿಯ ಮುತ್ತಣ್ಣ, ಅವರ ಪತ್ನಿ ಜ್ಯೋತಿ, ಮುತ್ತಣ್ಣ ಅವರ 11 ಮತ್ತು 13 ವರ್ಷದ ಇಬ್ಬರು ಪುತ್ರರು, ಚೆನ್ನಮ್ಮ(50), ಆರ್ಮುಗಂ(22), ಗಣೇಶ್(25), ಗಣೇಶ್ ಅವರ ಪತ್ನಿ ರಾಜೇಶ್ವರಿ(22), ನಾಗಮ್ಮ(32), ಮಲ್ಲಿಕಾ(40), ಸುರೇಶ್(27), ಸುರೇಶ್ ಅವರ ಪತ್ನಿ ಪ್ರೇಮಾ(23), ಸತೀಶ್(26), ಸತೀಶ್ ಅವರ ಪತ್ನಿ ಲಕ್ಷ್ಮೀ(24), ಚಂದ್ರು(60), ಚಂದ್ರು ಅವರ ಪತ್ನಿ ಚೆನ್ನಮ್ಮ(52), ಅಮುದಾ(34), ವೇಲುವನಾದ(32), ಅವರನ್ನು ಸೋಮವಾರ ಬೆಳಗ್ಗೆ ರಕ್ಷಣೆ ಮಾಡಲಾಗಿತ್ತು.

**ಬಂಧಿತರು ನ್ಯಾಯಾಂಗ ಬಂಧನಕ್ಕೆ:** ಇಟ್ಟಿಗೆ ಫ್ಯಾಕ್ಟರಿಯ ಮಾಲೀಕರಾದ ಯತಿರಾಜ್, ಗಿರೀಶ್ ಮತ್ತು ಮಹದೇವ್ ವಿರುದ್ಧ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

"ಈ ವೇಳೆ ಮಾಲೀಕರಿಂದ ಹಲ್ಲೆಗೊಳಗಾಗಿದ್ದ ಮುತ್ತಣ್ಣ ಮತ್ತು ಜ್ಯೋತಿ ದಂಪತಿಗೆ ಬನ್ನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಎಲ್ಲಾ ಸಂತ್ರಸ್ತರ ಆರೋಗ್ಯ ತಪಾಸಣೆ ನಡೆಸಿದ ಬಳಿಕ ತಿ.ನರಸೀಪುರದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನಲ್ಲಿ ತಾತ್ಕಾಲಿಕವಾಗಿ ಪುನರ್ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ

- ಸುರೇಶ್ ಆಚಾರ್, ತಹಸೀಲ್ದಾರ್, ತಿ.ನರಸೀಪುರ

# ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಸಮುದಾಯ ಅಭಿವೃದ್ಧಿ ವಿಭಾಗದಿಂದ ಅನುದಾನ



ಕೋಟೆಹುಂಡಿ ಕಾರ್ಯಕ್ಷೇತ್ರದ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಸಮುದಾಯ ಅಭಿವೃದ್ಧಿ ವಿಭಾಗದ 2 ಲಕ್ಷ ರೂ. ಮಂಜೂರಾತಿ ಪತ್ರವನ್ನು ಹಸ್ತಾಂತರಿಸಲಾಯಿತು.

ಮೈಸೂರು,ಜೂ.23– ಮೈಸೂರು ತಾಲೂಕು, ಜೆ.ಪಿ.ನಗರ ವಲಯದ ಕೋಟೆಹುಂಡಿ ಕಾರ್ಯಕ್ಷೇತ್ರದ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ನಿರ್ವಾಣಕ್ಕೆ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷರಾಗಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ನೆರವು ನೀಡಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಸಮುದಾಯ ಅಭಿವೃದ್ಧಿ ವಿಭಾಗದ 2 ಲಕ್ಷ ರೂ. ಸಹಾಯಧನದ ಮಂಜೂರಾತಿ ಪತ್ರವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕ್ಷೇತ್ರ ಯೋಜನಾಧಿಕಾರಿ ಎ.ಜಿ.ಪ್ರವೀಣ್ ಅವರು ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡದ ಸಮಿತಿಯವರಿಗೆ ಹಸ್ತಾಂತರ ಮಾಡಿದರು.

ಈ ವೇಳೆ ಮಾತನಾಡಿದ ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಮಂಗಳಮ್ಮ, ವೀರೇಂದ್ರ ಹೆಗ್ಗಡೆಯವರು ಸಾವಿರಾರು ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಕ್ಕೆ ಹಾಗೂ ಹಲವಾರು ಸಮಾಜಮುಖಿ ಕಾರ್ಯಕ್ರಮಗಳಿಗೆ ಧನ ಸಹಾಯ ಮಾಡುತ್ತಿದ್ದಾರೆ. ಈ ಮೂಲಕ ಧರ್ಮಸ್ಥಳದಿಂದ ಧಾರ್ಮಿಕ ಕೇಂದ್ರಗಳನ್ನು ಉಳಿಸುವ ಕೆಲಸ ಆಗುತ್ತಿದೆ. ಸಮಾಜಕ್ಕಾಗಿ ಶ್ರಮಿಸುತ್ತಿರುವ ಪೂಜ್ಯ ರೊಂದಿಗೆ ನಿಂತು ನಾವೂ ಸಾಧ್ಯವಾದಷ್ಟು ಸತ್ಕಾರ್ಯಗಳನ್ನು ಮಾಡಬೇಕಿದೆ ಎಂದರು.

ಯೋಜನಾಧಿಕಾರಿ ಎ.ಜಿ.ಪ್ರವೀಣ್ ಮಾತನಾಡಿ, ಹೈನುಗಾರಿಕೆಯಿಂದ ಗ್ರಾಮದ ಹೆಚ್ಚಿನ ಕುಟುಂಬಗಳು ಆರ್ಥಿಕವಾಗಿ ಸದೃಢವಾಗಿದೆ. ಇದು ಸ್ವ–ಉದ್ಯೋಗಕ್ಕೂ ದಾರಿಯಾಗಿದೆ. ಸರ್ಕಾರ ಹಾಗೂ ಹಾಲು ಒಕ್ಕೂಟಗಳು ಹೈನುಗಾರಿಕೆಗೆ ಹೆಚ್ಚಿನ ನೆರವು ನೀಡುತ್ತಿರುವುದರಿಂದ ರೈತರಿಗೆ ಸಾಕಷ್ಟು ಅನುಕೂಲ ಅಗಿದೆ. ಹೈನುಗಾರಿಕೆಯಿಂದ ಆದಾಯದ ಜೊತೆಗೆ ಕೃಷಿಗೆ ಸಾವಯವ ಗೊಬ್ಬರವೂ ದೊರಕುತ್ತದೆ ಎಂದು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ನೆರವು ನೀಡುವುದರ ಜೊತೆಗೆ ಜನ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕವಾಗಿ ಅಭಿವೃದ್ಧಿ ಹೊಂದಲು ಸಹಕಾರ ನೀಡುತ್ತಿದ್ದಾರೆ. ಗ್ರಾಮದ ದೇವಸ್ಥಾನ ಜೀರ್ಣೋದ್ದಾರಕ್ಕೆ ಸಹಾಯಧನ, ಕೆರೆ ಹೂಳೆತ್ತುವುದು, ವಯೋವೃದ್ಧರಿಗೆ ಮಾಸಾಶನ ಹಾಗೂ ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯವೇತನ ಮುಂತಾದ ಸಮಾಜಮುಖಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ವಲಯದ ಮೇಲ್ವಿಚಾರಕರಾದ ಗಿರೀಶ್ ಕುಮಾರ್, ಸಮಿತಿಯ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಗುಲ್ಬರ್ಗಾ ಮಿಸ್ಟಿಕ್ಸ್ ಅಬ್ಬರಕ್ಕೆ ಶಿವಮೊಗ್ಗ ಯೋಧಾಸ್ ಧೂಳೀಪಟ



ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಲೋಚನ್ ಗೌಡ ಹಾಗೂ ಪ್ರಖರ್ ಚತುರ್ವೇದಿ

ಮೈಸೂರು, ಜೂ.23(ವಿವಿಹೆಚ್)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ತಂಡ ಕೆ.ಕ್ರಾಂತಿ ಕುಮಾರ್ (31 ರನ್, 22ಎ ಹಾಗೂ 8ಕ್ಕೆ2) ಅದ್ಭುತ ಆಲ್‌ರೌಂಡರ್ ಪ್ರದರ್ಶನದಿಂದ ಮಂಗಳವಾರ ಶಿವಮೊಗ್ಗ ಯೋಧಾಸ್ ವಿರುದ್ಧ 95 ರನ್‌ಗಳ ಭರ್ಜರಿ ಜಯ ಸಾಧಿಸಿ, ಟೂರ್ನಿಯಲ್ಲಿ ತನ್ನ ಮೊದಲ ಗೆಲುವು ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 7ನೇ ಲೀಗ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ 8 ವಿಕೆಟ್ ಕಳೆದುಕೊಂಡು 232 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ಇದಕ್ಕೆ ಉತ್ತರವಾಗಿ ಬ್ಯಾಟಿಂಗ್ ಮಾಡಿದ ಶಿವಮೊಗ್ಗ ಯೋಧಾಸ್, ಗೌತಮ್ ಮಿಶ್ರಾ (3/34) ಮತ್ತು ರೋನಿತ್ ಮೋರೆ (2/7) ಉತ್ತಮ ಬೌಲಿಂಗ್ ದಾಳಿಗೆ ತತ್ತರಿಸಿ, 137 ರನ್‌ಗಳಿಗೆ ಆಲೌಟ್ ಆಯಿತು.

ಮೊದಲು ಇನ್ನಿಂಗ್ಸ್ ಆರಂಭಿಸಿದ ಗುಲ್ಬರ್ಗಾ ಪರ ಲೋಚನ್ ಗೌಡ ಮತ್ತು ಪ್ರಖರ್ ಚತುರ್ವೇದಿ ಸ್ಫೋಟಕ ಆರಂಭ ನೀಡಿದರು. ಲೋಚನ್ ಗೌಡ ಕೇವಲ 21 ಎಸೆತಗಳಲ್ಲಿ 47 ರನ್ ಬಾರಿಸಿದರೆ, ಪ್ರಖರ್ ಚತುರ್ವೇದಿ 19 ಎಸೆತಗಳಲ್ಲಿ 45 ರನ್ ಸಿಡಿಸಿ ಶಿವಮೊಗ್ಗ ಬೌಲರ್‌ಗಳನ್ನು ಕಂಗೆಡಿಸಿದರು.

ನಂತರ ಬಂದ ಮ್ಯಾಕ್‌ನೀಲ್ ನೊರೊನ್ಹಾ (26) ಮತ್ತು ನಾಯಕ ಮನೀಶ್ ಪಾಂಡೆ (22) ತಂಡದ ಮೊತ್ತವನ್ನು ಮತ್ತಷ್ಟು ಬಲಪಡಿಸಿದರು. ಅಂತಿಮ ಹಂತದಲ್ಲಿ ಕೆ.ಕ್ರಾಂತಿ ಕುಮಾರ್ 31 ರನ್‌ಗಳ ಉಪಯುಕ್ತ ಕೊಡುಗೆ ನೀಡುವ ಮೂಲಕ ತಂಡವನ್ನು 232 ರನ್‌ಗಳ ಬೃಹತ್ ಮೊತ್ತಕ್ಕೆ ಕೊಂಡೊಯ್ದರು.

ಇತ್ತ ಶಿವಮೊಗ್ಗ ಪರ ಎಂ.ಜಿ.ನವೀನ್ ಹಾಗೂ ಭೀಮ್ ರಾವ್ ನವಲೆ ತಲಾ 2 ವಿಕೆಟ್, ಶ್ರೀಶಾ ಆಚಾರ್, ಅಭಿಲಾಷ್ ಶೆಟ್ಟಿ, ಯಶೋವರ್ಧನ್ ಹಾಗೂ ಯಶ್‌ರಾಜ್ ಪುಂಜಾ ಒಂದೊಂದು ವಿಕೆಟ್ ಕಬಳಿಸಿದರು.

ಬೃಹತ್ ಗುರಿ ಬೆನ್ನತ್ತಿದ ಶಿವಮೊಗ್ಗ ಯೋಧಾಸ್ ಆರಂಭದಲ್ಲಿ ಲುವ್ನಿತ್ ಸಿಸೋಡಿಯಾ ಅವರ ವೇಗದ ಆಟದಿಂದ ಭರವಸೆ ಮೂಡಿತ್ತು. ಅವರು 14 ಎಸೆತಗಳಲ್ಲಿ 30 ರನ್ ಕಲೆಹಾಕಿ ನಿರ್ಗಮಿಸಿದರು. ಇವರ ಬಳಿಕ ಬಂದ ಬ್ಯಾಟರ್‌ಗಳು ಗುಲ್ಬರ್ಗಾ ಬೌಲಿಂಗ್ ದಾಳಿಗೆ ತತ್ತರಿಸಿದರು.

ಹರ್ಷಿಲ್ ಧರ್ಮಾನಿ 23(17), ನಾಯಕ ಸ್ಮರಣ್ ರವಿಚಂದ್ರನ್ 23(23), ಯಶೋವರ್ಧನ್ ಪರಣ್ತಾಪ್ 20(15), ಭೀಮ್ ರಾವ್ ನವಲೆ 19(22) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಒಂದಂಕಿ ಮೊತ್ತಕ್ಕೆ ಸುಸ್ತಾದರು. ಅಂತಿಮವಾಗಿ ಶಿವಮೊಗ್ಗ ತಂಡ 137 ರನ್‌ಗಳಿಗೆ ಸೀಮಿತವಾಗಿ. ಈ ಸೋಲಿನೊಂದಿಗೆ ಶಿವಮೊಗ್ಗ ಯೋಧಾಸ್ ತಂಡ ಮೂರು ಪಂದ್ಯಗಳಲ್ಲಿ ಎರಡನೇ ಸೋಲು ಕಂಡರೆ, ಗುಲ್ಬರ್ಗಾ ಮಿಸ್ಟಿಕ್ಸ್ ಟೂರ್ನಿಯಲ್ಲಿ ಮೊದಲ ಗೆಲುವಿನ ಸಂಭ್ರಮ ಆಚರಿಸಿತು.

ಮಿಸ್ಟಿಕ್ಸ್ ಪರ ಗೌತಮ್ ಮಿಶ್ರಾ 3 ವಿಕೆಟ್, ಕ್ರಾಂತಿ ಕುಮಾರ್, ರೋನಿತ್ ಮೋರೆ ಹಾಗೂ ಸುಹಾಸ್ ಪುರುಷೋತ್ತಮ್ ತಲಾ 2 ವಿಕೆಟ್ ಪಡೆದು ಮಿಂಚಿದರು.

# ಗೆಲುವಿನ ಖಾತೆ ತೆರೆದ ಮೈಸೂರು ವಾರಿಯರ್ಸ್



ವಾರಿಯರ್ಸ್ ಪರ ಸೀಸನ್‌ನ ಚೊಚ್ಚಲ ಶತಕ ಸಿಡಿಸಿದ ಎಲ್.ಆರ್.ಚೇತನ್ ಸಂಭ್ರಮ.

ಮೈಸೂರು, ಜೂ.23(ವಿವಿಹೆಚ್)– ಎಲ್.ಆರ್.ಚೇತನ್ ಅಮೋಘ ಶತಕ ಹಾಗೂ ಅರ್ಬಿಂದ್ ಕುಮಾರ್ ರಾಯ್ ಅವರ ಕರಾರುವಕ್ಕಾದ ಬೌಲಿಂಗ್ ದಾಳಿಗೆ ತತ್ತರಿಸಿದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಅತಿಥೇಯ ಮೈಸೂರು ವಾರಿಯರ್ಸ್ ವಿರುದ್ಧ 72 ರನ್‌ಗಳ ಅಂತರದಿಂದ ಪರಾಜಯಗೊಂಡಿತು.

ಈ ಗೆಲುವಿನೊಂದಿಗೆ ವಾರಿಯರ್ಸ್ ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿದರೆ, ಬ್ಲಾಸ್ಟರ್ಸ್ ಮೊದಲ ಸೋಲಿನ ಕಹಿ ಅನುಭವಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ 8ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ವಾರಿಯರ್ಸ್ ಎಲ್.ಆರ್.ಚೇತನ್ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 203 ರನ್ ಕಲೆಹಾಕಿತು.

ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಬೆಂಗಳೂರು 16 ಓವರ್‌ಗಳಲ್ಲಿ ಸರ್ವಪತನ ಕಂಡು 131 ರನ್ ಗಳಿಸಲಷ್ಟೇ ಶಕ್ತವಾಯಿತು.

ಮೊದಲು ಬ್ಯಾಟಿಂಗ್ ಮಾಡಲು ಮುಂದಾದ ವಾರಿಯರ್ಸ್ ಪರವಾಗಿ ಆರಂಭಿಕ ಆಟಗಾರ ಎಲ್.ಆರ್.ಚೇತನ್ ಅಬ್ಬರಿಸಿದರು. ಆರಂಭದಿಂದಲೇ ಆಕ್ರಮಣಕಾರಿ ಹೊಡೆತಗಳ ಮೂಲಕ ಬೆಂಗಳೂರು ತಂಡದ ಬೌಲರ್‌ಗಳನ್ನು ದಂಡಿಸಿದರು. 60 ಎಸೆತಗಳನ್ನು ಎದುರಿಸಿದ ಅವರು 9 ಬೌಂಡರಿ, 7 ಸಿಕ್ಸರ್ ಸಹಿತ 106 ರನ್ ಕಲೆಹಾಕಿ, ಪ್ರಸಕ್ತ ಟೂರ್ನಿಯಲ್ಲಿ ವೈಯಕ್ತಿಕ ಮೊದಲ ಶತಕವನ್ನೂ ದಾಖಲಿಸಿದರು.

ಇವರಿಗೆ ಸಾಥ್ ನೀಡಿದ ಕೆ.ಪಿ. ಕಾರ್ತಿಕೇಯ 41 ಎಸೆತಗಳಲ್ಲಿ 65ರನ್ ಹೊಡೆದರು. ಈ ಜೋಡಿ ಮೂರನೇ ವಿಕೆಟ್‌ಗೆ 85 ಎಸೆತಗಳಲ್ಲಿ ಬರೋಬ್ಬರಿ 169 ರನ್ ಪೇರಿಸಿ, ತಂಡಕ್ಕೆ ಆಸರೆಯಾಯಿತು. ಉಳಿದಂತೆ ಎಸ್.ಯು. ಕಾರ್ತಿಕ್ 1(3), ವಿಶಾಲ್ ಓನತ್ 3(5), ರಿತೇಶ್ ಭಟ್ಕಳ್ ಗೋಲ್ಡನ್ ಡಕ್, ಮಾಧವ್ ಬಜಾಜ್ 5(2) ಹಾಗೂ ಮನೋಜ್ ಭಂಡಗೆ ಅಜೇಯ 12(10) ರನ್ ಬಾರಿಸಿದರು. ಬೆಂಗಳೂರು ಪರ ಶುಭಾಂಗ್ ಹೆಗ್ಡೆ, ಕಾವೇರಪ್ಪ, ಸಮಿತ್ ದ್ರಾವಿಡ್, ಶ್ರೀವತ್ಸ ಆಚಾರ್ಯ ತಲಾ ಒಂದೊಂದು ವಿಕೆಟ್ ಪಡೆದರು.

ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಬೆಂಗಳೂರು ತಂಡಕ್ಕೆ ಅರ್ಬಿಂದ್ ಕುಮಾರ್ ರಾಯ್ ಕಾಡಿದರು. ತಮ್ಮ ಕೋಟಾದ 4 ಓವರ್ ಬೌಲಿಂಗ್ ಮಾಡಿದ ಅವರು ಕೇವಲ 17 ರನ್ ಬಿಟ್ಟುಕೊಟ್ಟು ಪ್ರಮುಖ ನಾಲ್ಕು ವಿಕೆಟ್ ಪಡೆದು ಮಿಂಚಿದರು. ಇವರಿಗೆ ಸಾಥ್ ನೀಡಿದ ಮಾಧವ್ ಬಜಾಜ್ 2 ಓವರ್‌ಗಳಲ್ಲಿ 23 ರನ್‌ಗೆ 2 ವಿಕೆಟ್ ಪಡೆದು, ಬೆಂಗಳೂರು ತಂಡಕ್ಕೆ ಕಂಟಕವಾದರು.

ಇತ್ತ ಆಲ್‌ರೌಂಡರ್ ಪ್ರವೀಣ್ ದುಬೆ 36(22ಎ, 3ಬೌ, 1ಸಿ), ಸಮಿತ್ ದ್ರಾವಿಡ್ 30(27) ಎಸ್.ಶಿವರಾಜ್ 18(11) ಹಾಗೂ ಕೆ.ಶ್ರೀಜಿತ್ 10(12) ಹೊರತುಪಡಿಸಿ ಉಳಿದವರೆಲ್ಲಾ ಒಂದಂಕಿ ಮೊತ್ತಕ್ಕೆ ಕುಸಿದರು. ಭುವನ್ ರಾಜು (ಗೋಲ್ಡನ್ ಡಕ್), ರೋಹನ್ ಪಾಟೀಲ್ 3(3), ನಾಯಕ ಶುಭಾಂಗ್ ಹೆಗ್ಡೆ 5(5), ವಾಹಿದ್ ಫೈಜಾನ್ ಖಾನ್ 8(7), ರೋಹನ್ ರಾಜು 2(3), ವಿದ್ವತ್ ಕಾವೇರಪ್ಪ ಡಕ್‌ಔಟ್ ಆಗುವ ಮೂಲಕ ಪೆವಿಲಿಯ್ ಪರೇಡ್ ನಡೆಸಿದರು.

ವಾರಿಯರ್ಸ್ ಪರ ನಾಯಕ ವಿಜಯ್ ಕುಮಾರ್ ವೈಶಾಖ್, ಮೋನಿಶ್ ರೆಡ್ಡಿ ಹಾಗೂ ಮನೋಜ್ ಭಂಡಗೆ ತಲಾ ಒಂದೊಂದು ವಿಕೆಟ್ ಕಬಳಿಸಿ ಗಮನ ಸೆಳೆದರು.

ಬ್ಯಾಟಿಂಗ್ ವೈಫಲ್ಯದಿಂದ ಭಾರೀ ಅಂತರದ ಸೋಲು ಕಂಡ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಟೂರ್ನಿಯಲ್ಲಿ ಮೊದಲ ಸೋಲು ಕಂಡಿತು. ಆಗಿದ್ದರೂ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲೇ ಉಳಿಯಿತು. ಇತ್ತ ತವರಿನಂಗಳದಲ್ಲಿ ಮೊದಲ ಗೆಲುವು ದಾಖಲಿಸಿದ ಮೈಸೂರು ವಾರಿಯರ್ಸ್ ಮುಂದಿನ ಪಂದ್ಯಗಳಲ್ಲಿ ಪುಟಿದೇಳುವ ವಿಶ್ವಾಸವನ್ನು ಇಮ್ಮಡಿಗೊಳಿಸಿಕೊಂಡಿತು.

ಮೈಸೂರು ಮಿತ್ರ ಬುಧವಾರ 24 ಜೂನ್ 2026

# ವರುಣ ಕ್ಷೇತ್ರದಲ್ಲಿದ್ದಾರೆ ಅಕ್ರಮ ಮತದಾರರು

## ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ವೇಳೆ ಕ್ರಮ ಕೈಗೊಳ್ಳಿ

ತಿ.ನರಸೀಪುರ, ಜೂ.23– ವರುಣ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮ ಮತ್ತು ವಲಸಿಗ ಮತದಾರರು ಹೆಚ್ಚಾಗಿದ್ದು, ಅಂತಹವರ ಹೆಸರುಗಳನ್ನು ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ವೇಳೆ ತೆಗೆದು ಹಾಕಿ, ಅರ್ಹ ಮತದಾರರನ್ನು ಉಳಿಸಬೇಕು ಎಂದು ಜಿ.ಪಂ ಮಾಜಿ ಸದಸ್ಯ ಗುರುಸ್ವಾಮಿ ಆಗ್ರಹಿಸಿದರು.



ವರುಣ ವಿಧಾನಸಭಾ ಕ್ಷೇತ್ರದ ಹದಿನಾರು ಬಿಳಿಕೆರೆ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಿದರು

ವರುಣ ವಿಧಾನಸಭಾ ಕ್ಷೇತ್ರದ ಹದಿನಾರು ಬಿಳಿಕೆರೆ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಿ ನಂತರ ಮಾತನಾಡಿದರು.

ಕೆಲವರು ಹೆಸರಿಗೆ ಮಾತ್ರ ಊರಿನಲ್ಲಿದ್ದು, ಬೇರೆ ಕಡೆಯಿಂದ ಬಂದು ನೆಲೆಸಿದವರಾಗಿದ್ದಾರೆ. ಅವರುಗಳು ಇಲ್ಲೂ ಹೆಸರನ್ನು ಹೊಂದಿರುತ್ತಾರೆ. ತಮ್ಮ ಸ್ವಂತ ಊರು ಗಳಲ್ಲಿಯೂ ಹೆಸರುಗಳನ್ನು ಹೊಂದಿದ್ದು, ಅಂತಹವರನ್ನು ಗುರುತಿಸಿ, ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ವೇಳೆ ಕೈ ಬಿಡುವಂತೆ ನೋಡಿಕೊಳ್ಳಬೇಕು ಎಂದು ಬಿಎಲ್‌ಎಗಳಿಗೆ ಕರೆ ನೀಡಿದರು.

ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹಾದೇವಯ್ಯ ಮಾತನಾಡಿ, ಪಕ್ಷದ ವತಿಯಿಂದ ನೇಮಕವಾಗಿರುವ ಬಿಎಲ್‌ಎ–2ಗಳು ಸರ್ಕಾರದಿಂದ ನೇಮಕವಾಗಿರುವ ಬಿಎಲ್‌ಎಗಳ ಜೊತೆ ಸಮನ್ವಯ ಸಾಧಿಸಿ ಮತದಾರರ ಪಟ್ಟಿಯಲ್ಲಿ ಪ್ರಾಮಾಣಿಕವಾಗಿ ಉಳಿಯಬೇಕಾದ ಹೆಸರುಗಳನ್ನು ಉಳಿಸಿ ಅಕ್ರಮವಾಗಿ ಉಳಿದಿರುವ ಹೆಸರುಗಳನ್ನು ತೆಗೆದು ಹಾಕುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಕರೆ ನೀಡಿದರು.

ಈ ಬಾರಿ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಯಿಂದ ವಿಧಾನಸಭಾ ಚುನಾವಣೆವರೆಗೂ ನಮ್ಮ ಪಕ್ಷದ ಅಭ್ಯರ್ಥಿಗಳು ಗೆಲ್ಲಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಸಂಘಟಿತರಾಗೋಣ ಮತ್ತು ಯಾವುದೇ ಲೋಪವಿದ್ದರೂ ಅದನ್ನೆಲ್ಲ ಸರಿಪಡಿಸಿಕೊಂಡು ಪಕ್ಷವನ್ನು ಬೆಳೆಸಿ ಈ ಬಾರಿ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಬಾವುಟ ಹಾರಿಸಲೇಬೇಕು ಎಂದು ಪಣತೊಡೋಣ ಎಂದರು

ಜಿಪಂ ಮಾಜಿ ಅಧ್ಯಕ್ಷ ಕಾಪು ಸಿದ್ದ ವೀರಪ್ಪ, ಸದಸ್ಯ ಬಿ.ಎನ್.ಸದಾನಂದ, ಜಿಲ್ಲಾ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಪ್ರಧಾನ ಕಾರ್ಯದರ್ಶಿ ವೆಂಕಟರಮಣಶೆಟ್ಟಿ, ನರಸಿಂಹಮೂರ್ತಿ, ಚಂದ್ರು ಪುಟ್ಟೇಗೌಡ ಹುಂಡಿ ಮಹೇಶ್, ಆಲಗೂಡು ಪ್ರಕಾಶ್, ಸುತ್ತೂರು ಚಿಕ್ಕ ಮಾದಪ್ಪ, ಶರತ್ ಪುಟ್ಟಬುದ್ಧಿ, ಕಾರ್ಯ ರಾಜೇಂದ್ರ, ನಂಜುಂಡಸ್ವಾಮಿ, ಕಿ ರಗಸೂರು ಮಹದೇವಸ್ವಾಮಿ, ಮಹದೇವಪ್ಪ, ಗಿರೀಶ್, ತಗಡೂರು ಮಂಜು, ರೂಪ, ಲಕ್ಷ್ಮಿ, ಪುಷ್ಪಲತಾ ಕನ್ನಡತಿ, ರಾಜೇಶ್ವರಿ, ಮತ್ತಿತರರು ಇದ್ದರು.

# ಜೂ.27, ಕೆ.ಆರ್.ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

## ಸಕಲ ಸಿದ್ದತೆ ಕೈಗೊಳ್ಳಲು ಅಧಿಕಾರಿಗಳಿಗೆ ಶಾಸಕರ ಸೂಚನೆ

**ಕೆಆರ್.ನಗರ:** ಈ ಬಾರಿ ಅದ್ದೂರಿಯಾಗಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಅರ್ಥಪೂರ್ಣವಾಗಿ ಜೂ.27ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ತಾಲೂಕು ಆಡಳಿತ ಸೌದದ ಆವರಣದಲ್ಲಿ ಆಚರಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕು ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ–ಸಂಸ್ಥೆಗಳ ಮುಖ್ಯಸ್ಥರು ಹಾಗೂ ಒಕ್ಕಲಿಗ ಸಮುದಾಯದ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಜೂ.27ರಂದು ರಾಜ್ಯದಾದ್ಯಂತ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸಲಾಗುತ್ತಿದೆ. ಅಂದೇ ಪಟ್ಟಣದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆಗೆ ಸಕಲ ಸಿದ್ಧತೆಗಳನ್ನು ತಾಲೂಕು ಆಡಳಿತ ವ್ಯವಸ್ಥೆ ಮಾಡಲಿದೆ. ಹಾಗಾಗಿ ಕಾರ್ಯಕ್ರಮದ ಯಶಸ್ವಿಗೆ ಎಲ್ಲ ಇಲಾಖೆ ಅಧಿಕಾರಿಗಳು ಮತ್ತು ನೌಕರರು ಸಹಕಾರ ನೀಡಬೇಕು. ನಿಗದಿತ ಸಮಯದಲ್ಲಿ ಹಾಜರಿದ್ದು, ಮೆರವಣಿಗೆ ಮತ್ತು ವೇದಿಕೆ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ತಿಳಿಸಿದರು.



ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಸರ್ವಾಲಂಕೃತ ಬೆಳ್ಳಿ ರಥದಲ್ಲಿ ನಾಡಪ್ರಭು ಕೆಂಪೇಗೌಡ ಭಾವಚಿತ್ರವನ್ನು ಮಂಗಳ ವಾದ್ಯ, ಜಾನಪದ ಕಲಾತಂಡಗಳ ಕಲಾ ಪ್ರದರ್ಶನ ಹಾಗೂ ಪೂರ್ಣಕುಂಭದೊಂದಿಗೆ ಮೆರವಣಿಗೆ ನಡೆಸಲಾಗುವುದು ಎಂದರಲ್ಲದೆ ಮೆರವಣಿಗೆಯನ್ನು ಕಾಲೇಜು ಆವರಣದಿಂದ ಗರುಡಗಂಭ ವೃತ್ತ ಮೂಲಕ ಸಾಗಿ ಹಾಸನ–ಮೈಸೂರು ರಸ್ತೆ ಮಾರ್ಗವಾಗಿ ಪುರಸಭೆ ವೃತ್ತದ ಮೂಲಕ ತಾಲೂಕು ಆಡಳಿತ ಸೌದದ ಆವರಣಕ್ಕೆ ಆಗಮಿಸಲಿದೆ ಎಂದು ತಿಳಿಸಿದರು. ಮೆರವಣಿಗೆ ಬರುವ ರಸ್ತೆಯಲ್ಲಿ ಪುರಸಭೆ ವತಿಯಿಂದ ತಳಿರು ತೋರಣಗಳಿಂದ ಶೃಂಗಾರಗೊಳಿಸ ಬೇಕು ಎಂದು ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ರಮೇಶ್ ಅವರಿಗೆ ಸೂಚಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡರ ಬಗ್ಗೆ ಉತ್ತಮ ವಾಗ್ಮಿಗಳಿಂದ ಪ್ರಧಾನ ಭಾಷಣಕಾರರು ಮಾತನಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಕೃಷಿ, ಜಾನಪದ, ಆರೋಗ್ಯ, ಶಿಕ್ಷಣ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪ್ರಮುಖರನ್ನು ತಾಲೂಕು ಮಟ್ಟದ ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ತಾಲೂಕಿನ ಎಲ್ಲ ಇಲಾಖೆಯ ಅಧಿಕಾರಿಗಳು ಮತ್ತು ನೌಕರ ವರ್ಗ ಸೇರಿದಂತೆ ನಾಗರಿಕ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಸಮುದಾಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಗುವುದು. ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಎಂದು ಮನವಿ ಮಾಡಿದರು.

ತಹಸೀಲ್ದಾರ್‌ಗಳಾದ ಜಿ.ಸುರೇಂದ್ರಮೂರ್ತಿ, ರುಕೀಯ ಬೇಗಂ, ತಾ.ಪಂ.ಇಒ ಗಳಾದ ಕುಲದೀಪ್, ಎ.ಎನ್.ರವಿ, ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್, ಬಿಇಒ ಆರ್.ಕೃಷ್ಣಪ್ಪ, ಸಿಡಿಪಿಒ ಅಣ್ಣಯ್ಯ, ಸಾಮಾಜಿಕ ವಲಯ ಅರಣ್ಯಾಧಿಕಾರಿ ಹರಿಪ್ರಸಾದ್, ಕೃಷಿ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್, ಪುರಸಭೆ ಮುಖ್ಯಾಧಿಕಾರಿ ಜಿ.ಎಸ್.ರಮೇಶ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡಮಹೇಶ್, ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯ್ ಶಂಕರ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ತಾಲೂಕು ಕಾಂಗ್ರೆಸ್ ವಕ್ತಾರ ಜಾಬೀರ್, ಸಾಲಿಗ್ರಾಮ ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಭಾಕರ್, ಸಾಲಿಗ್ರಾಮ ಎಸ್.ಸಿ. ಘಟಕದ ಅಧ್ಯಕ್ಷ ಕಂಠಿಕುಮಾರ್, ಸರ್ಕಾರ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಿಡಿಸಿ ಸದಸ್ಯ ವೈ.ಎಸ್.ಜಯಂತ್ ಇದ್ದರು

# ಚಾಮನಹಳ್ಳಿಯಲ್ಲಿ ಶ್ರೀ ಸಿದ್ದಪ್ಪಾಜಿ ದೇವಾಲಯದ ನೂತನ ವಿಮಾನ ಗೋಪುರ, ಕಳಸ ಪ್ರತಿಷ್ಠಾಪನೆ



ಮಹಾಗಣಪತಿಹೋಮ, ವಾಸ್ತುಹೋಮ, ಅಷ್ಟದಿಕ್ಪಾಲಕ ಹೋಮವನ್ನು ಹಮ್ಮಿಕೊಳ್ಳಲಾಗಿತ್ತು.

**ಬನ್ನೂರು:** ಪಟ್ಟಣದ ಸಮೀಪದ ಚಾಮನಹಳ್ಳಿ ಗ್ರಾಮದಲ್ಲಿನ ಶ್ರೀ ಸಿದ್ದಪ್ಪಾಜಿ ಪುಣ್ಯಕ್ಷೇತ್ರ ದೇವಾಲಯದಲ್ಲಿ ನೂತನ ವಿಮಾನ ಗೋಪುರ ಮತ್ತು ಕಳಸ ಪ್ರತಿಷ್ಠಾಪನೆ ಮತ್ತು ಬಸವಪ್ಪನವರ ಮಣಿಧಾರಣೆ ಕಾರ್ಯಕ್ರಮ ನಡೆಯಿತು.

ದೇವಾಲಯವನ್ನು ತಳಿರು ತೋರಣದಿಂದ ಅಲಂಕಾರ ಮಾಡಿ, ಪ್ರಾತಃ ಕಾಲದಲ್ಲಿ ಅರ್ಚಕ ಹಿತೇಶ್ ಸಿದ್ದಲಿಂಗರಾಜ್ ಅರಸ್ ನೇತೃತ್ವದಲ್ಲಿ ಗಣಪತಿ ಪೂಜೆ, ಪುಣ್ಯಾಹಾವಾಚನ, ನವಗ್ರಹ ಹೋಮ, ಕಳಸ ಪ್ರತಿಷ್ಠಾಪನೆ, ವಾಸ್ತು ರಾಕ್ಷೋಘ್ನ ಹೋಮ, ಮೃತ್ಯುಂಜಯ ಹೋಮ, ಅಷ್ಟದಿಕ್ಪಾಲಕ ಹೋಮ, ಬಲಿಪ್ರಧಾನ, ಪ್ರತಿಷ್ಠಾಂಗ ಹೋಮ, ದುರ್ಗಾಹೋಮ, ಪೂರ್ಣಾಹುತಿ, ಕಳಸ ಪ್ರತಿಷ್ಠಾಪನೆ, ಪಂಚಾಮೃತ ಅಭಿಷೇಕ, ಕುಂಭಾಭಿಷೇಕ ನಡೆಯಿತು.

ವಿಮಾನ ಗೋಪುರ ಪ್ರತಿಷ್ಠಾಪನೆ ಅಂಗವಾಗಿ ಆದಿಹೊನ್ನನಾಯಕನಹಳ್ಳಿ ಮಂಟೇಸ್ವಾಮಿ ಬಸವ, ದೇಶವಳ್ಳಿ ಸಿದ್ದಪ್ಪಾಜಿ ಬಸವ, ಮಂಚೇಗೌಡನಕೊಪ್ಪಲು ಸಿದ್ದಪ್ಪಾಜಿ ಕಂಡಾಯ, ಚನ್ನಪಟ್ಟಣ ಸಿದ್ದಪ್ಪಾಜಿ ಕಂಡಾಯ ದೇವಾಲಯಕ್ಕೆ ಆಗಮಿಸಿ, ಹೂ ಹೊಂಬಾಳೆ ಪೂಜೆ, ಮಾರಮ್ಮ ತಾಯಿ ಪೂಜೆ ನಡೆದು ಬಸವನಿಗೆ ಮಣಿದಾರಣೆ ನಡೆಸಲಾಯಿತು. ನಂತರ ಸಿದ್ದಿನಾಮ ಯೋಗದಲ್ಲಿ ವಿಮಾನ ಗೋಪುರ ಪ್ರತಿಷ್ಠಾಪನೆ ನಡೆಯಿತು.

# ನಾಲ್ವಡಿ ಜನಪರ ಅಭಿವೃದ್ಧಿ ಕೆಲಸ ಕಾರ್ಯಗಳಿಂದ ಮೈಸೂರು ಸಂಸ್ಥಾನದ ಹೆಸರು ಚಿರಸ್ಥಾಯಿ

**ನಂಜನಗೂಡು:** ಭಾರತೀಯ ಪರಂಪರೆಯಲ್ಲಿ ಮೈಸೂರು ಸಂಸ್ಥಾನದ ಹೆಸರು ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿರಲು ನಾಲ್ವಡಿ ಅರಸರ ಆಳ್ವಿಕೆಯಲ್ಲಿ ಕೈಗೊಂಡ ಜನಪರ ಅಭಿವೃದ್ಧಿ ಕೆಲಸ ಕಾರ್ಯಗಳು ನೆರವಾಗಿದೆ ಎಂದು ಮೈಸೂರು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಹೇಳಿದರು.

ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಛಲವಾದಿ ಮಹಾಸಭಾದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯ ಅಂಗವಾಗಿ ಆಯೋಜಿಸಿದ್ದ ನಾಲ್ವಡಿ ಸಾಧನೆಗಳ ಸ್ಮರಣೆ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಶೈಕ್ಷಣಿಕ ವ್ಯಾಸಂಗದ ಅವಧಿಯಲ್ಲಿ ಶಿಸ್ತಿನ ಜೀವನ ರೂಢಿಸಿಕೊಳ್ಳುವುದರಿಂದ ಸಾಧನೆಗೆ ಸಹಕಾರಿಯಾಗಲಿದೆ. ಬೇರೆಯವರಿಗೋಸ್ಕರ ಮಾಡುವ ಕೆಲಸವೇ ಅತ್ಯಂತ ತೃಪ್ತಿದಾಯಕ ಕಾರ್ಯವಾಗಿದ್ದು ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಆಸೆ ಆಕಾಂಕ್ಷೆಗಳಿದ್ದರೂ ತಮ್ಮ ಕೌಟುಂಬಿಕ ಕಾಳಜಿಯೊಂದಿಗೆ ಸರ್ವರ ಒಳಿತಿಗಾಗಿ ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕಿದೆ. ಇನ್ನು ದಕ್ಷಿಣ ಕಾಶಿ ಪ್ರಸಿದ್ಧಿಯ ನಂಜನಗೂಡು ಐತಿಹಾಸಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿದ್ದು ಉತ್ತರದ ಗಂಗೆ ಮಾದರಿಯಲ್ಲಿ ದಕ್ಷಿಣದ ಕಪಿಲಾ ನದಿಯಲ್ಲಿ ಜನರು ಪುಣ್ಯಸ್ನಾನ ಮಾಡಿ ಕಾಶಿ ವಿಶ್ವನಾಥನ ಪ್ರತೀಕವಾಗಿರುವ ಶ್ರೀ ಕಂಠೇಶ್ವರಸ್ವಾಮಿ ದರ್ಶನ ಪಡೆದುಕೊಳ್ಳುತ್ತಾರೆ ಹೀಗಾಗಿ ನಂಜನಗೂಡಿನ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಶ್ರಮಿಸೋಣ ಎಂದು ಹೇಳಿದರು.




ನಂಜನಗೂಡು ನಗರದ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ಆವರಣದಲ್ಲಿ ಛಲವಾದಿ ಮಹಾಸಭಾದಿಂದ ಆಯೋಜಿಸಿದ್ದ ನಾಲ್ವಡಿ ಸಾಧನೆಗಳ ಸ್ಮರಣೆ ವಿಚಾರ ಸಂಕಿರಣದಲ್ಲಿ ಸ್ಪರ್ಧೆಯ ವಿಜೇತರಿಗೆ ಸಂಸದ ಯದುವೀರ್ ಒಡೆಯರ್ ಬಹುಮಾನ ವಿತರಿಸಿದರು.

ಇತಿಹಾಸ ಸಂಶೋಧಕ ಅರೇನಹಳ್ಳಿ ಧರ್ಮೇಂದ್ರ ಕುಮಾರ್ ಮಾತನಾಡಿ ಮೈಸೂರು ಭವ್ಯವಾದ ನಗರವಾಗಿ ನಿರ್ಮಾಣವಾಗಲು ಮೈಸೂರು ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿಯ ಆಡಳಿತ ನೆರವಾಗಿದ್ದು ತಮ್ಮ ಆಡಳಿತಾವಧಿಯಲ್ಲಿ ನೂರಾರು ಜನೋಪಯೋಗಿ ಯೋಜನೆಗಳನ್ನು ಜಾರಿಗೊಳಿಸಿದ ನಾಲ್ವಡಿ ಅರಸರು ಸದಾಕಾಲಕ್ಕೂ ಜನಮಾನಸದಲ್ಲಿ ಉಳಿಯಲಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಅಪರ ಪೊಲೀಸ್ ಅಧೀಕ್ಷಕ ಮಲ್ಲೀಕ್, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಮಹದೇವಯ್ಯ, ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಅಭಿನಾಗಭೂಷಣ್, ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ವಿದ್ಯಾಸಾಗರ್, ಜನ ಸಂಗ್ರಾಮ ಪರಿಷತ್ ಗೌರವಾಧ್ಯಕ್ಷ ನಗರ್ಲೆ ವಿಜಯ್ ಕುಮಾರ್, ದಸಂಸ ಸಂಚಾಲಕ ಶಂಕರಪುರ ಸುರೇಶ್, ಪ್ರತಿಧ್ವನಿ ವೇದಿಕೆ ಜಿಲ್ಲಾಧ್ಯಕ್ಷ ತ್ರಿನೇಶ್, ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷಉಮೇಶ್ ಮತ್ತಿತರರಿದ್ದರು.

## ತೋಟಗಾರಿಕೆ ಇಲಾಖೆಯಿಂದ ಅರ್ಜಿ ಆಹ್ವಾನ

**ನಂಜನಗೂಡು:** ತೋಟಗಾರಿಕೆ ಇಲಾಖೆ ವತಿಯಿಂದ 2026–27ನೇ ಸಾಲಿನ ವಿವಿಧ ಯೋಜನೆಗಳಿಗೆ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸಿ.ಚಂದ್ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಎಣ್ಣೆತಾಳೆ ಅಭಿಯಾನ ಯೋಜನೆಯಡಿ ಹೊಸದಾಗಿ ಪ್ರದೇಶ ವಿಸ್ತರಣೆ, ನಿರ್ವಹಣೆ ಮತ್ತು ಅಂತರ ಬೆಳೆ ಬೆಳೆಯಲು ಸಹಾಯಧನ ನೀಡಲಾಗುವುದು, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ಲಾಸ್ಟಿಕ್ ಹೊದಿಕೆ, ಅಂಗಾಂಶ ಬಾಳೆ, ಕಂದು ಬಾಳೆ, ತರಕಾರಿ ಬೆಳೆ ಬೆಳೆಯಲು ಸಹಾಯಧನ ನೀಡಲಾಗುವುದು, ಜೊತೆಗೆ ಸದರಿ ಯೋಜನೆಯಡಿ ತರಕಾರಿ ಬೆಳೆಗಾರರಿಗೆ ಅನುಕೂಲವಾಗುವಂತೆ ಶೇ.50ರ ರಿಯಾಯಿತಿ ದರದಲ್ಲಿ ಲಘು ಪೋಷಕಾಂಶಗಳನ್ನು ವಿತರಣೆ ಮಾಡಲಾಗುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೆಂಗು ಶೇಖರಣಾ ಘಟಕ, ಲಘು ಪೋಷಕಾಂಶಗಳನ್ನು ಸಹಾಯಧನದಲ್ಲಿ ನೀಡಲಾಗುವುದು, ಈ ಎಲ್ಲಾ ಯೋಜನೆಗಳಿಗೆ ರೈತರು ಅರ್ಜಿ ಸಲ್ಲಿಸಿ, ಈ ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು.

# ಕನ್ನಡ ಭಾಷೆ ಉಳಿಸಿ ಬೆಳೆಸಲು ಕನ್ನಡಪರ ಸಂಘಟನೆಗಳು ಒಂದುಗೂಡಬೇಕಾಗಿದೆ

ತಿ.ನರಸೀಪುರ, ಜೂ.23– ರಾಜ್ಯದಲ್ಲಿ ಕನ್ನಡ ಭಾಷೆಯನ್ನು ರಕ್ಷಿಸಿ, ಉಳಿಸಿ, ಬೆಳೆಸುವುದಕ್ಕಾಗಿ ಎಲ್ಲಾ ಕನ್ನಡಪರ ಸಂಘಟನೆಗಳು ಒಂದುಗೂಡ ಬೇಕಾದ ಅನಿವಾರ್ಯತೆ ಇದೆ ಎಂದು ಕನ್ನಡ ಸೇನೆ–ಕರ್ನಾಟಕ ರಾಜ್ಯಾಧ್ಯಕ್ಷ ಕೆ.ಆರ್. ಕುಮಾರ್ ತಿಳಿಸಿದರು.

ಜಿಲ್ಲಾ ಮತ್ತು ತಾಲೂಕು ಕನ್ನಡ ಸೇನೆ ಪದಾಧಿಕಾರಿಗಳ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಎರಡೂವರೆ ಸಾವಿರ ವರ್ಷಗಳಿಗೂ ಹೆಚ್ಚು ಇತಿಹಾಸವಿರುವ ಕನ್ನಡ ಭಾಷೆಯ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಕನ್ನಡ ನಾಡು, ನುಡಿ, ಜಲ, ನೆಲ, ಭಾಷೆಯ ಬಗ್ಗೆ ಅಪಾರ ಅಭಿಮಾನ ಇಟ್ಟುಕೊಂಡು ಭಾಷೆಯನ್ನು ಉಳಿಸಲು ಪ್ರಯತ್ನ ಮಾಡಲಾಗುತ್ತಿದೆ. ಭಾಷೆ ಉಳಿದರೆ ನಾಡು ಉಳಿಯಲಿದೆ ಎಂದರು.

ನಮ್ಮ ನಾಡಿನಲ್ಲಿ ಬೇರೆಯವರನ್ನು ಪ್ರೀತಿಸುವ, ಅಪ್ಪಿಕೊಳ್ಳುವ ಕೆಲಸವನ್ನು ಮೊದಲಿನಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ಆದರೆ ಬೇರೆ ರಾಜ್ಯಗಳಲ್ಲಿ ಬೇರೆಯವರನ್ನು ಪ್ರೀತಿಸುವ ಮನೋಭಾವ ಇಲ್ಲ. ಅವರವರ ಭಾಷೆಗೆ ಗಮನಹರಿಸುತ್ತಾರೆ. ಭಾಷೆಯ ಉಳಿವಿಗೆ ಹೋರಾಟ ಮಾಡುವ ಅನಿವಾರ್ಯತೆ ಕರ್ನಾಟಕದಲ್ಲಿ ಮಾತ್ರ ಇದೆ ಎಂದರು.



ಜಿಲ್ಲಾ ಮತ್ತು ತಾಲೂಕುಕನ್ನಡ ಸೇನೆ ಪದಾಧಿಕಾರಿಗಳ ಕಾರ್ಯಕ್ರಮದಲ್ಲಿ ಕನ್ನಡ ಸೇನೆ–ಕರ್ನಾಟಕ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್ ಅವರನ್ನು ಸನ್ಮಾನಿಸಿದರು.

ತಾಲೂಕು ಅಧ್ಯಕ್ಷ ಕೆ.ರಾಜು ಮಾತನಾಡಿ, ಕನ್ನಡದ ಅಭಿವೃದ್ಧಿಗಾಗಿ ಹಲವಾರು ಮಹನೀಯರು ತಮ್ಮ ಜೀವವನ್ನು ತ್ಯಾಗ ಮಾಡಿದ್ದಾರೆ. ಕನ್ನಡಪರ ಹೋರಾಟಗಾರರು ಸದಾ ಕನ್ನಡದ ಉಳಿವು, ಬೆಳವಣಿಗೆಗಾಗಿ ದುಡಿಯುತ್ತಿದ್ದಾರೆ. ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಎಲ್ಲೆಡೆ ಬದುಕುವ ಅವಕಾಶವಿದೆ. ಆದರೆ ಒಂದು ಭಾಷೆಯ ಜನರ ನಡುವೆ ಬದುಕುವಾಗ ಕನ್ನಡದಲ್ಲಿ ವ್ಯವಹರಿಸಿ ಬದುಕುವುದು ಮುಖ್ಯ. ರನ್ನ, ಪೊನ್ನ, ಕುವೆಂಪು ಆದಿಯಾಗಿ ಬಹಳಷ್ಟು ಸಾಹಿತಿಗಳು, ಚಿಂತಕರು ಕನ್ನಡದ ಏಳಿಗೆಗಾಗಿ ಶ್ರಮಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಘಟಕದ ಮಹಿಳಾ ಅಧ್ಯಕ್ಷ ಎಂ.ಯು. ಶೈಲಜಾ, ಜಿಲ್ಲಾ ಉಪಾಧ್ಯಕ್ಷ ಎಂ. ಮಲ್ಲೇಶ್, ಕಾರ್ಯಾಧ್ಯಕ್ಷ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ಬಿ ಆನಂದ್, ಮುಖಂಡರಾದ ದೇವೇಗೌಡ, ಸಂತೋಷ್ ರಾಜ್, ರವಿ ಶಶಿಕಲಾ, ದಾಕ್ಷಾಯಿಣಿ, ಯಶೋಧ, ಲಕ್ಷ್ಮಿ ಗೀತಾ, ಕಾವ್ಯ, ಮಾನಸ, ಮತ್ತಿತರರಿದ್ದರು.

# ಮಕ್ಕಳು ಶಿಕ್ಷಣದಿಂದ ವಂಚಿತರಾದರೆ ಅಭಿವೃದ್ಧಿಗೆ ಮಾರಕ

ಹುಣಸೂರು, ಜೂ.23– ಮಕ್ಕಳನ್ನು ಶಿಕ್ಷಣದಿಂದ ವಂಚಿಸಿ ದುಡಿಮೆಗೆ ತಳ್ಳುವುದು ಸಮಾಜದ ಅಭಿವೃದ್ಧಿಗೆ ಮಾರಕವಾಗಿದೆ ಎಂದು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಭಾಗ್ಯಮ್ಮ ಕಳವಳ ವ್ಯಕ್ತಪಡಿಸಿರು.

ತಾಲೂಕಿನ ಬಿಳಿಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸರ್ಕಾರಿ ಪದವಿ ಪೂರ್ವ ಕಾಲೇಜು ಬಿಳಿಕೆರೆ, ಮಡಿಲು ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮೈಸೂರು ಸಹಯೋಗದಲ್ಲಿ ಮಂಗಳವಾರ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಮಗುವಿಗೂ ಶಿಕ್ಷಣ, ಆರೋಗ್ಯ ಮತ್ತು ಸುರಕ್ಷಿತ ಬಾಲ್ಯ ದೊರೆಯಬೇಕಿದೆ. ಬಾಲಕಾರ್ಮಿಕ ಪದ್ದತಿ ಮಕ್ಕಳ ಮೂಲ ಹಕ್ಕುಗಳ ಉಲ್ಲಂಘನೆಯಾಗಿದೆ. ಬಾಲಕಾರ್ಮಿಕರು ಕಂಡುಬಂದಲ್ಲಿ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ ಮಕ್ಕಳ ಭವಿಷ್ಯ ರಕ್ಷಣೆಗೆ ಕೈಜೋಡಿಸಬೇಕು. ಮಕ್ಕಳ ಕೈಯಲ್ಲಿ ಪುಸ್ತಕ ಬಿಟ್ಟರೆ ಯಾವುದೇ ಕೆಲಸದ ಸಾಧನೆಗಳನ್ನು ಕೊಡಬಾರದು, ನಮ್ಮ ದೇಶವನ್ನು ಉಳಿಸುವ ಪ್ರತಿಭೆಗಳನ್ನು ಕಾಪಾಡಿಕೊಳ್ಳಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.



ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಕಾರ್ಮಿಕ ನಿರೀಕ್ಷಕ ಎನ್ ಮಂಜುನಾಥ್ ಮಾತನಾಡಿ, ಮಕ್ಕಳು ಆರೋಗ್ಯ ರಕ್ಷಣೆ ಇಲ್ಲದೇ ಮೂಲ ಭೂತ ಸೌಕರ್ಯಗಳಿಗಾಗಿ ಬಾಲ್ಯವನ್ನು ಕಸಿದುಕೊಳ್ಳುವ ಕೆಲಸದಲ್ಲಿ ನಿರತರಾಗಿದ್ದಾರೆ. ಹಾಗಾಗಿ 2002ರಲ್ಲಿ ವಿಶ್ವ ಸಂಸ್ಥೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಈ ಬಾಲ ಕಾರಣಕ್ಕಾಗಿಯೇ ಕಾರ್ಮಿಕರ ವಿರುದ್ಧ ವಿಶ್ವ ದಿನವನ್ನು ಪ್ರಾರಂಭಿಸಿತು. ಬಾಲ ಕಾರ್ಮಿಕರ ವಿರುದ್ಧ ವಿಶ್ವ ದಿನವನ್ನು ಜೂನ್ 12 ಎಂದು ಗುರುತಿಸಲು ಕಾರಣ ಬಾಲ ಕಾರ್ಮಿಕರ ಸಮಸ್ಯೆಗಳ ಬಗೆಗೆ ಗಮನ ಸೆಳೆಯುವುದು ಮತ್ತು ಅದನ್ನು ನಿರ್ಮೂಲನೆ ಮಾಡಲು ಅಥವಾ ಅದರ ವಿರುದ್ಧ ಹೋರಾಡಲು ಮಾರ್ಗಗಳನ್ನು ಕಂಡುಕೊಳ್ಳುವುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಕೀಲ ಸಂಘದ ಅಧ್ಯಕ್ಷ ಎಸ್. ಶಿವಣ್ಣೇಗೌಡ, ಸಹಾಯಕ ಸರ್ಕಾರಿ ಅಭಿಯೋಜಕಿ ಅನಿತಾ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿ.ಬೋರೆಗೌಡ, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲೆ ವಿಭಾಗದ ಪ್ರಾಂಶುಪಾಲರಾದ ಸ್ನೇಹಲತಾ ಮಾತನಾಡಿದರು. ಡಾನ್ ಬೋಸ್ಕೋ ಮಕ್ಕಳಾಲಯದ ನಿರ್ದೇಶಕ ಜಿಮ್ ಜೋಸ್, ಎಸ್.ಡಿ.ಎಂ.ಸಿ ಅಧ್ಯಕ್ಷ ಚಂದ್ರನಾಯಕ, ಸಾ.ಪ.ಪೂ. ಕಾಲೇಜು ಪ್ರಾಂಶುಪಾಲ ಧನಂಜಯ್ ಕುಮಾರ್, ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಭಾಸ್ಕರ್, ಚಂದ್ರಕಾಂತ್ ಸೇರಿದಂತೆ ಶಿಕ್ಷಕರು, ಮಕ್ಕಳು ಹಾಜರಿದ್ದರು.

## ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷರಾಗಿ ಎಂ.ಪಿ.ಮಂಜುನಾಥ್ ನೇಮಕ

ಸರಗೂರು, ಜೂ.23– ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಸೂಚನೆ ಮೇರೆಗೆ, ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಅವರು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಸರಗೂರು ತಾಲ್ಲೂಕಿನ ಮನುಗನಹಳ್ಳಿ ಎಂ.ಪಿ. ಮಂಜುನಾಥ್ ಅವರನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

# ವಿದ್ಯಾಭ್ಯಾಸದ ಕಡೆ ಗಮನ ಹರಿಸಿ ಭವಿಷ್ಯ ರೂಪಿಸಿಕೊಳ್ಳಿ

## ಮಾಜಿ ಶಾಸಕ ಅಶ್ವಿನ್ ಕುಮಾರ್ ಕರೆ

ತಿ.ನರಸೀಪುರ, ಜೂ.23– ಶಿಕ್ಷಣವೇ ವ್ಯಕ್ತಿಯ ಬದುಕನ್ನು ರೂಪಿಸುವ ಪ್ರಮುಖ ಸಾಧನವಾಗಿದ್ದು, ವಿದ್ಯಾರ್ಥಿಗಳು ಮೊಬೈಲ್ ಮತ್ತು ಟಿವಿಯ ಗೀಳಿಗೆ ಒಳಗಾಗದೆ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸಿ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು ಎಂದು ಮಾಜಿ ಶಾಸಕರು ಹಾಗೂ ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷರೂ ಆದ ಎಂ.ಅಶ್ವಿನ್ ಕುಮಾರ್ ಕರೆ ನೀಡಿದರು.

ತಾಲೂಕಿನ ಮಾದಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ವಿತಾ ಡೆವಲಪರ್ ಮಾಲೀಕ ಶ್ರೀರಂಗರಾಜಪುರ ಸಿದ್ದರಾಜು ವತಿಯಿಂದ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳೇ ನಾಳಿನ ದೇಶದ ಆಸ್ತಿ. ಶಾಲಾ ಜೀವನದಲ್ಲಿ ವಿದ್ಯಾರ್ಥಿಗಳು ಎಷ್ಟು ಶ್ರದ್ಧೆ ಮತ್ತು ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡುತ್ತಾರೋ, ಅದಕ್ಕೆ ತಕ್ಕ ಪ್ರತಿಫಲವನ್ನು ಭವಿಷ್ಯದಲ್ಲಿ ಪಡೆಯುತ್ತಾರೆ. ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಾಕಷ್ಟು ಕಷ್ಟಪಡುತ್ತಾರೆ. ಅನೇಕ ಕುಟುಂಬಗಳು ಆರ್ಥಿಕ ಸಂಕಷ್ಟಗಳ ನಡುವೆಯೂ ಮಕ್ಕಳ ಓದಿಗಾಗಿ ಶ್ರಮಿಸುತ್ತಿವೆ. ಪೋಷಕರ ಆ ತ್ಯಾಗ, ಕಷ್ಟ ಮತ್ತು ಕನಸುಗಳನ್ನು ಸಾಕಾರಗೊಳಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಹೇಳಿದರು.




ವಿದ್ಯಾರ್ಥಿಗಳಿಗೆ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಬ್ಯಾಗ್‌ಗಳನ್ನು ವಿತರಿಸಿದರು.

ಕನ್ವಿತಾ ಡೆವಲಪರ್ಸ್ ಮಾಲೀಕ ಹಾಗೂ ಸೋಮನಾಥಪುರ ಪಿಎಸಿಸಿಎಸ್ ನಿರ್ದೇಶಕ ಶ್ರೀರಂಗರಾಜಪುರ ಎಂ. ಸಿದ್ದರಾಜು ಮಾತನಾಡಿ ಶಿಕ್ಷಣವು ಪ್ರತಿಯೊಬ್ಬರ ಬದುಕಿನಲ್ಲಿ ಮಹತ್ತರ ಬದಲಾವಣೆ ತರಬಲ್ಲ ಶಕ್ತಿಯಾಗಿದೆ. ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಮಾಡುವ ಮೂಲಕ ತಮ್ಮ ಪೋಷಕರು, ಶಾಲೆ ಹಾಗೂ ಗ್ರಾಮದ ಹೆಸರನ್ನು ಎತ್ತಿಹಿಡಿಯಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ದಾನಿಗಳ ಈ ಕಾರ್ಯವನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಸಿ.ಬಿ. ಹುಂಡಿ ಚಿನ್ನಸ್ವಾಮಿ, ಡೈರಿ ಮಾಜಿ ಅಧ್ಯಕ್ಷ ಸೋಮಣ್ಣ, ಮಹದೇವಸ್ವಾಮಿ, ಶಾಲೆಯ ಮುಖ್ಯ ಶಿಕ್ಷಕಿ ಜೀನತ್ ಉನ್ನೀಸಾ, ದೈಹಿಕ ಶಿಕ್ಷಣ ಶಿಕ್ಷಕ ಐಸಾಕ್ ಇಂದ್ರಕುಮಾರ್, ಶಿಕ್ಷಕರಾದ ಎಸ್. ಶಾಂತಲ, ಕುಮುದಾರಾವ್, ಎಂ. ಮುಕ್ತ ಕುಮಾರ್, ಹೆಚ್.ಕೆ. ನಾಗರಾಜಪ್ಪ, ಹೆಚ್.ಎಸ್. ಪಾವನ, ಸಹಾಯಕ ಎಂ.ಆರ್.ನವೀನ್ ಸೇರಿದಂತೆ ಶಾಲೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಹುಣಸೂರು ರೋಟರಿ ಕ್ಲಬ್‌ಗೆ ಪ್ರತಿಷ್ಠಿತ ಡೈಮಂಡ್ ಪ್ಲಸ್ ಅವಾರ್ಡ್ ಹಿರಿಮೆ

ಹುಣಸೂರು, ಜೂ.23– ರೋಟರಿ ಕ್ಲಬ್ ಹುಣಸೂರು 2025–26ನೇ ಸಾಲಿನ ಪ್ರತಿಷ್ಠಿತ ಡೈಮಂಡ್ ಪ್ಲಸ್ ಅವಾರ್ಡ್ ತನ್ನ ಮುಡಿಗೇರಿಸುವ ಮೂಲಕ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ ಎಂದು ರೋಟರಿ ಕ್ಲಬ್ ಅಧ್ಯಕ್ಷ ಹೆಚ್. ಆರ್.ಕೃಷ್ಣಕುಮಾರ್ ತಿಳಿಸಿದ್ದಾರೆ.

ಹನ್ನೆರಡು ಮಾಸಗಳ ಕಾಲ ನಗರ ಮತ್ತು ತಾಲೂಕಿನ ಅಂಗನವಾಡಿ ಕೇಂದ್ರ, ಸರಕಾರಿ ಶಾಲೆ, ಸಾರ್ವಜನಿಕ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರು, ಅಭಿವೃದ್ಧಿಗೆ ಅತೀ ಹೆಚ್ಚು ಆದ್ಯತೆ ನೀಡಿದ್ದು, ಅಕ್ಷರ, ಆರೋಗ್ಯ, ಹಸಿವಿಗೆ ಮತ್ತು ಪರಿಸರಕ್ಕೆ ರೋಟರಿಯಿಂದ ಒತ್ತು ನೀಡಿರುವುದರಿಂದ ಈ ಪ್ರಶಸ್ತಿ ಲಭಿಸಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.




ಕಾರ್ಯಕ್ರಮದಲ್ಲಿ ಹುಣಸೂರು ರೋಟರಿ ಕ್ಲಬ್ ಅವಾರ್ಡ್ ಪಡೆಯುತ್ತಿರುವುದು.

ಶನಿವಾರ ಮತ್ತು ಭಾನುವಾರ ಮೈಸೂರಿನ ನಾರ್ತ್ ಅವೆನ್ಯೂ ಗ್ರೌಂಡ್‌ನಲ್ಲಿ ನಡೆದ ಅನುಬಂಧ ಅವಾರ್ಡ್ ಕಾರ್ಯಕ್ರಮದಲ್ಲಿ ಹುಣಸೂರು ರೋಟರಿ ಕ್ಲಬ್ ಒಂದು ವರ್ಷದ ಸಾಧನೆಗಾಗಿ, ಡೈಮಂಡ್ ಪ್ಲಸ್, ಎಕ್ಸಲೆಂಟ್ ಅಕ್ಟೀವ್ ಕ್ಲಬ್, ವೈಬ್ರೆಟ್ ಕ್ಲಬ್ ಹಾಗೂ ಎಂಗೇಜ್ಮೆಂಟ್ ಎಕ್ಸಲೆನ್ಸ್ ಜಿಲ್ಲಾ ಮೂರು ಕೆಟಗೆರಿ ಅವಾರ್ಡ್ ಪಡೆಯುವ ಮೂಲಕ ರೋಟರಿ ಕ್ಲಬ್ಬಿಗೆ ಕೀರ್ತಿ ತಂದಿರುವುದು ಹೆಮ್ಮೆ ತಂದಿದೆ ಎಂದರು.

ಈ ಸಾಧನೆಗೆ ಕಾರಣರಾದ ಜಿಲ್ಲಾ ಗವರ್ನರ್ ಪಿ.ಕೆ.ರಾಮಕೃಷ್ಣ, ಸಹಾಯಕ ಗವರ್ನರ್ ರಾಜೇಗೌಡ ತಿಮಲಾಪುರ, ವಲಯ ಸೇನಾನಿ ಕೆ.ರಮೇಶ್, ಹಾಗೂ ಹಿರಿಯ ರೋಟರಿ ಸದಸ್ಯರಾದ ಧರ್ಮಾಪುರ ನಾರಾಯಣ್, ರಾಜಶೇಖರ್, ಆನಂದ್ ಆರ್, ಮತ್ತು ಎಲ್ಲಾ ರೋಟರಿ ಬಂಧುಗಳಿಗೆ ಧನ್ಯವಾದ ತಿಳಿಸಿದ್ದಾರೆ.

ಈ ವೇಳೆ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ, ಪಿಡಿಜಿ ವಿಕ್ರಮ್ ದತ್ತ, ಎಲೆಕ್ಟ್ ಜಿಲ್ಲಾ ಗವರ್ನರ್ ಯಶಸ್ವಿ ಸೋಮಶೇಖರ್, ಸಹಾಯಕ ಗವರ್ನರ್ ರಾಜೇಗೌಡ ತಿಮಲಾಪುರ, ಆನಂದ್, ಶ್ಯಾಮಣ್ಣ ವೃಷಬೇಂದ್ರ ಸ್ವಾಮಿ, ಧರ್ಮಾಪುರ ಪ್ರಸನ್ನ, ಬಸವರಾಜ್ ಧರ್ಮಾಪುರ ಇದ್ದರು.

### ಮೈಸೂರು ನಗರ-ತಾಲೂಕು ವ್ಯಾಪ್ತಿಯಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳ ತಂಡದಿಂದ

# ಆಹಾರೋದ್ಯಮ, ಬೀದಿಬದಿ ವ್ಯಾಪಾರ, ಬಾರ್-ರೆಸ್ಟೋರೆಂಟ್‌ಗಳಲ್ಲಿ ಪರಿಶೀಲನೆ; ನಿಯಮ ಉಲ್ಲಂಘನೆ ಸಂಬಂಧ ನೋಟಿಸ್ ಜಾರಿ



ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿದ ಆಹಾರ ಸುರಕ್ಷತಾ ಅಧಿಕಾರಿಗಳು.



ಮೈಸೂರು ನಗರ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿದ ಆಹಾರ ಸುರಕ್ಷತಾ ಅಧಿಕಾರಿಗಳು ದೋಷಪೂರಿತ ಪದಾರ್ಥಗಳನ್ನು ವಶಪಡಿಸಿಕೊಂಡಿರುವುದು.

ಮೈಸೂರು,ಜೂ.23(ಪಿಎಂ)– ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ಆಹಾರ ಸುರಕ್ಷತಾ ಅಧಿಕಾರಿಗಳ ತಂಡಗಳು ಮೈಸೂರು ನಗರ ಮತ್ತು ತಾಲೂಕು ವ್ಯಾಪ್ತಿಯಲ್ಲಿ ಸುರಕ್ಷತಾ ಕ್ರಮ ಅನುಸರಿಸುತ್ತಿರುವ ಸಂಬಂಧ ಆಹಾರೋದ್ಯಮಗಳು, ಬೀದಿಬದಿ ವ್ಯಾಪಾರ ಸ್ಥಳಗಳು ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಪರಿಶೀಲನೆ ನಡೆಸಿವೆ.

ಜಿಲ್ಲಾಧಿಕಾರಿಗಳ ಸೂಚನೆಯಂತೆ ಆರೋಗ್ಯ ಇಲಾಖೆ ಅಧೀನದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ತಂಡಗಳು ತಪಾಸಣೆ ತೀವ್ರಗೊಳಿಸಿವೆ. ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂಕಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ ನೇತೃತ್ವದಲ್ಲಿ ಪರಿಶೀಲನೆ ನಡೆಸಲಾಯಿತು.

ಸೋಮವಾರ ಸಂಜೆ 4ರಿಂದ ಮಂಗಳವಾರ ಸಂಜೆ 4ರವರೆಗೆ ದಟ್ಟಗಳ್ಳಿ, ಕುವೆಂಪುನಗರ, ಸರಸ್ವತಿಪುರಂ, ದೇವರಾಜ ಅರಸು ರಸ್ತೆ, ಕೊತ್ವಾಲ್ ರಾಮಯ್ಯ ಸ್ಟ್ರೀಟ್‌ಗಳಲ್ಲಿ ಒಟ್ಟು 15 ಕಡೆಗಳಲ್ಲಿ ಪರಿಶೀಲನೆ ನಡೆಸಲಾಯಿತು. ಈ ಪೈಕಿ 9 ಬೀದಿ ಬದಿಯ ಆಹಾರ ವ್ಯಾಪಾರಿಗಳಲ್ಲಿ ಪರಿಶೀಲನೆ ನಡೆಸಿ ಅದರಲ್ಲಿ 4 ವ್ಯಾಪಾರಸ್ಥರಿಗೆ ನೋಟಿಸ್ ಜಾರಿಗೊಳಿಸಲಾಯಿತು. ಈ 15ರಲ್ಲಿ 4 ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಅಲ್ಲದೆ, ತಪಾಸಣೆ ವೇಳೆ ಎರಡು ಕಡೆಗಳಲ್ಲಿ ಒಟ್ಟು 43.5 ಕೆಜಿಯ 4,160 ರೂ. ಮೌಲ್ಯದ ಅತಿಯಾದ ಬಣ್ಣದಿಂದ ಕೂಡಿದ ಖಾರಾ ಮಿಕ್ಸರ್, ಹಸಿರು ಬಟಾಣಿ ಮತ್ತು ಕೆಂಪು ಬಟಾಣಿ ವಶಪಡಿಸಿಕೊಳ್ಳಲಾಗಿದೆ. ಜೊತೆಗೆ ಒಟ್ಟು 8 ಸಮೀಕ್ಷಾ ಮಾದರಿಗಳನ್ನು ಸಂಗ್ರಹಿಸಲಾಯಿತು. ಅದರಲ್ಲಿ 4 ಸೂಕ್ಷ್ಮ, 3 ರಾಸಾಯನಿಕ, 1 ಲೇಬಲ್ ಪರೀಕ್ಷೆ ಹಾಗೂ 1 ಕಾನೂನು ಪರೀಕ್ಷೆ ಮಾದರಿಗಳು ಸೇರಿವೆ. ಎಲ್ಲಾ ಮಾದರಿಗಳನ್ನು ವಿಶ್ಲೇಷಣಾ ವರದಿಗಾಗಿ ಪ್ರಾಯೋಗಾಲಯಕ್ಕೆ ರವಾನಿಸಲಾಗಿದೆ.

**ತಾಲೂಕು ವ್ಯಾಪ್ತಿ:** ಮೈಸೂರು ತಾಲೂಕು ವ್ಯಾಪ್ತಿಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ಅಂಕಿತ ಅಧಿಕಾರಿ ಡಾ.ಎ.ಎನ್.ಕಾಂತರಾಜು ಅವರ ನೇತೃತ್ವದಲ್ಲಿ ಮಂಗಳವಾರ ಆಹಾರೋದ್ಯಮಗಳ ಪರಿಶೀಲನೆ ನಡೆಸಲಾಯಿತು. ಒಟ್ಟು 23 ಆಹಾರೋದ್ಯಮಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಈ ಪೈಕಿ 5ಕ್ಕೆ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ನೋಟಿಸ್ ಜಾರಿಗೊಳಿಸಲಾಯಿತು. ಇದೇ ವೇಳೆ ಅವಧಿ ಮೀರಿದ ಆಹಾರ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಯಿತು.

ಇದೇ ವೇಳೆ ಸರ್ವೇ ವಿಶ್ಲೇಷಣೆ ವರದಿಗಾಗಿ 4 ಮಾದರಿ ಹಾಗೂ ಕಾನೂನಾತ್ಮಕ ವಿಶ್ಲೇಷಣಾ ವರದಿಗಾಗಿ 2 ಮಾದರಿಗಳನ್ನು ಸಂಗ್ರಹಿಸಲಾಯತು. ಡಾ.ಎ.ಎನ್.ಕಾಂತರಾಜು ಅವರೊಂದಿಗೆ ಆಹಾರ ಸುರಕ್ಷತಾ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಬ್ಲಾಸ್ಟ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ರೆಬೆಲ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಹಂಟೆಡ್ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಕಲಾಸಿ ಪಾಳ್ಯ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಪೆದ್ದಿ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಬಾಲನ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ನೂರ್ ಸ್ವಾಮಿ | 4 ಪ್ರದರ್ಶನಗಳು |
| **ಲಿಡೋ** | |
| ಕೆಡಿ(ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಕಾಲಘಟ್ಟ (ಕ) | 4 ಪ್ರದರ್ಶನಗಳು |

## ಮೈಸೂರು ಬೇಸಿಗೆ ರೇಸ್

**5ನೇ ದಿನ, ಬುಧವಾರ, 24-06-2026**

**ಇಂದಿನ ರೇಸ್‌ಗೆ ನಮ್ಮ ಆಯ್ಕೆ**

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಹೆಗ್ಗಡದೇವನ ಕೋಟೆ ಪ್ಲೇಟ್ –1200 ಮೀ. 3 ವರ್ಷದ (ಟರ್ಮ್ಸ್) ಮ1.30ಕ್ಕೆ
1. ಪೈಲೆಟ್ ಆಫೀಸರ್ 2. ತೇಜಸ್

II. ಆಲ್ ಬೆರೆಟೋ ಪ್ಲೇಟ್ –1600 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1 ಕರೋಲಿನಾ ಸ್ಪಿಂಗ್ಸ್ 2. ಗಿಮ್ಮಿ

III. ಕಪಿಲಾ ಪ್ಲೇಟ್ ಡಿ II –1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ವಿಂಡ್ ಬ್ರೋನೆ 2. ಬಯೋ ಮೆಟ್ರಿಕ್

IV. ಗೋವಾ ಪ್ಲೇಟ್ ಡಿ II 1400 ಮೀ ರೇಟೆಡ್ 20 ರಿಂದ 45. ಮ.3.00ಕ್ಕೆ
1. ನೊ ಜ್ಯೂಮಿ 2. ಎಲ್‌ಸಾ

V. ಕಪಿಲಾ ಪ್ಲೇಟ್ ಡಿ I 1200ಮೀ ರೇಟೆಡ್ 20 ರಿಂದ 45 ಮ.3.30ಕ್ಕೆ
1. ಹಬಿಬ್ತಿ 2. ಶೀಬಾ

VI. ಸುಬ್ರಮಣ್ಯಂ ಮೆಮೋರಿಯಲ್ ಟ್ರೋಫಿ 1200 ಮೀ ರೇಟೆಡ್ 60 ಮತ್ತು ಮೇಲ್ಪಟ್ಟ ಸಂ4.00ಕ್ಕೆ 1. ಡ್ರಿಸನಾ 2. ಒಶನ್

VII. ರಾಣಿ ಬೆನ್ನೂರ್ ಪ್ಲೇಟ್ 1400 ಮೀ ರೇಟೆಡ್ 40 ರಿಂದ 65. ಮ.4.30ಕ್ಕೆ
1. ಚೀಫ್ ಅಡ್ಮಿರಲ್ 2. ಟೈಮ್ ಪಾರ್‌ವಿಕ್ಟರಿ


VIII. ಗೋವಾ ಪ್ಲೇಟ್ ಡಿ I 1400 ಮೀ ರೇಟೆಡ್ 20 ರಿಂದ 45. ಮ.5.00ಕ್ಕೆ
1. ಕ್ಲೌಡಿ ಹಿಲ್ಸ್ 2. ಡಿಯರ್ ಲೇಡಿ

ದಿನದ ಅತ್ಯುತ್ತಮ........: ಡ್ರಿಸನಾ
ಡಬ್ಬಲ್........: ಹಬಿಬ್ತಿ , ಚೀಫ್ ಅಡ್ಮಿರಲ್
ಜಾಕ್‌ಪಾಟ್........: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್........: 5, 6, 7 ಮತ್ತು 8
I ಟ್ರಿಬಲ್........: 1, 2 ಮತ್ತು 3
II ಟ್ರಿಬಲ್........: 3, 4 ಮತ್ತು 5
III ಟ್ರಿಬಲ್........: 6, 7 ಮತ್ತು 8
ಎಕ್ಸ್‌ಆಕ್ಟ್........: 1 ರಿಂದ 8

ಟಿಪ್‌ಸ್ಟರ್ ಪಿಜಿಸಿ

## ಚಾಮುಂಡಿಬೆಟ್ಟದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

### 36 ಸ್ಥಳಗಳಲ್ಲಿ ನಲ್ಲಿಗಳ ಅಳವಡಿಕೆ



ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕುಡಿಯುವ ನೀರಿನ ನಲ್ಲಿಗಳನ್ನು ಅಳವಡಿಸಿರುವುದು ಕಾಣಬಹುದು

ಮೈಸೂರು, ಜೂ.23(ಜಿಎ)–ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದಿಂದ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾಧಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.

ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ತಾಯಿಯ ದರ್ಶನ ಪಡೆಯಲು ಬರುವ ಭಕ್ತಾಧಿಗಳು ದೇವಸ್ಥಾನದ ಆವರಣದಲ್ಲಿ ಬಾಯಾರಿಕೆಯಾದಾಗ ನೀರು ಕುಡಿಯಲು 36 ಸ್ಥಳದಲ್ಲಿ ಕುಡಿಯುವ ನೀರಿನ ನಲ್ಲಿಗಳನ್ನು ಅಳವಡಿಸಲಾಗಿದೆ.

ರಾಜ್ಯದಲ್ಲಿ ಅತಿ ಹೆಚ್ಚು ಭಕ್ತರು, ಪ್ರವಾಸಿಗರು ಭೇಟಿ ನೀಡುವ ಧಾರ್ಮಿಕ ಸ್ಥಳಗಳಲ್ಲಿ ಒಂದಾದ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ವರ್ಷವಿಡಿ ಲಕ್ಷಾಂತರ ಭಕ್ತಾಧಿಗಳು ಭೇಟಿ ನೀಡಿ ತಾಯಿ ದರ್ಶನ ಪಡೆಯುತ್ತಾರೆ. ಕೆಲವೊಮ್ಮೆ ಭಕ್ತಾಧಿಗಳ ಸಂಖ್ಯೆ ಹೆಚ್ಚಾಗುವುದರಿಂದ ಸರತಿ ಸಾಲಿನ ಸಂಖ್ಯೆಯೂ ಹೆಚ್ಚಾಗಿ, ಕುಡಿಯುವ ನೀರಿಗೆ ಪರದಾಡಬೇಕಿತ್ತು. ಇಂತಹ ಸಂದರ್ಭದಲ್ಲಿ ಕೆಲವರು ಬಾಯಾರಿಕೆಯಾಗಿ ಮಧ್ಯದಲ್ಲಿ ನಿತ್ರಾಣರಾಗುತ್ತಾರೆ. ಈ ಸಂಬಂಧ ಪ್ರಾಧಿಕಾರಕ್ಕೆ ಸಾಕಷ್ಟು ದೂರುಗಳು ಬಂದಿತ್ತು.

ಭಕ್ತಾಧಿಗಳಿಂದ ದೂರು ಬಂದ ಹಿನ್ನೆಲೆಯಲ್ಲಿ ಹಾಗೂ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಶೇಷ ಯೋಜನೆಯನ್ನು ರೂಪಿಸಿ, ಸಿಎಸ್‌ಆರ್ ಅನುದಾನದಡಿ ಚಾಮುಂಡಿಬೆಟ್ಟದ ದೇವಾಲಯದಲ್ಲಿ ನಲ್ಲಿಗಳನ್ನು ಅಳವಡಿಸಲಾಗಿದೆ.

ಪ್ರಾಧಿಕಾರವೂ ಎಸ್‌ಬಿಐನೊಂದಿಗೆ ಚರ್ಚಿಸಿ, ಸಿಎಸ್‌ಆರ್ ಅನುದಾನದಡಿ ಉಚಿತ ದರ್ಶನದ ಸರತಿ ಸಾಲು ಹಾಗೂ ವಿಶೇಷ ದರ್ಶನದ ಸರತಿ ಸಾಲಿನಲ್ಲಿಯೂ 36 ನಲ್ಲಿಗಳನ್ನು ಅಳವಡಿಸಿದ್ದಾರೆ. ಚೌಕಕಾರದ ಸ್ಟೀಲ್ ಬಾಕ್ಸ್‌ನೊಳಗೆ ಎರಡು ಭಾಗದಲ್ಲಿ ಪತ್ಯೇಕ ನಲ್ಲಿಗಳನ್ನು ಅಳವಡಿಸಿದ್ದು, ಲೋಟಗಳನ್ನು ಅಳವಡಿಸಲಾಗಿದೆ. ಇದರಿಂದ ಭಕ್ತಾಧಿಗಳು ಸರತಿ ಸಾಲಿನಲ್ಲಿ ಸುಸ್ತಾದಾಗ ಅಥವಾ ಬಾಯಾರಿಕೆಯಾದಾಗ ನೀರು ಕುಡಿದು ದಣಿವಾರಿಸಿಕೊಳ್ಳಬಹುದಾಗಿದೆ.

## ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರ ಪ್ರತಿಭಟನೆ

### ಶಂಕಿತ ಬಾಂಗ್ಲಾ ವಲಸಿಗರ ಪೊಲೀಸರಿಗೆ ಒಪ್ಪಿಸಿದ ಕಾರ್ಯಕರ್ತರ ವಿರುದ್ಧ ಕೇಸ್



ಅಕ್ರಮ ಬಾಂಗ್ಲಾ ವಲಸಿಗರ ಹಿಡಿದುಕೊಟ್ಟ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಿದ ಪೊಲೀಸರ ಕ್ರಮ ಖಂಡಿಸಿ ಮೈಸೂರಲ್ಲಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.23(ಎಂಟಿವೈ)– ಮೈಸೂರಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರ ಪತ್ತೆ ಮಾಡಿ ಪೊಲೀಸರಿಗೆ ಒಪ್ಪಿಸಿದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರ ವಿರುದ್ದ ಎಫ್‌ಐಆರ್ ದಾಖಲಿಸಿರುವ ಪೊಲೀಸರ ಕ್ರಮ ಖಂಡಿಸಿ ಮೈಸೂರಲ್ಲಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ವೇದಿಕೆ ಕಾರ್ಯಕರ್ತರು ರಾಜ್ಯ ಸರ್ಕಾರ ಬಾಂಗ್ಲಾ ಅಕ್ರಮ ವಲಸಿಗರನ್ನು ತಡೆಯುವಲ್ಲಿ ವಿಫಲವಾಗಿದೆ. ಮೈಸೂರಿಗೆ ನೂರಾರು ಮಂದಿ ಬಾಂಗ್ಲಾ ಅಕ್ರಮ ವಲಸಿಗರು ಆಗಮಿಸುತ್ತಿದ್ದರೂ ಓಟ್ ಬ್ಯಾಂಕ್ ರಾಜಕಾರಣಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರಲ್ಲದೆ, ಹಣದ ಆಸೆಗಾಗಿ ನಕಲಿ ನಾಗರಿಕ ದಾಖಲೆ ಮಾಡಿಸುತ್ತಿರುವ ದೇಶದ್ರೋಹಿಗಳನ್ನು ಬಂಧಿಸಬೇಕು. ಅಕ್ರಮ ಬಾಂಗ್ಲಾ ವಲಸಿಗರನ್ನು ದೇಶದಿಂದ ಹೊರಗಟ್ಟಬೇಕು. ನುಸುಳುಕೋರರ ಹಾವಳಿ ತಡೆಗಟ್ಟಬೇಕು. ದೇಶದ ರಕ್ಷಣೆ ಮೊದಲ ಆದ್ಯತೆಯಾಗಬೇಕು. ಅಕ್ರಮ ವಲಸೆ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆ ವೇಳೆ ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಚಾಲಕ ಪ್ರಶಾಂತ್ ಮಾತನಾಡಿ, ರೈಲಿನಲ್ಲಿ ಬಂದ ಶಂಕಿತರನ್ನು ಹಿಡಿದು ಕೊಟ್ಟು ಪೊಲೀಸರಿಗೆ ಸಹಾಯ ಮಾಡಿದ ಸಂಘಟನೆಯ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಿರುವುದು ಖಂಡನೀಯ. ರಾಜ್ಯಕ್ಕೆ ಪ್ರತಿದಿನ ನೂರಾರು ಬಾಂಗ್ಲಾ ವಲಸಿಗರು ನಕಲಿ ದಾಖಲೆ ಇಟ್ಟುಕೊಂಡು ಪಶ್ಚಿಮ ಬಂಗಾಳದಿಂದ ಬರುತ್ತಿದ್ದಾರೆ ಎಂಬ ಆರೋಪ ಇದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಭಾನುವಾರ ಪಶ್ಚಿಮ ಬಂಗಾಳದಿಂದ ಬಂದ ಶಂಕಿತರಲ್ಲಿದ್ದ ಆಧಾರ್ ಕಾರ್ಡ್‌ನಲ್ಲಿ ಹಲವು ಗೊಂದಲಕಾರಿ ಅಂಶಗಳಿದ್ದವು. ಅಣ್ಣ – ತಮ್ಮಂದಿರ ಹುಟ್ಟಿದ ದಿನ 15 ದಿನವಷ್ಟೇ ವ್ಯತ್ಯಾಸವಿತ್ತು. ಇಂತಹ ವಿಷಯಗಳನ್ನು ಪೊಲೀಸರು ಪರಿಶೀಲಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ ಸಿಂಹ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಸಂಘಟನೆ ಮುಖಂಡರಾದ ಚಂದ್ರುಸ್ವಾಮಿ, ಮಹೇಶ್ ಕಡಗದಾಲು, ಸಂದೇಶ್, ರಾಜಣ್ಣ, ಮನು ಶ್ರೀನಿವಾಸ್, ಬಿಜೆಪಿ ಮುಖಂಡರಾದ ಹೆಚ್.ಜಿ.ಗಿರಿಧರ್, ಅರುಣ್‌ಕುಮಾರ್, ಜೋಗಿ ಮಂಜು, ಪರಮೇಶ್‌ಗೌಡ, ಆನಂದ್, ಹೇಮಾ ನಂದೀಶ್ ಭಾಗವಹಿಸಿದ್ದರು.

## ನಾಳೆ ಕೆ-ಸೆಟ್, ಯುಜಿಸಿ-ನೆಟ್ ತರಬೇತಿ ಶಿಬಿರದ ಸಮಾರೋಪ

ಮೈಸೂರು,ಜೂ.23– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'ವು ಕೆ-ಸೆಟ್ ಮತ್ತು ಯುಜಿಸಿ-ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಏರ್ಪಡಿಸಿದ್ದ 45 ದಿನದ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಜೂ.25ರ ಬೆಳಗ್ಗೆ 11ಕ್ಕೆ ಕರಾಮುವಿ ಆವರಣದ ಕಾವೇರಿ ಸಭಾಂಗಣದಲ್ಲಿ ನಡೆಯಲಿದೆ.

ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಶಿಬಿರಾರ್ಥಿಗಳಿಗೆ ಶುಭ ಹಾರೈಸಲಿದ್ದು, ಡಿಸಿಪಿ ಡಾ.ಹರ್ಷ ಪ್ರಿಯಂವದ ಮುಖ್ಯ ಭಾಷಣ ಮಾಡಲಿದ್ದಾರೆ. ಇದೇ ವೇಳೆ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ 'ಮುಕ್ತ ಭಂಡಾರ' ಅಧ್ಯಯನ ಪುಸ್ತಕವನ್ನು ಬಿಡುಗಡೆ ಮಾಡಲಿದ್ದಾರೆ. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ.ರಾಮನಾಥಂ ನಾಯ್ಡು, ಅಧ್ಯಯನ ಕೇಂದ್ರದ ಡೀನ್ ಡಾ.ಎನ್.ಆನಂದಗೌಡ, ಹಣಕಾಸು ಅಧಿಕಾರಿ ಡಾ.ಎಸ್.ನಿರಂಜನ್ ರಾಜ್ ಮತ್ತಿತರರು ಉಪಸ್ಥಿತರಿರುವರು. ಶಿಬಿರದಲ್ಲಿ ವಿವಿಧ ಜಿಲ್ಲೆಗಳ 228 ಅಭ್ಯರ್ಥಿಗಳು ಭಾಗವಹಿಸಿದ್ದರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

## ಪ್ರತಿಭಾ ಪುರಸ್ಕಾರ

ಮೈಸೂರು, ಜೂ. 23– ಭಾರತೀಯ ವಿದ್ಯಾರ್ಥಿ ಸಂಘದ ವತಿಯಿಂದ 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಕಾರ್ಯಕ್ರಮವನ್ನು ಜು. 5 ರಂದು ಬೆಳಗ್ಗೆ 10 ಗಂಟೆಗೆ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಅರ್ಜಿಯನ್ನು ಜು. 2 ರೊಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗೆ ಮೊ. 8971334799, 9880361209 ಸಂಪರ್ಕಿಸಬಹುದು.

## ವಿದ್ಯುತ್ ವ್ಯತ್ಯಯ



ಮೈಸೂರು, ಜೂ.23– ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಜೂನ್ 24 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಮೇಗಳಾಪುರ, ಹೊಸಹಳ್ಳಿ, ಕುಪ್ಪೇಗಾಲ, ಸಿದ್ದರಾಮನಹುಂಡಿ, ಯಡಕೊಳ, ಅಂಚೆಹುಂಡಿ, ದೇವೇಗೌಡನ ಹುಂಡಿ, ಕಡವೆಕಟ್ಟೆಹುಂಡಿ, ಶಿವಶಂಕರ್ ಪೋಲ್ ಫ್ಯಾಕ್ಟರಿ, ರಾಜಶ್ರೀ ಇಂಡಸ್ಟ್ರೀಸ್, ನಿಶಾರ ಹೋಟೆಲ್, ಜಾಗ್ವಾರ್ ಸಿಮೆಂಟ್, ತಿ. ನರಸೀಪುರ ಮುಖ್ಯ ರಸ್ತೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರಿಗೆ ಬಾಂಗ್ಲಾ ವಲಸಿಗರ ದಂಡು

- ರಾಜ್ಯ ಸರ್ಕಾರದ ನಿರ್ಲಕ್ಷ್ಯಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ
- ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಎದಿರೇಟು



ಮೈಸೂರು,ಜೂ.23(ಎಂಟಿವೈ)– ಮೈಸೂರು ಸೇರಿದಂತೆ ರಾಜ್ಯಕ್ಕೆ ಪ್ರತಿದಿನ ನೂರಾರು ಮಂದಿ ಅಕ್ರಮ ಬಾಂಗ್ಲಾ ವಲಸಿಗರು ಬರುತ್ತಿದ್ದರೂ, ಅವರ ವಿರುದ್ಧ ಯಾವುದೆ ಕ್ರಮ ಕೈಗೊಳ್ಳದೆ ರಾಜ್ಯ ಸರ್ಕಾರ ಸುಮ್ಮನಿದೆ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಕ್ರಮ ವಲಸಿ ಗರನ್ನು ಬ್ರದರ್ ಎನ್ನುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಇದುವರೆಗೂ ಅಕ್ರಮ ಬಾಂಗ್ಲಾ ವಲಸಿಗರನ್ನು ತಡೆಯಲು ಯಾವುದೇ ಕ್ರಮ ಕೈಗೊಂಡಿಲ್ಲ. ಪಶ್ಚಿಮ ಬಂಗಾಳದಲ್ಲಿ ದೀದಿ ಅಧಿಕಾರದ 15 ವರ್ಷ ಬಾಂಗ್ಲಾ ವಲಸಿಗರ ಉಪಟಳ ಹೆಚ್ಚಾಗಿತ್ತು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆ ಕಾರಣಕ್ಕೆ ಬಿಜೆಪಿಯ ಸುವೇಂದು ಅಧಿಕಾರಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇದರಿಂದ ಅಲ್ಲಿದ್ದ ಬಾಂಗ್ಲಾ ವಲಸಿಗರು ಈಗ ಬೇರೆ ಕಡೆಗೆ ಕಾಲು ಕೀಳುತ್ತಿದ್ದಾರೆ. ಸುರಕ್ಷಿತ ನೆಲೆ ಎಂದು ಕರ್ನಾಟಕಕ್ಕೆ ದೊಡ್ಡ ಪ್ರಮಾಣದಲ್ಲಿ ಬರು ತ್ತಿದ್ದಾರೆ. ರಾಜ್ಯಕ್ಕೆ ಬಾಂಗ್ಲಾ ದೇಶಿಗರು ಬರುತ್ತಿದ್ದಾರೆ ಎಂದು ಮೂರು ತಿಂಗಳ ಹಿಂದೆಯೇ ಮಾಹಿತಿ ಬಂದಿದೆ. ಆದರೂ ರಾಜ್ಯ ಸರ್ಕಾರ ಕಣ್ಮುಚ್ಚಿ ಕುಳಿತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಕ್ರಮ ನುಸುಳುಕೋರರು ರಾಜಾರೋಷವಾಗಿ ರಾಜ್ಯಕ್ಕೆ ಬರುತ್ತಿದ್ದರೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾತ್ರ ಆರ್‌ಎಸ್‌ಎಸ್ ನೋಂದಣಿ ಮಾಡಿ ಕೊಳ್ಳಲಿ, ಸಂಘದ ಲೆಕ್ಕ ಕೊಡಿ ಎನ್ನುವು ದಕಷ್ಟೇ ಸೀಮಿತರಾಗಿದ್ದಾರೆ. ಅಂತರಿಕ ಸುರಕ್ಷತೆ ಬಗ್ಗೆ ಗೃಹ ಸಚಿವರಿಗೆ ಮಾಹಿತಿಯೇ ಇಲ್ಲ. ಅಕ್ರಮ ಬಾಂಗ್ಲಾ ವಲಸಿಗರಿಗೆ ಕರ್ನಾಟಕದಲ್ಲಿ ನಮ್ಮ ಸರ್ಕಾರ ಇದೆ. ಅಲ್ಲಿಗೆ ಹೋದರೆ ನಾವು ಸುರಕ್ಷಿತ ಎನಿಸಿದೆ. ಅದಕ್ಕೆ ಈಗ ರಾಜ್ಯಕ್ಕೆ ಹೆಚ್ಚಾಗಿ ಬಾಂಗ್ಲಾದೇಶದವರು ಬರುತ್ತಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಅಕ್ರಮ ಬಾಂಗ್ಲಾ ವಲಸಿಗರಿಗೆ ತಮ್ಮದೇ ಸರ್ಕಾರ ಎನಿಸಿಬಿಟ್ಟಿದೆ. ಕರ್ನಾಟಕ, ಕೇರಳ, ತೆಲಂಗಾಣ ಈ ಮೂರು ರಾಜ್ಯಗಳು ಅಕ್ರಮ ಬಾಂಗ್ಲಾ ವಲಸಿಗರಿಗೆ ನೆಲೆ ಒದಗಿಸುತ್ತಿವೆ. ಜನರೇ ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕು. ಕೇವಲ 200, 300 ರೂ. ಕೂಲಿಗೆ ಇಂತಹ ಅಕ್ರಮ ಬಾಂಗ್ಲಾ ವಲಸಿಗರು ಸಿಗುತ್ತಾರೆ ಎಂದು ಜನ ಅವರನ್ನ ಕೆಲಸಕ್ಕೆ ಸೇರಿಸಿಕೊಳ್ಳಬಾರದು. ಈ ರಾಜ್ಯ ಸರ್ಕಾರದಿಂದ ಜನರ ಸುರಕ್ಷತೆ ಸಾಧ್ಯ ಇಲ್ಲ. ಜನರು ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಬೇಕು ಎಂದರು.

**ಜಾಗ ಹೊಡೆಯೋಕೆ ನಿಮಗೆ ರಿಜಿಸ್ಟರ್ ಬೇಕು!:** ಸಿದ್ಧಾರ್ಥ ಬುದ್ಧ ಟ್ರಸ್ಟ್ ಮಾಡಿಕೊಂಡು ಕೆಐಎಡಿಬಿ ಜಾಗ ಹೊಡೆ ಯೋಕೆ ನಿಮಗೆ ರಿಜಿಸ್ಟರ್ ಬೇಕು. ದೇಶದ ಕೆಲಸ ಮಾಡುವ ಆರ್‌ಎಸ್‌ಎಸ್‌ಗೆ ಯಾಕೆ ಬೇಕು ರಿಜಿಸ್ಟರ್. ಟ್ರಸ್ಟ್ ಹೆಸರಿನಲ್ಲಿ ಪ್ರಿಯಾಂಕ್ ಖರ್ಗೆ ಜಾಗ ಲೂಟಿ ಮಾಡಿದ್ದಾರೆ. ಆರ್‌ಎಸ್‌ಎಸ್ ಅದೇ ರೀತಿ ಅಂದು ಕೊಂಡಿದ್ದಾರೆ. ಹೀಗಾಗಿ ಆರ್‌ಎಸ್‌ಎಸ್ ಬಗ್ಗೆಯೇ ಜಪ ಮಾಡುತ್ತಿದ್ದಾರೆ. ಪ್ರಿಯಾಂಕ್ ಖರ್ಗೆಗೆ ಆರ್‌ಎಸ್‌ಎಸ್ ಬಿಟ್ಟು ಬೇರೆ ಏನೂ ಗೊತ್ತಿಲ್ಲ. ಗೃಹ ಸಚಿವರಾಗಿ ರಾಜ್ಯದ ಸುರಕ್ಷತೆಯ ಬಗ್ಗೆ ಮಾತನಾಡಿದ್ದಾರಾ?. ಇಂತಹ ಗೃಹ ಸಚಿವರು ಇರುವ ಕಾರಣಕ್ಕೆ ರಾಜ್ಯಕ್ಕೆ ಅಕ್ರಮ ಬಾಂಗ್ಲಾ ವಲಸಿಗರು ದಂಡು ದಂಡಾಗಿ ಬರುತ್ತಿದ್ದಾರೆ ಎಂದು ಕಿಡಿಕಾರಿದರು.

ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕರ ಆಣೆ ಪ್ರಮಾಣ ವಿಚಾರ ಕುರಿತು ಮಾತನಾಡಿದ ಅವರು, ಪಕ್ಷದ ಒಂದಿಬ್ಬರು ಶಾಸಕರು ಅಡ್ಡ ಮತದಾನ ಮಾಡಿರುವುದು ರಾಜ್ಯಾಧ್ಯಕ್ಷರು ಸೇರಿದಂತೆ ಎಲ್ಲರಿಗೂ ನೋವು, ಬೇಸರ ತರಿಸಿದೆ. ಈ ನೋವಿನಲ್ಲೇ ಅವರು ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಸುವ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಪಕ್ಷದ ಹಿರಿಯ ಮುಖಂಡರು ಸಲಹೆ ಕೊಟ್ಟಿದ್ದಾರೆ. ಆ ಸಲಹೆ ಆಧರಿಸಿ ತೀರ್ಮಾನ ಮಾಡುತ್ತಾರೆ. ಅದರ ಬಗ್ಗೆ ನನ್ನ ವೈಯುಕ್ತಿಕ ಅಭಿಪ್ರಾಯ ಏನು ಇಲ್ಲ ಎಂದು ಸ್ಪಷ್ಟಪಡಿಸಿದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ. 23– ಮೈಸೂರಿನ ಜೆ.ಪಿ.ನಗರದ ಕಾಮಾಕ್ಷಿ ಆಸ್ಪತ್ರೆ ವತಿಯಿಂದ ಪ್ರತಿ ತಿಂಗಳ 4ನೇ ಶನಿವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದೆ. ಶಿಬಿರವು ಜೂ. 27 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಹಾಗೂ ಮಧ್ಯಾಹ್ನ 3 ರಿಂದ ಸಂಜೆ 6 ರವರೆಗೆ ಕಾಮಾಕ್ಷಿ ಆಸ್ಪತ್ರೆ ಘಟಕ–2, ಜೆ.ಪಿ.ನಗರದಲ್ಲಿ ನಡೆಯಲಿದೆ. ಮಾಹಿತಿಗೆ ಮೊ. 97411 63680 ಸಂಪರ್ಕಿಸಬಹುದು.

## ಯುವಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ

### ಮೈಸೂರು ಜಿಲ್ಲಾ ಪ್ರಭಾರ ರಕ್ತ ಸುರಕ್ಷತಾ ಅಧಿಕಾರಿ ಮೊಹಮ್ಮದ್ ಶಿರಾಜ್ ಅಹಮದ್ ಕಿವಿಮಾತು




ಮೈಸೂರು, ಜೂ. 23– ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲದಿರುವುದರಿಂದ, ತುರ್ತು ಪರಿಸ್ಥಿತಿಯಲ್ಲಿರುವ ಜೀವಗಳನ್ನು ಉಳಿಸಲು ಯುವಜನರ ರಕ್ತದಾನ ಅತ್ಯಗತ್ಯವಾಗಿದೆ ಎಂದು ಮೈಸೂರು ಜಿಲ್ಲಾ ಪ್ರಭಾರ ರಕ್ತ ಸುರಕ್ಷತಾ ಅಧಿಕಾರಿಯಾದ ಡಾ. ಮೊಹಮ್ಮದ್ ಶಿರಾಜ್ ಅಹಮದ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಮೈಸೂರು ಜಿಲ್ಲೆಯಲ್ಲಿ ಪ್ರತಿ ತಿಂಗಳು 12000 ಯುನಿಟ್ ರಕ್ತದ ಅವಶ್ಯಕತೆ ಇದೆ. ಸುಮಾರು 15 ರಿಂದ 20 ಅಧೀಕೃತ ರಕ್ತಕೇಂದ್ರಗಳಿಂದ ರಕ್ತ ಸಂಗ್ರಹಣೆ ಹಾಗೂ ಸಾರ್ವಜನಿಕರಿಗೆ ರಕ್ತದಾನದ ಬಗ್ಗೆ ಅರಿವು ಮೂಡಿಸುತ್ತಿದ್ದರೂ ರಕ್ತದ ಕೊರತೆ ಉಂಟಾಗುತ್ತಿದೆ. ಅದರಲ್ಲೂ ಅಪರೂಪದ ಗುಂಪಿನ ರಕ್ತದ ಕೊರತೆ ತೀವ್ರವಾಗಿದೆ. ಆದ್ದರಿಂದ ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಬೇಕು. ಒಬ್ಬರು ಮಾಡುವ ಒಂದು ಯುನಿಟ್ ರಕ್ತದಾನವು ಮೂವರ ಜೀವಗಳನ್ನು ಉಳಿಸುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಕುಲಪತಿ ಡಾ. ಹೆಚ್.ಬಸವನಗೌಡಪ್ಪ, ಆಸ್ಪತ್ರೆಯು ಆಯೋಜಿಸಿದ್ದ ಪೋಸ್ಟರ್ ಪ್ರದರ್ಶನ, ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿ ಮಾತನಾಡುತ್ತ, ರಕ್ತ ದೇವರು ಕೊಟ್ಟ ಕೊಡುಗೆ ವಿಜ್ಞಾನ ಮತ್ತು ತಂತ್ರಜ್ಞಾನ ಎಷ್ಟು ಮುಂದುವರಿದಿದ್ದರೂ ಅದನ್ನು ಕೃತಕವಾಗಿ ಅಥವಾ ಕಾರ್ಖಾನೆಗಳಲ್ಲಿ ತಯಾರಿಸಲು ಸಾಧ್ಯವಾಗಿಲ್ಲ. ಅದಕ್ಕಾಗಿಯೇ ರಕ್ತದಾನವನ್ನು ಮಹಾದಾನ ಎಂದು ಕರೆಯಲಾಗುತ್ತದೆ. ಆದ್ದರಿಂದ ಆರೋಗ್ಯವಂತ ದಾನಿಗಳು ವರ್ಷದಲ್ಲಿ 3 ಬಾರಿ ರಕ್ತದಾನ ಮಾಡಬಹುದು ದಾನ ಮಾಡಿದ ರಕ್ತವು 2–3 ವಾರಗಳಲ್ಲಿ ಮತ್ತೆ ದೇಹದಲ್ಲಿ ಉತ್ಪತ್ತಿಯಾಗುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಡಿ. ನಾರಾಯಣಪ್ಪ, ಮಾತನಾಡಿ ವಿಶ್ವ ರಕ್ತದಾನಿಗಳ ದಿನವನ್ನು ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ. ಈ ವರ್ಷ 2026 ವಿಶ್ವ ರಕ್ತದಾನಿಗಳ ದಿನದ ಧ್ಯೇಯವಾಕ್ಯ ಮಾನವೀಯತೆಯ ಒಂದು ಹನಿ. ರಕ್ತ ನೀಡಿ. ಜೀವಗಳನ್ನು ಉಳಿಸಿ ಈ ವಿಷಯವು ಪ್ರತಿಯೊಂದು ರಕ್ತದಾನವು ಅನೇಕ ಜೀವಗಳನ್ನು ಉಳಿಸುವ ಕ್ರಿಯೆಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ. ಸಿ.ಪಿ. ಮಧು, ಮಾತನಾಡಿ ರಕ್ತದಾನವು ಶ್ರೇಷ್ಠದಾನವಾಗಿದ್ದು, ಪ್ರಮುಖ ಶಸ್ತ್ರಚಿಕಿತ್ಸೆಗಳಿಗೆ ರಕ್ತದ ಅವಶ್ಯಕತೆ ಇದ್ದು ಅದು ದಾನಿಗಳಿಂದ ಮಾತ್ರ ದೊರೆಯುತ್ತದೆ ನಿರಂತರ ರಕ್ತದಾನ ಮಾಡುವುದರ ಮುಖಾಂತರ ರಕ್ತದ ಬೇಡಿಕೆಯನ್ನು ತಗ್ಗಿಸಬಹುದು ಹಾಗೂ ಜೆಎಸ್‌ಎಸ್ ಆಸ್ಪತ್ರೆಯು ಮೈಸೂರಿನಲ್ಲೇ ಅತಿ ದೊಡ್ಡ ಅತ್ಯಾಧುನಿಕ ರಕ್ತಕೇಂದ್ರ ಹೊಂದಿದ್ದು ಯಾವುದೇ ರೋಗಿಗಳಿಗೆ ರಕ್ತದ ಕೊರತೆ ಇಲ್ಲದ ರೀತಿ ನಾವು ಚಿಕಿತ್ಸೆ ನೀಡುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ರಕ್ತಕೇಂದ್ರ ಅಧಿಕಾರಿ ಡಾ. ಪಲ್ಲವಿ ಪಿ, ಪ್ಯಾಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಆಶಾ ಎಂ, ಜೆಎಸ್‌ಎಸ್ ಕಾಲೇಜು ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಅಶ್ವತಿದೇವಿ.ಎಂ.ಕೆ, ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ಶ್ರೀಮತಿ ರೇಣುಕಾ ದೇವಿ.ಡಿ.ಎನ್ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು.

ಇದೇ ಸಂದರ್ಭದಲ್ಲಿ ನಿರಂತರವಾಗಿ 42 ಬಾರಿ ರಕ್ತದಾನ ಮಾಡಿರುವ ಅಶ್ವಿನ್ ಕುಮಾರ್, 10 ಬಾರಿ ರಕ್ತದಾನ ಮಾಡಿರುವ ಸೌರವ್ ಎಸ್.ಪಿ, 76 ಬಾರಿ ರಕ್ತದಾನ ಮಾಡಿರುವ ರಾಮಚಂದ್ರ, 40 ಬಾರಿ ಅಪರೂಪದ ಓ ನೆಗೆಟಿವ್ ರಕ್ತದಾನ ಮಾಡಿರುವ ಪ್ರಭು ಅವರನ್ನು ಸನ್ಮಾನಿಸಲಾಯಿತು.

# ಎಸ್‌ಐಆರ್ ನಿರ್ವಹಣೆಯಲ್ಲಿ ನಮಗೆ ಕೇರಳ ಮಾದರಿಯಾಗಬೇಕು

●ಕಾಂಗ್ರೆಸ್ ಕಾರ್ಯಕರ್ತರಿಗೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಸಲಹೆ ●ಮಮತಾ ಬ್ಯಾನರ್ಜಿ, ಸ್ಟಾಲಿನ್ ಸೋಲು ಪಾಠವಾಗಬೇಕು ●ಜೂ.28ರಂದು ಮೈಸೂರು ವಿಭಾಗೀಯ ಮತದಾರರ ಜಾಗೃತಾ ಸಮಾವೇಶ



ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ಶಾಸಕರು,ಮಾಜಿ ಶಾಸಕರು, ಹಿರಿಯ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡುತ್ತಿರುವುದು

ಮೈಸೂರು,ಜೂ.23(ಎಸ್‌ಪಿಎನ್)–ಎಸ್‌ಐಆರ್ (ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ) ನಿರ್ವಹಣೆಯಲ್ಲಿ ಪಕ್ಕದ ಕೇರಳಂ ರಾಜ್ಯ ನಮಗೆ ಮಾದರಿಯಾಗಬೇಕು. ಇಲ್ಲದಿದ್ದರೆ, ಒಳ್ಳೆಯ ಆಡಳಿತ ನೀಡಿಯೂ ಮುಂದಿನ ಚುನಾವಣೆಯಲ್ಲಿ ಸೋಲುವ ಸಾಧ್ಯತೆ ಇದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ಶಾಸಕರು,ಮಾಜಿ ಶಾಸಕರು, ಹಿರಿಯ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಎಸ್‌ಐಆರ್ ಆರಂಭವಾಗುತ್ತಿದೆ. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಬೂತ್ ಲೆವೆಲ್ ಏಜೆಂಟ್‌ಗಳು ಸಕ್ರಿಯವಾಗಿರಲು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸೂಕ್ತ ನಿರ್ವಹಣೆ ಮಾಡಬೇಕು. ಹಾಗಾಗಿ ಬಿಎಲ್‌ಎ–2 ಆಯ್ಕೆ ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿದ ಸಚಿವರು, ಮಾಜಿ ಸಚಿವ ತನ್ವೀರ್‌ಸೇಠ್ ಅವರು, ಈಗಾಗಲೇ 2 ಸಾವಿರ ಬಿಎಲ್‌ಎ 2 ನೇಮಕವಾಗಿರುವ ಕುರಿತು ಮಾಹಿತಿ ನೀಡಿದ್ದಾರೆ. ಇನ್ನೂ 500 ಮಂದಿ ಬಿಎಲ್‌ಎ 2 ನೇಮಕಾತಿ ಮಾಡುವಂತೆ ಜಿಲ್ಲಾಧ್ಯಕ್ಷರಿಗೆ ಸೂಚಿಸಿದರು.

ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಒರಿಸ್ಸಾ ರಾಜ್ಯದಲ್ಲಿ ಎಸ್‌ಐಆರ್ ನಡೆದಿರುವುದರಿಂದ ಕೆಲವೆಡೆ ಬಿಜೆಪಿ ಸರ್ಕಾರ ಬರಲು ಕಾರಣವಾಗಿದೆ. ಆದರೆ, ಪಕ್ಕದ ಕೇರಳಂನಲ್ಲಿ ಎಸ್‌ಐಆರ್ ನಡೆದರೂ ಅಲ್ಲಿನ ಕಾರ್ಯಕರ್ತರು ಎಚ್ಚರಿಕೆ ವಹಿಸಿದ ಪರಿಣಾಮ ಅಲ್ಲಿ ಕೇಂದ್ರ ಹುನ್ನಾರ ಯಶಸ್ವಿಯಾಗಿಲ್ಲ ಎಂದು ವಾಗ್ದಾಳಿ ನಡೆಸಿದರು.

**ಮಮತಾ, ಸ್ಟಾಲಿನ್ ಸೋಲು ಪಾಠವಾಗಬೇಕು:** ಪಶ್ಚಿಮ ಬಂಗಾಳದ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರು, ಕೇವಲ 15 ಸಾವಿರ ಮತಗಳ ಅಂತರದಿಂದ ಸೋತಿದ್ದಾರೆ. ತಮಿಳುನಾಡಿನ ಮಾಜಿ ಸಿಎಂ ಸ್ಟಾಲಿನ್, ಕೆಲವೇ ಮತಗಳ ಅಂತರದಿಂದ ಸೋತಿದ್ದಾರೆ. ಈಗಾಗಲೇ ಚುನಾವಣಾ ಆಯೋಗ ಎಲ್ಲಾ ರಾಜ್ಯಗಳಲ್ಲೂ ಮತದಾರರ ಪಟ್ಟಿ ಪರಿಷ್ಕರಣೆ ಮುಂದಾಗುತ್ತಿದೆ. ಇದರ ಬಗ್ಗೆ ಹಳ್ಳಿಹಳ್ಳಿಗಳಿಗೂ ತೆರಳಿ ಈ ಕುರಿತು ಮತದಾರರಿಗೆ ಮಾಹಿತಿ ನೀಡುವಂತೆ ಒತ್ತಾಯಿಸಿದರು.

ಮಮತಾ ಬ್ಯಾನರ್ಜಿ ಅವರು ಭವಾನಿಪುರ ಕ್ಷೇತ್ರದಿಂದ ಸ್ಪರ್ಧಿಸಿ, 15 ಸಾವಿರ ಮತಗಳ ಅಂತರದಿಂದ ಸೋತಿದ್ದಾರೆ. ಆ ಕ್ಷೇತ್ರದಲ್ಲಿ 45 ಸಾವಿರಕ್ಕೂ ಹೆಚ್ಚು ಮತದಾರರ ಹೆಸರನ್ನು ತೆಗೆದು ಹಾಕಲಾಗಿದೆ. ಹಾಗಾಗಿ ಮಮತಾ ಬ್ಯಾನರ್ಜಿ ಕಡಿಮೆ ಅಂತರದಿಂದ ಸೋತಿರುವುದು ಬೇಸರದ ಸಂಗತಿ. ಈ ವಿಚಾರದಲ್ಲಿ ಪಕ್ಕದ ಕೇರಳಂನಲ್ಲಿ ಎಸ್‌ಐಆರ್‌ಗೆ ಜನ ಉತ್ತಮವಾಗಿ ಪ್ರತಿಕ್ರಿಯಿಸಿದ್ದಾರೆ. ಇದೇ ಮಾದರಿ ಯಲ್ಲೇ ಕರ್ನಾಟಕದಲ್ಲಿ ಎಸ್‌ಐಆರ್ ಜಾರಿಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಮತದಾರರಿಗೆ ಉತ್ತಮ ಯೋಜನೆಗಳನ್ನು ಕೊಟ್ಟ ಮೇಲೂ ನಾವು ಸೋಲುತ್ತೇವೆ ಎಂದರೆ ಅದಕ್ಕಿಂತ ಕಪ್ಪು ಚುಕ್ಕೆ ಮತ್ತೊಂದಿಲ್ಲ. ಹಾಗಾಗಿ ಪಕ್ಷದಲ್ಲಿ ಯಾವುದೇ ಗೊಂದಲವಿದ್ದರೂ ಎಸ್‌ಆರ್‌ಐ ವಿಚಾರದಲ್ಲಿ ಸರ್ಕಾರ ನಿಗಾವಹಿಸಬೇಕು. ಇದಕ್ಕೆ ಪಕ್ಷದ ಕಾರ್ಯಕರ್ತರೂ ನೆರವು ನೀಡಬೇಕು ಎಂದು ಕಿವಿಮಾತು ಹೇಳಿದರು.

**ಜೂ.28ರಂದು ಮತದಾರರ ಜಾಗೃತಾ ಸಮಾವೇಶ:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ಜೂ.28ರಂದು ಜೆ.ಕೆ.ಮೈದಾನದಲ್ಲಿ ಮತದಾರರ ಜಾಗೃತಿಗೊಳಿಸಲು ಮೈಸೂರು ವಿಭಾಗೀಯ ಸಮಾವೇಶವನ್ನು ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿವತಿಯಿಂದ ಹಮ್ಮಿಕೊಳ್ಳಲಾಗಿದೆ. ಈ ಸಮಾವೇಶಕ್ಕೆ ಮೈಸೂರು ನಗರ ಮತ್ತು ಗ್ರಾಮಾಂತರ, ಹಾಸನ, ಕೊಡಗು, ಮಂಡ್ಯ, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳ 10 ಸಾವಿರಕ್ಕೂ ಹೆಚ್ಚು ಮಂದಿ ಬೂತ್ ಲೆವೆಲ್ ಏಜೆಂಟ್(ಬಿಎಲ್‌ಎ2)ಗಳು ಭಾಗವಹಿಸಲಿದ್ದಾರೆ.

ಸೋಷಿಯಲ್ ಮೀಡಿಯಾದಲ್ಲಿ ಬಿಜೆಪಿ ವಿರುದ್ಧ ಪೋಸ್ಟ್ ಹಾಕುವವರ ವಿರುದ್ಧ ಮಾಹಿತಿ ಪಡೆದು ಡಿಲೀಟ್ ಮಾಡಿಸುತ್ತಿದ್ದಾರೆ ಹಾಗೂ ಪೊಲೀಸ್ ಠಾಣೆಯಲ್ಲೂ ಕೇಸು ದಾಖಲಿಸುತ್ತಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಮೆಸೇಜ್ ಹಾಕುವವರ ಮಾಹಿತಿಯನ್ನು ಚುನಾವಣಾ ಆಯೋಗ, ಮಾಹಿತಿ ಕೇಳುತ್ತಿದೆ ಎಂದರು.

ಮಾಜಿ ಸಚಿವ ತನ್ವೀರ್ ಸೇಠ್, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು ಉಸ್ತುವಾರಿ ಆರ್. ವಿ.ವೆಂಕಟೇಶ್, ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ್, ಶಾಸಕರಾದ ಅನಿಲ್ ಚಿಕ್ಕಮಾದು, ಕೆ.ಹರೀಶ್‌ಕುಮಾರ್, ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಆರ್.ನರೇಂದ್ರ, ಕಳಲೆ ಕೇಶವ ಮೂರ್ತಿ, ಜಿಪಂ ಮಾಜಿ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಸೇರಿದಂತೆ ಇತರೆ ಮುಖಂಡರು ಹಾಜರಿದ್ದರು.

# ಮಲಯಾಳಂ ನಟ ಮಮ್ಮುಟ್ಟಿ, ಅಮೃತ್‌ರಾಜ್‌ಗೆ ಪದ್ಮ ಪ್ರಶಸ್ತಿ ಪ್ರದಾನ



**ನವದೆಹಲಿ:** ಟೆನಿಸ್ ದಂತಕಥೆ ವಿಜಯ್ ಅಮೃತ್‌ರಾಜ್, ಮಲಯಾಳಂ ನಟ ಮಮ್ಮುಟ್ಟಿ ಖ್ಯಾತ ಹಿನ್ನೆಲೆ ಗಾಯಕಿ ಅಲ್ಕಾ ಯಾಜ್ನಿಕ್ ಸೇರಿದಂತೆ 65 ಗಣ್ಯರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳ ವಾರ ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದ್ದಾರೆ.

ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ನಡೆದ ನಾಗರಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೇರಳಂನ ಕೆ.ಟಿ ಥಾಮಸ್ (ಸಾರ್ವಜನಿಕ ವ್ಯವಹಾರ), ಹಿರಿಯ ಪತ್ರಕರ್ತ ಕೇರಳಂನ ಪಿ.ನಾರಾಯಣನ್ (ಸಾಹಿತ್ಯ ಮತ್ತು ಶಿಕ್ಷಣ) ಅವರಿಗೆ 'ಪದ್ಮವಿಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದೇ ಸಮಾರಂಭದಲ್ಲಿ ಮಮ್ಮುಟ್ಟಿ, ಅಲ್ಕಾ ಯಾಜ್ನಿಕ್, ಅಮೆರಿಕದ ಪ್ರಖ್ಯಾತ ಕ್ಯಾನ್ಸರ್ ತಜ್ಞ (ಆಂಕೊಲಾಜಿಸ್ಟ್) ದತ್ತಾತ್ರೇಯುಡು ನೋರಿ, ಟೆನಿಸ್ ಆಟಗಾರ ವಿಜಯ್ ಅಮೃತ್ ರಾಜ್, ಉದ್ಯಮಿ ಎಸ್.ಕೆ.ಎಂ. ಮೈಲಾನಂದನ್ ಮತ್ತು ಸಾಮಾಜಿಕ ಕಾರ್ಯಕರ್ತ ಹಾಗೂ ಶಿಕ್ಷಣ ತಜ್ಞ ವೆಲ್ಲಪಳ್ಳಿ ನಟೇಶನ್ ಅವರು ಮುರ್ಮು ಅವರಿಂದ 'ಪದ್ಮಭೂಷಣ' ಪ್ರಶಸ್ತಿ ಸ್ವೀಕರಿಸಿದ್ದಾರೆ.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಹಾಗೂ ಬಾಲಿವುಡ್ ನಟ ಆರ್.ಮಾಧವನ್‌ಗೆ ಪದ್ಮಶ್ರೀ ನೀಡಿ ಗೌರವಿಸಲಾಯಿತು.

ಜೆಎಂಎಂ ಸ್ಥಾಪಕ ಮತ್ತು ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಶಿಬು ಸೋರೇನ್ ಅವರ ಪರವಾಗಿ ಅವರ ಪತ್ನಿ ರೂಪಿ ಸೋರೇನ್ ಅವರು ಪದ್ಮಭೂಷಣ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಗಣರಾಜ್ಯೋತ್ಸವದ ಮುನ್ನಾದಿನದಂದು ಕೇಂದ್ರ ಸರ್ಕಾರವು ಪದ್ಮವಿಭೂಷಣ ಸೇರಿದಂತೆ 2026ನೇ ಸಾಲಿನ ಒಟ್ಟು 131 ಪದ್ಮ ಪ್ರಶಸ್ತಿಗಳನ್ನು ಘೋಷಿಸಿತ್ತು.

ಮೇ 25ರಂದು ನಡೆದ ಮೊದಲ ನಾಗರಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುರ್ಮು ಅವರು ಎರಡು ಪದ್ಮವಿಭೂಷಣ, ಆರು ಪದ್ಮಭೂಷಣ ಮತ್ತು 57 ಪದ್ಮಶ್ರೀ ಸೇರಿದಂತೆ ಒಟ್ಟು 65 ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದ್ದರು.

ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮ ಪ್ರಶಸ್ತಿಗಳನ್ನು ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಎಂಬ ಮೂರು ವಿಭಾಗಗಳಲ್ಲಿ ನೀಡಲಾಗುತ್ತದೆ.

ಈ ಬಾರಿ ಪ್ರಶಸ್ತಿ ಪುರಸ್ಕೃತರಲ್ಲಿ 19 ಮಹಿಳೆಯರು ಮತ್ತು ಆರು ಮಂದಿ ಅನಿವಾಸಿ ಭಾರತೀಯರು ಸೇರಿದ್ದಾರೆ. 16 ಮಂದಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ. ಹಲವಾರು ಬುಡಕಟ್ಟು ಜನಾಂಗದವರು, ಸಾಂಪ್ರದಾಯಿಕ ಔಷಧಿ ನೀಡುವವರು, ಕಲಾ ಸಾಧಕರು ಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

## ಕರ್ನಾಟಕದ ಐವರು ಸಾಧಕರಿಗೂ ಗೌರವ



ಪ್ರಭಾಕರ್ | ಶಶಿಶೇಖರ್ | ಡಾ.ಸುರೇಶ್ | ಡಾ. ಶುಭಾ | ಜಗನ್ನಾಥನ್

**ಬೆಂಗಳೂರು:** ಕರ್ನಾಟಕದ ಐವರು ಸಾಧಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪದ್ಮ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ಕೆಎಲ್‌ಇ ಸಂಸ್ಥೆಯ ಮೂಲಕ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಶಿಕ್ಷಣ ಮತ್ತು ಆಸ್ಪತ್ರೆಗಳ ಮೂಲಕ ಬಡವರಿಗೆ ಅತ್ಯಾಧುನಿಕ ಉಚಿತ/ಕಡಿಮೆ ವೆಚ್ಚದ ವೈದ್ಯಕೀಯ ಸೇವೆ ನೀಡುತ್ತಿರುವ ಮಹಾದಾನಿ ಡಾ. ಪ್ರಭಾಕರ್ ಕೋರೆ.

ದೂರದರ್ಶನ ಮತ್ತು ಆಕಾಶವಾಣಿಯನ್ನು ಸಂಪೂರ್ಣವಾಗಿ ನವೀಕರಿಸಿ, ಕೋವಿಡ್ ಸಮಯದಲ್ಲಿ 'ರಾಮಾಯಣ' ಪ್ರಸಾರದ ಮೂಲಕ ಜಾಗತಿಕ ದಾಖಲೆ ಬರೆದ ಹಾಗೂ ಕೋಟ್ಯಂತರ ವಿದ್ಯಾರ್ಥಿಗಳಿಗೆ ಉಚಿತ ಟಿವಿ ಶಿಕ್ಷಣ ತಲುಪಿಸಿದ ತಂತ್ರಜ್ಞ ಶಶಿ ಶೇಖರ್ ವೇಂಪತಿ.

ಸ್ವತಃ ತೀವ್ರ ಕಾಯಿಲೆಯಿಂದ ಬಳಲುತ್ತಿದ್ದರೂ ಅದನ್ನು ಮೆಟ್ಟಿ ನಿಂತು, ದೇಶದಲ್ಲೇ ಮೊದಲ ಬಾರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹಿಮೋಫಿಲಿಯಾ ರೋಗಿಗಳಿಗೆ ಉಚಿತ ಚಿಕಿತ್ಸೆ ಸಿಗುವಂತೆ ಮಾಡಿದ ಕ್ರಾಂತಿಕಾರಿ ವೈದ್ಯ ಡಾ. ಸುರೇಶ್ ಹನಗವಾಡಿ.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕಡ್ಡಾಯವಾಗಿರುವ 'ದೃಷ್ಟಿ' ವ್ಯವಸ್ಥೆಯನ್ನು ಆವಿಷ್ಕರಿಸಿ, 'ಅಗ್ನಿ' ಕ್ಷಿಪಣಿಯ ತಾಂತ್ರಿಕ ದೋಷ ನಿವಾರಿಸಿ ಭಾರತೀಯ ರಕ್ಷಣಾ ವಲಯವನ್ನು ಸ್ವಾವಲಂಬಿಯಾಗಿಸಿದ ವಿಜ್ಞಾನಿ ಡಾ. ಶುಭಾ ವೆಂಕಟೇಶ್ ಅಯ್ಯಂಗಾರ್.

ಪ್ರೆಸ್ಟೀಜ್ ಸಂಸ್ಥೆಯನ್ನು ಬಿಲಿಯನ್ ಡಾಲರ್ ಉದ್ಯಮವಾಗಿ ಬೆಳೆಸಿ, ಕುಕ್ಕರ್ ಅಪಘಾತ ತಡೆಯುವ ಆವಿಷ್ಕಾರದ ಪೇಟೆಂಟ್ ಹಕ್ಕನ್ನು ದೇಶದ ಜನರ ಜೀವ ರಕ್ಷಣೆಗಾಗಿ ಇಡೀ ಉದ್ಯಮಕ್ಕೆ ಉಚಿತವಾಗಿ ಬಿಟ್ಟುಕೊಟ್ಟ ಉದಾರ ಉದ್ಯಮಿ ಟಿ.ಟಿ. ಜಗನ್ನಾಥನ್. ಇವರಿಗೆ ಮರಣೋತ್ತರ ಪ್ರಶಸ್ತಿ ಪ್ರದಾನ ಮಾಡಲಾಯಿತು.



PUBLIC NOTICE

My client intends to purchase the house property bearing number 2594/1 K 4/1, property number as per form II 6-2-551-186, situated at 5th cross, Hosa bandikeri, Mysore (Herein after Schedule Property) from Smt. Shivamma, W/o Late. Srinivas, Ravi, Shubha.S, Madhusudhan, Indushree, childrens of Late. Srinivas, and Gayatri R, W/o Late. Narayana, and Vinay N, Vinutha N childrens of Late. Narayana, and Smt. Shivamma, W/o Late. Venkatesh, and M V Anitha, Bhagya V. childrens of Late. Venkatesh and S Manjula. Originally the Schedule Property was purchased by Late. Gundamma, W/o Late. Hanumanthaiah under a registered sale deed dated: 6-11-1978 from T Veerebhadraiah and others and the same was registered as document number 2037 at pages 51-55 in volume number 3143 before the Sub registrar, Head quarters, Mysore. Smt. Gundamma died intesate on 29-12-2000 leaving behind her childrens i.e., Late. Narayana, Late. Venkatesh and Late. Srinivas as the heirs to succed entire estate owned and possessed by her. Subsequently, the Khatha was mutated in the joint names of wife and childrens of Late. Narayana, Late. Venkatesh, Late. Srinivas. Hence this notice if any person/s, or the family members of Late. Venkatesh, Late. Narayana, Late. Srinivas and any other family members of Late. Gundamma other than the above mentioned or heirs, anybody claiming any sort of right, title, interest, charges or claims or any suit, or Agreement holders, or Financial institutions, or petition/suit is pending on the above mentioned Schedule property of any kind whatsoever nature over the "Schedule Property" please do notify the same to the under signed within Seven days from the date of this public notice, attaching all the relevant documents substantiating such right and claims. If, no such objections are received within Seven days, my client will proceed to purchase the below mentioned property. After the expiry of the said Seven days notice period, my client shall be at liberty not to entertain any complaint or claims.

**Schedule Property**

All that is part and parcel of a house property bearing No. 2594/1 K4/1, Property number as per form II 6-2-551-186, Ward number 6, situated at 5th cross, Hosabandikeri, K.R. Mohalla, Mysore site measuring East to West 5.181610 meter and North to South 12.801626 meter constructed thereon Ground floor building to an extent of 46.4515 sq meters, with Mangalore tiled roof and red oxide, and the property is bounded on East by Private property, West by Private property, North by Road, South by Road.

Sd/- **SUBRAMANYA J**
Advocate, No. 890/4, I Floor, I Main, Lakshmipuram, Mysore -570 004,
Ph No: 9844154581
Email: advocate.subramanya@gmail.com

ಮೈಸೂರು ಮಿತ್ರ 47
**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

सीएसबी - केन्द्रीय रेशम उत्पादन अनुसंधान एवं प्रशिक्षण संस्थान
**CSB - Central Sericultural Research & Training Institute**
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008
संख्या/ सीएसबी/आरटीआई/मल पैथो./2026-27/ दि:Date:23/06/2026

**WALK-IN-INTERVIEW FOR THE POST OF PROJECT ASSISTANT**

A Walk-in-Interview will be held on 09.07.2026 at CSB-Central Sericultural Research and Training Institute, Srirampura, Mysuru – 570 008 as shown below:

'A'01(One) Project "Toxicological evaluation of sericin, fibroin, pupae powder and chitosan extract from organic cocoon of silkworm Bombyx mori in animal model" (Code: BPS01056SNC) for a period Up to October 2026 or completion of project whichever is earlier under CSB Terms and Conditions.

**Qualifications for Project Assistant (PA):**
i). B.Sc in Agriculture/ Life Science/ Chemical Science with a minimum of 55% marks (50% for SC/ST candidates).

**Desirable qualifications:**
i. Preference will be given to the candidates having higher qualifications and/ or work experience in Soil Science/ Chemistry/ Bio chemistry

Walk - in- Interview time 10:30 AM (candidates should reach the venue by 9:30 AM for verification of documents, other recruitment procedures).

**Interested can also visit our website www.csrtimys.res.in, https://csb.gov.in/ for details.**

Director
CSB-CSRTI, Mysuru

**NIE FIRST GRADE COLLEGE**
Managed by NIE Society (Regd.)
Affiliated to University of Mysore
#65, Vishveshwaranagar, Mysuru - 570 008

**APPOINTMENT NOTIFICATION**

Applications are invited from eligible candidates for the post of **Assistant Professor** in the departments of **Physics, Commerce, English & Sanskrit** on a purely contractual basis.

Candidates applying for the post of Assistant Professor must possess a Postgraduate Degree in the relevant subject with a minimum of 55% marks, along with NET/SLET qualification or a Ph.D. in the concerned subject, in accordance with the applicable UGC Regulations.

**Non-Teaching Staff:**

**Office Superintendent:** Master Degree with minimum experience of 10 years as First Division Assistant.

**Accountant:** Candidate having minimum 3 years of accounting experience in a reputed institution.

Interested candidates may send their Curriculum Vitae (CV) along with copies of relevant certificates to **principal@niefgc.ac.in within 7 days** from the date of publication of this advertisement.

**For Further Details Contact: 95353 76164, 0821-248 9676.**

Sd/- Principal | Sd/- Hon. Secretary